ನೀನಾಸಮ್ ರಂಗಶಿಕ್ಷಣ ಕೇಂದ್ರ,
ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭
ಡಿಪ್ಲೋಮಾ ಇನ್ ಥಿಯೇಟರ್ ಆರ್ಟ್ಸ್

## ಪ್ರಕಟಣೆ

ಕರ್ನಾಟಕ ರಾಜ್ಯ ಸರ್ಕಾರದ ಮಾನ್ಯತೆ ಪಡೆದಿರುವ ನೀನಾಸಮ್ ರಂಗಶಿಕ್ಷಣ ಕೇಂದ್ರ ೨೦೦೧-೨೦೦೨ನೇ ಸಾಲಿನ ಪ್ರಶಿಕ್ಷಣಕ್ಕೆ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ. ಪ್ರವೇಶಕ್ಕೆ ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಇರಬೇಕು. ಪದವೀಧರರಿಗೆ ಆದ್ಯತೆ ಇರುತ್ತದೆ. ರಂಗಭೂಮಿಯಲ್ಲಿ ಆಸಕ್ತಿಯಿದ್ದು, ಸ್ವಲ್ಪಮಟ್ಟಿನ ಅನುಭವ ಇರಬೇಕಾದ್ದು ಅಗತ್ಯ. ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಊಟ, ವಸತಿ ವ್ಯವಸ್ಥೆಯಿದೆ. ಎಲ್ಲರಿಗೂ ವಿದ್ಯಾರ್ಥಿವೇತನ ದೊರೆಯುತ್ತದೆ.

ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ರಂಗಕಲ್ಪನೆ, ರಂಗಇತಿಹಾಸ, ನಾಟಕ ಇತಿಹಾಸ, ರಂಗನಟನೆ, ರಂಗಸಿದ್ಧತೆ, ರಂಗವ್ಯವಸ್ಥೆ ಮುಂತಾಗಿ ವಿಸ್ತಾರವಾದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಶಿಕ್ಷಣ ನೀಡಲಾಗುತ್ತದೆ. ಕೇಂದ್ರದ ನುರಿತ ಅಧ್ಯಾಪಕರುಗಳಲ್ಲದೆ ಹೊರಗಿನ ತಜ್ಞರನ್ನು ಕರೆಸಿ ಸಾಕಷ್ಟು ಪ್ರಬುದ್ಧ ಶಿಕ್ಷಣ ಕೊಡಲಾಗುತ್ತದೆ. ಒಳ್ಳೆಯ ಗ್ರಂಥಭಂಡಾರ ಹಾಗೂ ದೃಶ್ಯಶ್ರವ್ಯ ಪರಿಕರಗಳ ಅನುಕೂಲತೆಯಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರತಿದಿನ ಸುಮಾರು ೧೨ ಗಂಟೆಗಳಷ್ಟು ಅಭ್ಯಾಸದಲ್ಲಿ ತೊಡಗಿರಬೇಕಾಗುತ್ತದೆ.

ಪ್ರಾಸ್ಪೆಕ್ಟಸ್ ಮತ್ತು ಪ್ರವೇಶ ಪತ್ರಕ್ಕೆ ರೂ. ೫೦-೦೦ ಕಳಿಸಿ ಬರೆದುಕೊಳ್ಳಬಹುದು. ಪ್ರವೇಶ ಪತ್ರವನ್ನು ಭರ್ತಿಮಾಡಿ ೨೪-೬-೨೦೦೧ ಭಾನುವಾರದ ಒಳಗೆ ನೀನಾಸಮ್ ರಂಗಶಿಕ್ಷಣ ಕೇಂದ್ರ, ಹೆಗ್ಗೋಡು, ಸಾಗರ, ಶಿವಮೊಗ್ಗ ೫೭೭ ೪೧೭. ಈ ವಿಳಾಸಕ್ಕೆ ತಲುಪುವಂತೆ ಕಳಿಸಬೇಕು. ದಿನಾಂಕ ೧-೭-೨೦೦೧ ಭಾನುವಾರ ಬೆಳಿಗ್ಗೆ ೯ ಗಂಟೆಗೆ ಅಭ್ಯರ್ಥಿಗಳು ತಮ್ಮ ವೆಚ್ಚದಲ್ಲೇ ಆಯ್ಕೆಯ ಸಂದರ್ಶನಕ್ಕಾಗಿ ಹೆಗ್ಗೋಡಿಗೆ ಬಂದು ಹಾಜರಾಗಬೇಕು. ಸಂದರ್ಶನಕ್ಕೆ ಪ್ರತ್ಯೇಕ ಕರೆಯೋಲೆ ಕಳಿಸುವುದಿಲ್ಲ.

ಹೆಗ್ಗೋಡು — ಪ್ರಾಂಶುಪಾಲರು
೧೫-೩-೨೦೦೧ — ನೀನಾಸಮ್ ರಂಗಶಿಕ್ಷಣ ಕೇಂದ್ರ

# ಗಾಂಧೀಯ ಆರ್ಥಿಕ ತತ್ವಶಾಸ್ತ್ರದ ಪ್ರಸ್ತುತತೆ

ಟಿ.ಎಸ್. ರಾಘವೇಂದ್ರ

ಮಹಾತ್ಮ ಎಂದೂ ತಮ್ಮನ್ನು ಒಬ್ಬ ಅರ್ಥಶಾಸ್ತ್ರಜ್ಞ ಎಂದು ಗುರುತಿಸಿಕೊಳ್ಳಲಿಲ್ಲ. ಇವರ ಕಾಳಜಿಯು ಪ್ರಮುಖವಾಗಿ ನೈತಿಕ, ರಾಜಕೀಯ ಮತ್ತು ಧಾರ್ಮಿಕ ಮೂಸೆಯಲ್ಲಿ ಎರಕ ಹೊಯ್ದದ್ದಾಗಿದೆ. ಸಾಂಪ್ರದಾಯಿಕವಲ್ಲದ ಗಾಂಧೀಯ ಆರ್ಥಿಕ ಚಿಂತನೆ ರೂಪುಗೊಳ್ಳಲು ಹಿಂದೂಧರ್ಮ, ಬಂಡವಾಳಶಾಹಿ ತತ್ವ ಮತ್ತು ಕ್ಲಾಸಿಕಲ್ ಅರ್ಥಶಾಸ್ತ್ರದ ಕಟು ವಿಮರ್ಶಕ ಜಾನ್ ರಸ್ಕಿನ್ ಪ್ರಭಾವ ತೀವ್ರವಾಗಿದೆ. ಇದೆಲ್ಲಕ್ಕಿಂತ ಪ್ರಮುಖವಾಗಿ ಗಾಂಧಿ ಬ್ರಿಟಿಷ್ ಸಾಮ್ರಾಜ್ಯ ವ್ಯವಸ್ಥೆಯೊಳಗಿನ ಪ್ರಯೋಗ ಶಾಲೆಯಾದ ಭಾರತವನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸುವುದರ ಮೂಲಕ ತಮ್ಮ ಚಿಂತನೆಯನ್ನು ಹರಿತಗೊಳಿಸಿಕೊಂಡರು. ಆಧ್ಯಾತ್ಮ ಹಾಗೂ ನೀತಿಶಾಸ್ತ್ರ ಗಾಂಧಿಯವರಿಗೆ ಆರ್ಥಿಕ ಚಿಂತನೆಯಲ್ಲಿನ ಧಾರ್ಮಿಕ ಮೂಲಗಳನ್ನು ಶೋಧಿಸುವ ನಿರ್ದಿಷ್ಟ ಆಸಕ್ತಿಯ ಕ್ಷೇತ್ರಗಳು. ಇದರಿಂದಾಗಿಯೆ ಗಾಂಧಿ ಭಾರತದ ಎಲ್ಲ ಪ್ರದೇಶಗಳ ಹಿಂದೂಗಳನ್ನು, ಎಲ್ಲಾ ಜಾತಿಯವರನ್ನೂ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸುವಂತೆ ಮಾಡುವಲ್ಲಿ ಶಕ್ತರಾದದ್ದು. ತಮ್ಮ ಅನುಚರರಲ್ಲಿ ಧರ್ಮದಂತಹ ಪರಿಕಲ್ಪನೆಗಳನ್ನು ಪರಿಣಾಮಕಾರಿಯಾಗಿ ನೆನಪಿಸುತ್ತಿದ್ದರು.

### ಹಿಂದೂ ಧರ್ಮದ ಪ್ರಭಾವ:

ಹಿಂದೂ ಧರ್ಮದ ಬಹುನೈತಿಕ ಫಲಪ್ರದ ರೂಪಗಳು ಧರ್ಮ ಮತ್ತು ಮೋಕ್ಷಗಳ ಸಂಯೋಗದಿಂದ, ಅಂದರೆ ಎರಡೂ ಮಾರ್ಗದರ್ಶಿ ಸೂತ್ರಗಳನ್ನು ಏಕಕಾಲದಲ್ಲಿಯೇ ಗೌರವಿಸಿ ಉತ್ತಮ ಜೀವನವನ್ನು ವ್ಯಾಖ್ಯಾನಿಸುವುದರ ಮೂಲಕ ಹೊಮ್ಮಿವೆ. ಧರ್ಮ ಮತ್ತು ಮೋಕ್ಷಗಳಿಗೆ ಬದ್ಧನಾದವನು ಸ್ವಾರ್ಥಸಾಧನೆಗೆ ಇದನ್ನು ಬಳಸುವುದಿಲ್ಲ. ಕೆಲಸಗಾರರನ್ನು ಕೂಲಿಗೆ ತೆಗೆದುಕೊಳ್ಳುವುದಲ್ಲ, ಆದರೆ ಅವರಿಗೆ ಉದ್ಯೋಗವನ್ನು ಒದಗಿಸುವುದು; ವಸ್ತುಗಳನ್ನು ಮಾರುವುದಲ್ಲ, ಆದರೆ ಆವಶ್ಯಕತೆಗಳನ್ನು ಪೂರೈಸುವುದು – ಈ ರೀತಿ ವ್ಯಕ್ತಿ ತನ್ನ ಕ್ರಿಯೆಗಳಿಗೆ ರೂಪ ಕೊಟ್ಟುಕೊಳ್ಳುತ್ತಾನೆ.

ಧರ್ಮ ಮತ್ತು ಮೋಕ್ಷಗಳ ನಡುವಿನ ಇಂತಹ ಹೊಂದಾಣಿಕೆಯನ್ನು ಗಾಂಧಿ ತಮ್ಮ ಸ್ವಂತ ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸಿದರು ಮತ್ತು ಅವರು ಪ್ರತಿಪಾದಿಸಿದ ಆರ್ಥಿಕ ಧೋರಣೆಯ ಹೆಚ್ಚಿನ ಅಂಶಗಳಿಗೆ ಇದು ತಳಹದಿಯನ್ನು ಒದಗಿಸಿತು. ಕರ್ತವ್ಯಕ್ಕೆ ಸಮರ್ಪಣೆ ಮತ್ತು ನಿಸ್ವಾರ್ಥದ ಜೋಡಣೆ, ಇವುಗಳನ್ನು ಸಾರ್ವತ್ರಿಕವಾಗಿ ಕೃತಿಗಿಳಿಸಿದರೆ, ಆರ್ಥಿಕ ವ್ಯವಸ್ಥೆಗೆ ಫಲದಾಯಕ ನೆಲೆಯನ್ನು ಒದಗಿಸಿದಂತಾಗುತ್ತದೆ. ಆದರೆ ಸಾಂಪ್ರದಾಯಿಕ ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರ ಪ್ರಕಾರ ಜನರು ಸ್ವಭಾವತಃ ಸ್ವಾರ್ಥಿಗಳು ಮತ್ತು ಸಂಗ್ರಹಶೀಲ ಬುದ್ಧಿಯುಳ್ಳವರು, ಅಗಣಿತ ಬಯಕೆಯುಳ್ಳವರು, ಮತ್ತು ಈ ಚರ್ಯೆಗಳು ಪರಿವರ್ತನೆಗೆ ಒಳಗಾಗದಂತಹವು. ಆದರೆ ಜೀಸಸ್ ಆಗಲಿ ಹಿಂದೂ ಧರ್ಮವಾಗಲಿ ಇದನ್ನು ಒಪ್ಪುವುದಿಲ್ಲ. ಅಂದರೆ ಪಾಶ್ಚಾತ್ಯ ಅರ್ಥಶಾಸ್ತ್ರಜ್ಞರ 'ಆರ್ಥಿಕ ಮನುಷ್ಯ'ನ ಪರಿಕಲ್ಪನೆಯ ವೈಲಕ್ಷಣ್ಯಗಳು ಸಾರ್ವತ್ರಿಕವೂ ಅಲ್ಲ, ಮಾರ್ಪಾಟಾಗದಂಥವೂ ಅಲ್ಲ; ಇವುಗಳನ್ನು ಮಿಥ್ಯಾ ಬೋಧನೆಗಳಿಂದ ಮೈಗೂಡಿಸಿಕೊಳ್ಳಲಾಗಿದೆ. ಅಂಥವುಗಳನ್ನು ಸತ್ಯ ಬೋಧನೆಯಿಂದ ಉಚ್ಚಾಟಿಸಬಹುದು. ಇದು ಸರಿಯೆನಿಸಿದರೆ, ಆಗ, ಕರ್ತವ್ಯಕ್ಕೆ ಸಮರ್ಪಿತವಾದ ಮತ್ತು ಅಪೇಕ್ಷೆಗಳಿಂದ ಬಿಡುಗಡೆ ಹೊಂದಿದ ಆರ್ಥಿಕ ವ್ಯವಸ್ಥೆಯೊಂದನ್ನು ಸೂಚಿಸುವುದು ಭ್ರಮಾದರ್ಶವೆನ್ನಿಸುವುದಿಲ್ಲ.

ಔದ್ಯೋಗಿಕ ಕ್ರಾಂತಿಗಿಂತ, ಹಿಂದಿನ ಕಾಲದಲ್ಲಿ ಸಂಕಷ್ಟಗಳ ಸರಮಾಲೆಗಳನ್ನೆ ಮಾನವ ಎದುರಿಸಬೇಕಾಗಿದ್ದಕ್ಕೆ ಆ ಅವಧಿಯಲ್ಲಿ ಪ್ರಗತಿ ಇರಲಿಲ್ಲ ಎನ್ನುವುದು ಕಾರಣ. ಅಂದರೆ ಅರ್ಥಶಾಸ್ತ್ರದ ಪಿತಾಮಹ ಆಡಂ ಸ್ಮಿತ್ ಅಭಿಪ್ರಾಯದಂತೆ ಆರ್ಥಿಕ ಅಭಿವೃದ್ಧಿಯು ಸಹಜ ಮತ್ತು ಸ್ವಾಭಾವಿಕ. ಜನರ ಸಾಮಾನ್ಯಸ್ಥಿತಿಯಲ್ಲಿನ ಯಾವ ಏಳಿಗೆಯಾದರೂ ಅವಿಚ್ಛಿನ್ನ ರಾಷ್ಟ್ರೀಯ ಉತ್ಪನ್ನವನ್ನು ಅವಲಂಬಿಸಿದೆ. ಆದರೆ ಸ್ಮಿತ್‌ನ ಅನುಯಾಯಿಗಳಾದ ರಿಕಾರ್ಡೊ ಮತ್ತು ಮಾಲ್ಥಸ್ ಅವಿಚ್ಛಿನ್ನ ಅಭಿವೃದ್ಧಿಯಲ್ಲಿನ ಆತಂಕಗಳಿಂದ ಪ್ರಭಾವಿತರಾಗಿದ್ದರಿಂದ ಈ ಅಭಿಪ್ರಾಯವನ್ನು ಪೂರ್ಣವಾಗಿ ಒಪ್ಪಲಿಲ್ಲ. ಆದರೆ ಇಂದಿಗೂ ರಾಷ್ಟ್ರೀಯ ಉತ್ಪನ್ನದ ಅಭಿವೃದ್ಧಿಯ ಪ್ರಮಾಣ ಪರಿಭಾವನೆಯಿಂದ ಬೆಳವಣಿಗೆಯ ವಿವಿಧ ಮಜಲುಗಳನ್ನು ಗುರುತಿಸಲಾಗುತ್ತಿದೆ.

ಆದರೆ ಹಿಂದೂ ಧರ್ಮದ ಪ್ರಕಾರ ರಾಷ್ಟ್ರೀಯ ಉತ್ಪನ್ನದಲ್ಲಿ ಏನಾದರೂ ಬೃಹತ್ತಾದ ಹೆಚ್ಚಳವಾದರೆ ಅದನ್ನು ನಶ್ವರ ಎಂದೂ, ಭ್ರಾಂತಿಜನಕವೆಂದೂ ಕಾಣಲಾಗುವುದು. ಆದನ್ನು ಹೇಗೆ ಪರಿಪೋಷಿಸಿಕೊಂಡು ಹೋಗಬಹುದು ಎನ್ನುವುದಕ್ಕಿಂತಲೂ ಅದಕ್ಕಾಗಿ ಭವಿಷ್ಯದಲ್ಲಿ ಎಂತಹ ಮಹತ್ವದ ಬೆಲೆಯನ್ನು ತೆರಬೇಕಾಗುತ್ತದೊ ಎಂಬ ಚಿಂತೆಗೆ ಅದು ಎಡೆ ಮಾಡಿಕೊಡುತ್ತದೆ. ಅಂದರೆ



ಬೃಹದುತ್ಪನ್ನಗಳಿಂದ ಅಂತಿಮವಾಗಿ ಒಳಿತು ಹೊರಹೊಮ್ಮಲು ಸಾಧ್ಯವಿಲ್ಲ. ಹಿಂದೂ ಧರ್ಮವು ವೈಯಕ್ತಿಕತೆಯನ್ನು ಬೆಳೆಸುವುದಕ್ಕಿಂತ ಸಮುದಾಯದ ಸಂಘಟನೆಗೆ ಹೆಚ್ಚಿನ ಒತ್ತು ಕೊಡುತ್ತದೆ. ಗಾಂಧಿ ರಾಷ್ಟ್ರೀಯ ಒಟ್ಟು ಉತ್ಪನ್ನವು ಒಂದು ಗುರಿ ಎಂದಾಗಲಿ, ಪ್ರಗತಿಯ ಮಾಪನ ಎಂದಾಗಲಿ ತಿಳಿಯುವುದಿಲ್ಲ. ಅದನ್ನು ಹೆಚ್ಚಿಸುವ ನಾನಾ ಬಗೆಯ ಪ್ರಯತ್ನಗಳನ್ನು ಗಾಂಧಿ ತಮ್ಮದೇ ಆದ ತೀಕ್ಷ್ಣ ಅನುಮಾನದಿಂದ ವೀಕ್ಷಿಸುತ್ತಾರೆ. ಅವರ ಪ್ರಕಾರ ರಾಷ್ಟ್ರೀಯ ಗುರಿಗಳು ಉಪಯುಕ್ತವಾಗಿರಬೇಕಾದರೆ ಕೇವಲ ರಾಷ್ಟ್ರೀಯ ಉತ್ಪನ್ನದ ಮೊತ್ತದ ಏರಿಕೆಗೆ ಪ್ರಾಮುಖ್ಯತೆ ಕೊಡುವುದರ ಬದಲು, ಅದರ ಸಂಯೋಜನೆಯ ಸ್ವಭಾವಕ್ಕೆ, ಅದನ್ನು ಉತ್ಪಾದಿಸುವ ರೀತಿ ಮತ್ತು ಸಾಧನೆಗಳಿಗೆ ವಿಶೇಷ ಮಹತ್ವವನ್ನು ನೀಡಬೇಕು ಮತ್ತು ತುಂಬಾ ಗಂಭೀರವಾಗಿ ಪರಿಶೀಲಿಸಬೇಕು.

## ಜಾನ್ ರಸ್ಕಿನ್ ಪ್ರಭಾವ:

ಗಾಂಧಿ ಚಿಂತನೆಯ ಮೇಲೆ ಪ್ರಭಾವ ಬೀರಿದ ಮತ್ತೊಂದು ಮಹತ್ವದ ಕೃತಿ ರಸ್ಕಿನ್‌ನ 'ಅಂಟು ದಿ ಲಾಸ್ಟ್'. ಸಾಂಪ್ರದಾಯಿಕ ಅರ್ಥಶಾಸ್ತ್ರ ಕೆಲಸವನ್ನು ಸರಳ ಮತ್ತು ಪುನರಾವರ್ತನೆಯ ಘಟಕಗಳನ್ನಾಗಿ ವಿಭಜಿಸಿ ಅಲ್ಪಕಾಲದಲ್ಲಿಯೆ ಹೆಚ್ಚಿನದನ್ನು ಮನುಕುಲ ಪಡೆಯುವುದಾದರೆ ಅದೆಲ್ಲ ಒಳಿತೆ ಎಂದು ತೀರ್ಮಾನಿಸಿತು. ಒಬ್ಬ ವ್ಯಕ್ತಿಗಿಂತ ಒಂದು ಯಂತ್ರ ಹೆಚ್ಚು ಸಮರ್ಥವಾಗಿ ಕಾರ್ಯನಿರ್ವಹಿಸಿದರೆ ನಿರ್ದಿಷ್ಟ ಉತ್ಪನ್ನಕ್ಕೆ ಅದು ಹೆಚ್ಚು ಒಳಿತು. ಅಂದರೆ ಕಡಿಮೆ ಕೆಲಸವೆಂದರೆ ಮನುಕುಲಕ್ಕೆ ಅತ್ಯಂತ ಹೆಚ್ಚಿನ ನಿವ್ವಳ ಒಳಿತಾಗುತ್ತದೆ ಎಂದೆ ಅರ್ಥ. ಈ ತರ್ಕವೆ ಹತ್ತೊಂಬತ್ತನೆ ಶತಮಾನದ ಔದ್ಯೋಗೀಕರಣದ ಮೂಲಕ ಬಹುಸಂಖ್ಯಾತರನ್ನು ಅರ್ಥವಿಲ್ಲದ, ನೆಮ್ಮದಿಯಿಲ್ಲದ ಮತ್ತು ಭರವಸೆಯಿಲ್ಲದ ಜೀವನಕ್ಕೆ ದೂಡಿಬಿಟ್ಟಿತು. ಇದೇ ಅತ್ಯುತ್ತಮವಾದದ್ದು ಎಂದು ಸಮರ್ಥಿಸುವಲ್ಲಿ ಅರ್ಥಶಾಸ್ತ್ರ ಪೂರ್ಣ ಯಶಸ್ವಿಯಾಯಿತು. ಅರ್ಥಶಾಸ್ತ್ರಜ್ಞರ ಈ ಒಳಿತಿನ ಕಲ್ಪನೆಯ ಕಟುವಿಮರ್ಶಕ ರಸ್ಕಿನ್ ವಿವಿಧ ಹಂತಗಳಲ್ಲಿ ಇದನ್ನು ಪ್ರತಿರೋಧಿಸಿದ. ಅತ್ಯಂತ ಮೂಲಭೂತ ಹಂತಗಳಲ್ಲಿ ಬಯಸಿ ಅನ್ವೇಷಿಸಬೇಕಾದ ಸೂಕ್ತ ಮೌಲ್ಯ ಆದಾಯವಲ್ಲ ಅಥವಾ ಸಂಪತ್ತಲ್ಲ, ಆದರೆ ಜೀವನ ಎಂದು ರಸ್ಕಿನ್ ಬಲವಾಗಿ ಮತ್ತು ಸಮರ್ಥವಾಗಿ ಪ್ರತಿಪಾದಿಸಿದ. ಶ್ರೇಷ್ಠ ಜೀವನಕ್ಕಾಗಿ ಉತ್ಪನ್ನವನ್ನು ಗರಿಷ್ಠಗೊಳಿಸುವುದು ಸಮಂಜಸವೂ ಹೌದು ಮತ್ತು ಅದನ್ನು ವಿಸ್ತೃತಗೊಳಿಸುವುದಕ್ಕಾಗಿ ಅದು ಸೂಕ್ತವೂ ಹೌದು ಎನ್ನುವ ಅರ್ಥಶಾಸ್ತ್ರಜ್ಞರ ವಾದದ ಪೊಳ್ಳುತನವನ್ನು ರಸ್ಕಿನ್ ಎಳೆಎಳೆಯಾಗಿ ಬಿಡಿಸಿಡುವಲ್ಲಿ ಯಶಸ್ವಿಯಾದ. ಅಂದರೆ ಉತ್ಪನ್ನದ ಪ್ರಕ್ರಿಯೆ ಮತ್ತು ಅದರ ಫಲ ಎರಡೂ ಶ್ರೇಷ್ಠ ಜೀವನಕ್ಕೆ ಮಾರಕವಾಗಲೂ ಬಹುದು.

ಅರ್ಥಶಾಸ್ತ್ರಜ್ಞನ 'ಆರ್ಥಿಕ ಮನುಷ್ಯ' ಎನ್ನುವ ಪರಿಕಲ್ಪನೆ ಒಂದು ಕಟ್ಟುಕಥೆ ಎನ್ನುವುದು ರಸ್ಕಿನ್‌ನ ವಾದ. ಕೆಲಸವೇ ಜೀವನ. ಅದು ಕೇವಲ ಮಾರಾಟಕ್ಕಿಟ್ಟ ಆರ್ಥಿಕ ಸಂಪನ್ಮೂಲವಲ್ಲ. ದುಡಿಮೆಯ ಆದಾಯವು ಸಾಮೂಹಿಕ ಉತ್ಪನ್ನದ ನ್ಯಾಯಯುತ ಅನುಭೋಗವಾಗಬೇಕೆ ಹೊರತು, ಬೇಡಿಕೆ ಪೂರೈಕೆಗಳೊಳಗೆ ನಡೆಯುವ ಪಾರಸ್ಪರಿಕ ಕ್ರಿಯೆಯ ಮೂಲಕ ನಿಗದಿಯಾದ ಕೇವಲ ಕ್ರಯವಾಗಿರ ಕೂಡದು. ಮೇಲಿನ ಮಹತ್ವವಾದ ರಸ್ಕಿನ್‌ನ ವಿಶ್ಲೇಷಣೆಗಳು ಗಾಂಧೀಜಿ ದಕ್ಷಿಣ ಆಫ್ರಿಕೆಯಲ್ಲಿದ್ದ ವರ್ಷಗಳಲ್ಲಿ ಅವರ ಆರ್ಥಿಕ ಚಿಂತನೆಗಳನ್ನು ರೂಪಿಸುವಲ್ಲಿ ಶಕ್ತಿಯುತ ಪ್ರಭಾವವನ್ನು ಬೀರಿದವು.

## ಬ್ರಿಟಿಷ್ ಸಾಮ್ರಾಜ್ಯಶಾಹಿ ಧೋರಣೆ:

ಬ್ರಿಟಿಷ್ ಸಾಮ್ರಾಜ್ಯಶಾಹಿ, ವಸಾಹತುಶಾಹಿ ಧೋರಣೆಗಳು ಗಾಂಧೀಯ ಆರ್ಥಿಕ ವಿಚಾರಗಳ ತೀಕ್ಷ್ಣತೆ ವೃದ್ಧಿಸುವಲ್ಲಿ ಬಲವಾದ ಅಡಿಗಲ್ಲನ್ನು ಹಾಕಿವೆ. ಬ್ರಿಟಿಷ್ ವಸಾಹತುಶಾಹಿ ಧೋರಣೆಗೂ ಭಾರತದ ಬಡತನಕ್ಕೂ ಇದ್ದ ಪ್ರಖರವಾದ ಸಂಬಂಧವನ್ನು ಅತ್ಯಂತ ಸೂಕ್ಷ್ಮವಾಗಿ ಪರಿಶೀಲಿಸಿದ್ದ ದಾದಾಬಾಯಿ ನವರೋಜಿ ಈ ವಿಚಾರದಲ್ಲಿ ಮಹಾತ್ಮರ ಮೊಟ್ಟ ಮೊದಲ ಮಾರ್ಗದರ್ಶಕರಲ್ಲಿ ಒಬ್ಬರಾಗಿದ್ದರು. ಈಸ್ಟ್ ಇಂಡಿಯಾ ಕಂಪನಿಯ ಆಡಳಿತದಲ್ಲಿ ಭಾರತದ ನಿವ್ವಳ ನಿಧಿ ಹೇಗೆ ಇಂಗ್ಲೇಂಡಿಗೆ ಬಸಿದು ಹೋಗುತ್ತಿದೆ ಎನ್ನುವುದನ್ನು ಆಧಾರ ಸಹಿತ ತೋರಿಸಿದ ಪ್ರಮುಖ ನವರೋಜಿ. ಅಲ್ಲದೆ ಬ್ರಿಟಿಷ್ ಆಡಳಿತವನ್ನು ಪೋಷಿಸಲು ಸೃಷ್ಟಿಸಿದ ತೆರಿಗೆ ಪದ್ಧತಿಯೂ ಭಾರತೀಯರ ಜೀವನ ಕ್ರಮದ ಮೇಲೆ ತೀವ್ರ ದುಷ್ಪರಿಣಾಮವನ್ನು ಬೀರಿತು (ಉದಾ: ಉಪ್ಪಿನ ಕರ ಪದ್ಧತಿ) . ಒಟ್ಟಾರೆ ಬ್ರಿಟಿಷ್ ಯೋಜನಾತಂತ್ರ ಭಾರತದ ಪಾರಂಪರಿಕ ಉತ್ಪಾದನಾ ಕ್ಷೇತ್ರದ ಅವನತಿಗೆ, ನಾಶಕ್ಕೆ ಕಾರಣವಾಯಿತು. ಔದ್ಯೋಗಿಕ ಕ್ರಾಂತಿಯಿಂದ ಭಾರತದ ಶ್ರೇಷ್ಠ ಜವಳಿ ಉದ್ಯಮ ಪೂರ್ಣವಾಗಿ ನೆಲಕಚ್ಚಿತು.

ಈ ಮೇಲಿನ ವಿವಿಧ ಹಿನ್ನೆಲೆಗಳು ಗಾಂಧಿಯ ಹೊಸ ಆರ್ಥಿಕ ಚಿಂತನೆಯ ಬೆಳವಣಿಗೆಯಲ್ಲಿ ಮಹತ್ವದ ಕೊಡುಗೆಯನ್ನು ನೀಡಿವೆ.

## ನೈತಿಕ ಮೌಲ್ಯ:

ಮಾನವನ ಕ್ಷೇಮಾಭ್ಯುದಯದ ಕುರಿತು ಅತ್ಯಂತ ನಾಜೂಕಾದ ಕಾಳಜಿಯನ್ನು ವ್ಯಕ್ತಪಡಿಸುವ ಅರ್ಥಶಾಸ್ತ್ರಜ್ಞರು ನೈತಿಕ ಮೌಲ್ಯಗಳನ್ನು ಹೊರಗಿಡುವುದರ ಮೂಲಕ, ಮಾನವ ಕ್ಷೇಮದ ಪ್ರಧಾನ ವಿಶೇಷತೆಯನ್ನೆ ಕೈಬಿಟ್ಟಿದ್ದಾರೆ. ನೈತಿಕ ಮೌಲ್ಯಗಳನ್ನು



ಹೊರತು ಪಡಿಸಿದ ಯಾವುದೂ ಗಾಂಧೀಯ ಅರ್ಥಶಾಸ್ತ್ರದಲ್ಲಿಲ್ಲ. ಇದು ಗಾಂಧೀಯ ಅರ್ಥಶಾಸ್ತ್ರವನ್ನು ಸಾಂಪ್ರದಾಯಿಕ ಆರ್ಥಿಕ ಸಿದ್ಧಾಂತಗಳಿಗಿಂತ ಭಿನ್ನವಾಗಿಸುತ್ತದೆ. ಗಾಂಧೀಯ ಆರ್ಥಿಕ ಚಿಂತನೆಯಲ್ಲಿರುವ ನೈತಕ ಆಯಾಮ ಗುರುತರವಾದದ್ದು.

ಗಾಂಧಿ ನಂಬಿಕೆ ಹೀಗಿತ್ತು: ಆಸೆಗಳು ಏರಿಳಿಯುವಂಥವುಗಳು; ಆಸೆಗಳನ್ನು ಕನಿಷ್ಟಗೊಳಿಸುವುದು ಕ್ಷೇಮವನ್ನು ಅಧಿಕಗೊಳಿಸುವ ವ್ಯಾವಹಾರಿಕ ಮಾರ್ಗ. ಕ್ಷೇಮವನ್ನು ಅನ್ಯ ಸಾಧನೆಯ ಮೂಲಕ ಅಂದರೆ ಉತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ ವಿಸ್ತೃತಗೊಳಿಸುವುದೆಂದರೆ ಉದ್ದೇಶವನ್ನು ವಿಫಲಗೊಳಿಸಿದಂತೆ. ಯಾರು ಸ್ವತ್ತನ್ನು ಸಂಗ್ರಹಿಸಬೇಕೆಂಬ ಗೀಳಿಗೆ ಒಳಗಾಗುವುದಿಲ್ಲವೊ ಅವರು ನೈತಿಕವಾಗಿ ಆರೋಗ್ಯವಂತರು. ಇಂತಹವರನ್ನು 'ಆಗಲೇಬೇಕು' ಮತ್ತು 'ಆಸೆಯಿದೆ' ಎಂಬೆರಡರ ನಡುವಣ ಘರ್ಷಣೆ ಕಾಡುವುದಿಲ್ಲ.

## ಗ್ರಾಮೀಣ ಆರ್ಥಿಕತೆ:

ಗಾಂಧೀಜಿ ಪ್ರಕಾರ ಸಾಂಪ್ರದಾಯಿಕ ಗ್ರಾಮೀಣ ಕ್ಷೇತ್ರದ ಸ್ಥಾನವನ್ನು ವ್ಯಾಪಾರಿ ಕೈಗಾರಿಕೋತ್ಪನ್ನಗಳು, ರಾಶ್ಯುತ್ಪನ್ನ ವಸ್ತುಗಳು ಆಕ್ರಮಿಸಿದಾಗ ಗ್ರಾಮೀಣ ವಾಸ್ತವ ಆದಾಯವು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ. ಪರಿಣಾಮ ಗ್ರಾಮದಿಂದ ನಗರಾಭಿಮುಖ ವಲಸೆ. ಇದಕ್ಕೆ ಕಾರಣ ಗ್ರಾಮೀಣ ಬಡತನ ಮತ್ತು ಕ್ಷೀಣಿಸುತ್ತಿರುವ ಗ್ರಾಮೀಣ ಉದ್ಯೋಗಾವಕಾಶಗಳು. ಇದಕ್ಕೆ ಗಾಂಧೀಯ ಪರಿಹಾರ ಗ್ರಾಮೀಣ ಆರ್ಥಿಕತೆಯ ನೆಲೆಯನ್ನು ಪುನರುಜ್ಜೀವನಗೊಳಿಸುವುದು. ಗಾಂಧಿಗೆ ಕೆಲಸವು ಜೀವನದ ಅತಿ ಮುಖ್ಯ ಭಾಗ. ಸ್ವತ್ತಿನ ಯಜಮಾನನು ಮಾತ್ರವೆ ಅಲ್ಲದೆ, ವಿದ್ವಾಂಸನೂ, ವಕೀಲನೂ, ವಿಜ್ಞಾನಿಯೂ ಪ್ರತಿಯೊಬ್ಬನೂ 'ರೊಟ್ಟಿಶ್ರಮ' ವನ್ನು ಕೈಗೊಳ್ಳಲೇಬೇಕು. ಇದು ಪೂರ್ಣಪ್ರಮಾಣದಲ್ಲಿ ಜೀವಂತಿಕೆಯಿಂದಿರುವ ಏಕೈಕ ಮಾರ್ಗ. ಗ್ರಾಮೀಣ ಆರ್ಥಿಕತೆಯ ಬುನಾದಿಯಿರುವುದು ಕೆಲಸದಲ್ಲಿ.

## ಆದಾಯದ ವಿತರಣೆ:

ಆದಾಯ ವಿತರಣೆ ಕುರಿತ ಗಾಂಧೀಯ ಆಲೋಚನೆ ಇದು. ಅನ್ಯರು ತಮ್ಮ ಆವಶ್ಯಕತೆಗಳನ್ನು ಎಂದಿನವರೆಗೆ ಪೂರೈಸಿಕೊಳ್ಳುವುದಿಲ್ಲವೊ ಅಂದಿನವರೆಗೂ ಜನರು ತಮ್ಮ ತತ್‌ಕ್ಷಣದ ಆವಶ್ಯಕತೆಗಳಿಗೆ ಅಗತ್ಯವಲ್ಲದ ಹೆಚ್ಚಿನದೇನನ್ನೂ ಸಂಗ್ರಹಿಸಿ ಇಟ್ಟುಕೊಳ್ಳಬಾರದು. ಅಲ್ಲದೆ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಂಡವರು ಅದನ್ನು ಹೊಸ ಉತ್ಪನ್ನಾತ್ಮಕ ಕಾರ್ಯಗಳಲ್ಲಿ ತೊಡಗಿಸಬೇಕು. ಇದರಿಂದ ಬೇರೆಯವರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಸಹಾಯವಾಗುತ್ತದೆ.

## ಸ್ವತ್ತಿನ ಒಡೆತನ:

ಗಾಂಧಿಗೆ ಖಾಸಗಿ ಸ್ವತ್ತು ಒಂದು ಸಾರ್ವತ್ರಿಕ ವಿಶ್ವಸ್ಥ ನಿಧಿ. ಖಾಸಗಿ ಸ್ವತ್ತನ್ನು ಮಾರ್ಕ್ಸ್ ಹೇಳಿದ ಹಾಗೆ ತೆಗೆದುಹಾಕಲು ಗಾಂಧಿ ಒಪ್ಪುವುದಿಲ್ಲ. ಅಲ್ಲದೆ ಸ್ಪರ್ಧಾತ್ಮಕ ಮಾರುಕಟ್ಟೆಗಳಲ್ಲಿ ಸ್ವಾರ್ಥಿ ದುರಾಸೆಯು ಎಲ್ಲರ ಪ್ರಯೋಜನಕ್ಕಾಗಿ ಕಾರ್ಯ ಮಾಡುತ್ತದೆ ಎನ್ನುವ ವಾದವನ್ನು ಸಮರ್ಥಿಸುವುದಿಲ್ಲ. ಬದಲಿಗೆ ಸ್ವತ್ತಿನ ಒಡೆಯನು ತನ್ನ ದುರಾಸೆಯಿಂದಾಗುವ ತಪ್ಪನ್ನು ಅರಿತುಕೊಳ್ಳುವಂತೆ ಮಾಡಲು ಸಾಧ್ಯ. ಮಾನವ ಸಂತತಿಗೆ ಈ ಪ್ರಪಂಚದ ಮೇಲಿನ ಪ್ರಭುತ್ವವನ್ನು ಕೊಟ್ಟಿರುವುದು ಅದರ ಒಡೆಯನಾಗಿರಲಿಕ್ಕಲ್ಲ; ಅದನ್ನು ಆರೈಕೆ ಮಾಡಲು. ಗಾಂಧೀಯ ವಿಶ್ವಸ್ಥ ನಿಧಿತ್ವವನ್ನು ಪರೋಪಕಾರಕ್ಕೆ ಹೋಲಿಸಬಾರದು. ಅಂದರೆ ಶೋಷಣೆಯಿಂದ ಲೂಟಿಮಾಡಿದ ಹಣವನ್ನು ದಾನ-ಧರ್ಮದಲ್ಲಿ ವಿನಿಯೋಗಿಸಿ ಪ್ರಾಯಶ್ಚಿತ್ತ ಮಾಡಿಕೊಂಡಂತೆ ಆಗಬಾರದು. ಎಲ್ಲಿ ಸಮಷ್ಟಿ ನಿರ್ವಹಣೆಯ ಅಗತ್ಯವಿದೆಯೊ ಅಲ್ಲಿ ಸಾಮಾನ್ಯ ಕ್ಷೇಮಕ್ಕಾಗಿ ರಾಜ್ಯವು ಸಾಂಸ್ಥಿಕ ವಿಶ್ವಸ್ಥನಾಗಿ ಕಾರ್ಯನಿರ್ವಹಿಸಬೇಕೆನ್ನುವುದು ಗಾಂಧೀಜಿಯ ಒಂದು ಪ್ರಮುಖ ಸಲಹೆ. ಆದರೆ ಅಧಿಕಾರ ಕೇಂದ್ರೀಕರಣ ಅತ್ಯಂತ ಕನಿಷ್ಟವಾಗಿರಬೇಕು. ಗಾಂಧೀಯ ಪರಿಕಲ್ಪನೆಯಲ್ಲಿ ಯಾವುದನ್ನು ಸಣ್ಣ ಪ್ರಮಾಣದಲ್ಲಿ ಮಾಡುವುದು ಸಾಧ್ಯವಾಗುವುದಿಲ್ಲವೊ ಅದನ್ನು ರಾಜ್ಯವೆ ವಹಿಸಿಕೊಳ್ಳಬೇಕು.

ಮಾರುಕಟ್ಟೆಯಲ್ಲಿರುವ ಏಕಸ್ವಾಮ್ಯವಾದಿ ಮತ್ತು ಸ್ಪರ್ಧಾಳು – ಇಬ್ಬರ ಪ್ರೇರಣೆಯೂ ಒಂದೆ ಆಗಿರುವುದರಿಂದ ಎರಡನ್ನೂ ಗಾಂಧಿ ಒಪ್ಪುವುದಿಲ್ಲ. ಒತ್ತಾಯಿಸಿದರೆ ಗಾಂಧಿ ಏಕಸ್ವಾಮ್ಯವಾದಿಯನ್ನು ಆರಿಸಿಕೊಳ್ಳುತ್ತಾರೆಯೆ ವಿನಃ ಸ್ಪರ್ಧೆಯನ್ನಲ್ಲ. ಏಕೆಂದರೆ ಏಕಸ್ವಾಮ್ಯವಾದಿಯನ್ನು ವಿಶ್ವಸ್ಥನಿಧಿತ್ವ ತತ್ವಕ್ಕೆ ಪರಿವರ್ತಿಸುವ ಸಾಧ್ಯತೆಯಿದೆ ಎನ್ನುವ ನಂಬಿಕೆ.

ಆಕ್ರಮಣಶೀಲ ಗುಣವು ಮಾನವನಲ್ಲಿ ಅಂತರ್ಗತವಾಗಿರುವ ಪ್ರಮುಖ ಲಕ್ಷಣ ಎಂದು ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ನಂಬುತ್ತಾರೆ. ಆದರೆ ಗಾಂಧಿ ಇದನ್ನು ಬೇರುಸಹಿತ ಕಿತ್ತು ಹಾಕಬೇಕೆಂದು ಒತ್ತಾಯಿಸುತ್ತಾರೆ. ಪ್ರತಿಯೊಬ್ಬರೂ ಬೇರೆಯವರ ಒಳಿತನ್ನು ಗಮನದಲ್ಲಿಟ್ಟುಕೊಂಡು ತಮ್ಮ ತಮ್ಮ ಕಾರ್ಯತಂತ್ರವನ್ನು ರೂಪಿಸಿಕೊಳ್ಳಬೇಕೆನ್ನುವುದು ತಾತ್ಪರ್ಯ.

## ಆರ್ಥಿಕ ತತ್ವಶಾಸ್ತ್ರ:

ಗಾಂಧೀಯ ಆರ್ಥಿಕ ನೀತಿಯ ಒಲವುಗಳನ್ನು ಅವರು ೧೯೪೮ರಲ್ಲಿ ತೀರಿಕೊಂಡಾಗ ಯಾರೊಬ್ಬರೂ ಭಾರತದ ಒಳಗಾಗಲಿ ಹೊರಗಾಗಲಿ ಗಂಭೀರವಾಗಿ ಪರಿಗಣಿಸಲಿಲ್ಲ.



ಆ ಕಾಲದಲ್ಲಿ ಪಾಶ್ಚಾತ್ಯ ಅರ್ಥವ್ಯವಸ್ಥೆಗಳನ್ನು ರೂಪಾಂತರಗೊಳಿಸಿದ್ದು ರಾಷ್ಟ್ರೀಯ ಉತ್ಪಾದನೆ ಮೊತ್ತದ ಆಸ್ಫೋಟನಾ ಬೆಳವಣಿಗೆ. ಜೊತೆಗೆ ಬಡತನವನ್ನು ಹೋಗಲಾಡಿಸಲು ಸಾಂಪ್ರದಾಯಿಕ ಅರ್ಥಶಾಸ್ತ್ರದ ಪರಿಕರಗಳನ್ನು ಪರಿಣಾಮಕಾರಿಯಾಗಿ ಅನ್ವಯಿಸಬಹುದು ಎನ್ನುವ ಭಾವನೆ ಬಲವಾಗಿ ಬೇರೂರಿತ್ತು. ಉದ್ಯೋಗ, ಸಂಶೋಧನೆ, ವೈಜ್ಞಾನಿಕ ಬೆಳವಣಿಗೆ ಸಮಸ್ಯೆಗಳನ್ನು ಪರಿಹರಿಸುತ್ತದೆ ಎನ್ನುವ ಆಸೆ ಎಲ್ಲ ಕಡೆ ಇತ್ತು. ಆ ಸಂದರ್ಭದಲ್ಲಿ ರಾಷ್ಟ್ರೀಯ ಉತ್ಪನ್ನದ ಮೊತ್ತ ಅಷ್ಟೇನೂ ಮುಖ್ಯವಲ್ಲ ಎನ್ನುವ ಗಾಂಧೀಯ ಪರಿಕಲ್ಪನೆ ಯಾರಿಗೂ ಬೇಕಾಗಿರಲಿಲ್ಲ.

ಯುದ್ಧೋತ್ತರ ವರ್ಷಗಳಲ್ಲಿ, ಅಭ್ಯುದಯದ ಕಾರ್ಯಕ್ರಮಗಳು ಸೃಷ್ಟಿಸಿದ ಅಗಾಧ ಸಮಸ್ಯೆಗಳು ಗಾಂಧಿ ಸೂತ್ರಗಳ ವಿಲಕ್ಷಣ ವಿಚಾರಗಳಿಗೆ ಮಹತ್ವಕೊಡುವಂತೆ ಹಲವರನ್ನು ಪ್ರೇರೇಪಿಸಿತು. ರಾಷ್ಟ್ರೀಯ ಉತ್ಪನ್ನದ ಸಾಮರ್ಥ್ಯವು ಬೃಹದಾಕಾರವಾಗಿ ಹೆಚ್ಚಿದರೂ ಆ ರಾಷ್ಟ್ರದ ಸಾಮಾನ್ಯ ಜನರ ಜೀವನ ಪರಿಸ್ಥಿತಿಯಲ್ಲಿ ಸುಧಾರಣೆ ಸಂಭವಿಸದೆ ಇರಬಹುದು. ಸಮಸ್ಯೆ ಉಲ್ಬಣಿಸಬಹುದು. ಥ್ಯಾಲ್ಯಾಂಡ್, ದಕ್ಷಿಣ ಕೊರಿಯ, ಇಂಡೋನೇಶ್ಯ ಮತ್ತು ಮಲೇಶ್ಯ – ಒಂದು ಕಾಲದಲ್ಲಿ ಏಷ್ಯಾದ ಹುಲಿಗಳು ಎಂದು ಈ ಅರ್ಥವ್ಯವಸ್ಥೆಗಳನ್ನು ಶ್ಲಾಘಿಸಲಾಗುತ್ತಿತ್ತು ಮತ್ತು ಎಲ್ಲಾ ಅನಭಿವೃದ್ಧ ರಾಷ್ಟ್ರಗಳು ಇವುಗಳ ಮಾದರಿಯನ್ನು ಅನುಸರಿಸಬೇಕೆಂದು ಉದಾರೀಕರಣದ ವಕ್ತಾರರು ಕೂಗುತ್ತಿದ್ದರು. ಈ ರಾಷ್ಟ್ರಗಳ ರಾಷ್ಟ್ರೀಯ ಉತ್ಪನ್ನದ ಬೆಳವಣಿಗೆ ದರ ನಿರಂತರವಾಗಿ ಶೇ. ೧೨ರಿಂದ ಶೇ. ೧೪ ಇತ್ತು. ಇಂತಹ ರಾಶ್ಯುತ್ಪನ್ನಗಳ ನಡುವೆ ಈ ರಾಷ್ಟ್ರಗಳು ವಿಚಿತ್ರವಾದ ಬಿಕ್ಕಟ್ಟಿಗೆ ಒಳಗಾದವು. ಪ್ರಸ್ತುತ ವರ್ಷದಲ್ಲಿ ಇಲ್ಲಿನ ನಿರುದ್ಯೋಗ ಪ್ರಮಾಣ ಶೇ. ೭ರಿಂದ ಶೇ. ೧೨ರವರೆಗೆ ಏರಿದೆ. ಇಂಡೋನೇಶ್ಯಾದ ಬಡವರ ಸಂಖ್ಯೆ ೨೨ ಮಿಲಿಯನ್ ನಿಂದ ೮೦ ಮಿಲಿಯನ್‌ಗೆ ಹೆಚ್ಚಿದೆ. ಗ್ರಹಣ ಬಡಿದಿರುವ ಏಷ್ಯಾದ ಈ ಅರ್ಥವ್ಯವಸ್ಥೆಗಳಲ್ಲಿ ರಾಷ್ಟ್ರೀಯ ಉತ್ಪನ್ನದ ಬೆಳವಣಿಗೆ ದರ ಅಧಿಕವಾಗಿಯೆ ಇದೆ. ಅಂದರೆ ಜಗತ್ತಿನಲ್ಲಿ ಅವಿಚ್ಛಿನ್ನ ಬೆಳವಣಿಗೆ ಪ್ರಕ್ರಿಯೆಯು ಅಂತಿಮವಾಗಿ ಅಸಂಭವನೀಯ.

ಈಗ ತಾಂತ್ರಿಕತೆಯ ಮತ್ತು ಹಣಕಾಸಿನ ವಸ್ತು ವಿಶೇಷಗಳಿಗೆ ವಿರುದ್ಧವಾಗಿ ಮಾನವನ ಕಡೆ ಹೆಚ್ಚು ಗಮನಕೊಡುವಂತಾಗಿದೆ. ವಿಶ್ವ ಬ್ಯಾಂಕಿನ ನೆರವಿನ ಕಾರ್ಯಕ್ರಮಗಳಲ್ಲಿ ಸಾಮಾನ್ಯ ಶಿಕ್ಷಣಕ್ಕೆ ಮಹತ್ವ ನೀಡಲಾಗುತ್ತಿದೆ; ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಯೋಜನೆಗಳಿಗೆ ನೇರವಾಗಿ ಹೆಚ್ಚಿನ ಹಣ ಸಹಾಯವನ್ನು ಒದಗಿಸಲಾಗುತ್ತಿದೆ. ಎಪ್ಪತ್ತರ ದಶಕದಲ್ಲಿ ಪರಮಾಣು ಶಕ್ತಿಯ ಅಪಾಯದ ಅರಿವಾಯಿತು, ಇತರ ಗ್ರಹಗಳನ್ನು ಮನುಷ್ಯ ತನ್ನ ವಸಾಹತು ಮಾಡಿಕೊಳ್ಳಲಾರ

ಎನ್ನುವ ಕಟು ಸತ್ಯ ಬೆಳಕಿಗೆ ಬಂದಿತು ಮತ್ತು ತೈಲಸಂಗ್ರಹ ಅವಿರತವಾಗಿ ದೊರೆಯುವುದಿಲ್ಲ ಎನ್ನುವುದು ಸ್ಪಷ್ಟವಾಯಿತು. ಜನಸಂಖ್ಯಾ ಸ್ಫೋಟದ ಪರಿಣಾಮ ಭೀಕರವಾಯಿತು. ಜಗತ್ತಿನ ಬಡತನ ಕೇವಲ ಅಭಿವೃದ್ಧಿಯಿಂದ ನಿವಾರಣೆಯಾಗುತ್ತದೆ ಎನ್ನುವ ಭ್ರಮಾಲೋಕದಿಂದ ತಜ್ಞರು ಕೆಳಗಿಳಿಯುವುದು ಅನಿವಾರ್ಯವಾಯಿತು.

ಉತ್ಪನ್ನವನ್ನು, ಬಳಕೆಯನ್ನು ಮತ್ತು ಸಂಗ್ರಹವನ್ನು ಅವಿರತವಾಗಿ ಹೆಚ್ಚಿಸುವುದರಿಂದ, ಸತತವಾಗಿ ಹೆಚ್ಚುತ್ತಿರುವ ಆಸೆಗಳನ್ನು ತೃಪ್ತಿಪಡಿಸುವುದರಿಂದ ಸಾಮಾನ್ಯ ಒಳಿತನ್ನು ಸಾಧಿಸಬಹುದು ಎನ್ನುವ ಭಾವನೆ ನಿರರ್ಥಕ ಮತ್ತು ಸ್ವಯಂ ಸೋಲನ್ನು ಅನುಭವಿಸುವ ಸೂತ್ರ ಎನ್ನುವ ಅರಿವಾಯಿತು. ಈಗ ನಾವು ಮಾಡಬೇಕಾದುದು ನಮ್ಮ ಹಂಬಲಗಳಿಗೆ ಮರು ವ್ಯಾಖ್ಯೆ ನೀಡುವುದು; ಆಸೆಗಳಿಗೆ ಮಿತಿ ವಿಧಿಸುವುದು; ಗುರಿಗಳನ್ನು ಮಾನವ ಆವಶ್ಯಕತೆಗಳಿಗೆ ಅನುಗುಣವಾಗಿ ರೂಪಿಸುವುದು; ಸರಳ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು; ಅಸಂಗ್ರಹ ಮತ್ತು ಅವಿನಾಶಿಗಳಾದ ಮಾನವ ಗುಣಗಳನ್ನು ಕೃಷಿ ಮಾಡುವುದು. ಅಂದರೆ ನಮ್ಮ ಗ್ರಹದ ಮೇಲಣ ಜೀವನವನ್ನು ಉಳಿಸಿ ಬೆಳೆಸಲು ಇರುವ ಒಂದೇ ಮಾರ್ಗ ಗಾಂಧೀಯ ಆರ್ಥಿಕ ತತ್ವಶಾಸ್ತ್ರವನ್ನು ಅಳವಡಿಸಿಕೊಳ್ಳುವುದು.

ಮಾವೊ ವಿಚಾರಗಳಿಗೂ, ಗಾಂಧೀಯ ಆರ್ಥಿಕ ಧೋರಣೆಗಳಿಗೂ ಸಾಮ್ಯವಾದ ಹಲವಾರು ಅಂಶಗಳಿದ್ದವು. ಮುಖ್ಯವಾದವುಗಳು – ವೈಯಕ್ತಿಕ ಕ್ಷೇಮಕ್ಕಿಂತ ಗುಂಪಿನ ಕ್ಷೇಮವೆ ಪ್ರಾಥಮಿಕ ಪ್ರೇರಕಶಕ್ತಿ, ಕೃಷಿ ಉತ್ಪನ್ನವನ್ನು ಹೆಚ್ಚಿಸಿ ಗ್ರಾಮ ಜೀವನವನ್ನು ಹಸನಾಗಿಸುವುದು, ಸರಳ ತಾಂತ್ರಿಕತೆಯನ್ನು ಬೆಳೆಸಿ ಅಳವಡಿಸಿಕೊಳ್ಳುವುದು, ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಪ್ರೋತ್ಸಾಹ ನೀಡುವುದು ಮುಂತಾದವುಗಳು. ಮುಖ್ಯವಾಗಿ ಕ್ಯೂಬಾ ಮತ್ತು ಅಲ್ಬೇನಿಯಾಗಳು ತಮ್ಮ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಈ ತತ್ವಗಳನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಂಡ ರಾಷ್ಟ್ರಗಳು. ತಾನ್ಜಾನಿಯಾ ದಲ್ಲಿ ಅಸಾಧಾರಣ ಪ್ರಗತಿಯನ್ನು ಸಾಧಿಸಿದ ಯೋಜನೆಯ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಗಾಂಧೀಯ ಚಿಂತನೆಯ ಪ್ರಸ್ತುತತೆ ಸ್ಪಷ್ಟವಾಗುತ್ತದೆ. ಆ ರಾಷ್ಟ್ರದ ಪ್ರಮುಖ ಗುರಿಗಳು – ಅನಕ್ಷರತೆಯ ಪ್ರಮಾಣದ ಇಳಿಕೆ, ಕುಡಿಯುವ ನೀರಿನ ಸೌಲಭ್ಯದ ವಿಸ್ತರಣೆ, ಮಗು ಮತ್ತು ಮಾತೆಯರ ಸಾವಿನ ಪ್ರಮಾಣದ ಕಡಿತ, ಸ್ವಾವಲಂಬನೆಗೆ ಉತ್ತೇಜನ, ವೈಯಕ್ತಿಕ ಜೀವನ ಧಾರಣ ಕೃಷಿಯನ್ನುಳ್ಳ ಸ್ವಸಹಾಯ ಹಳ್ಳಿಗಳು, ಹಣದ ಬೆಳೆಗಳ ಸಾಮೂಹಿಕ ಬೇಸಾಯ ಮತ್ತು ಸಣ್ಣ ಪ್ರಮಾಣದ ಮಧ್ಯವರ್ತಿ ತಾಂತ್ರಿಕತೆಯ ಕೃಷಿಯೇತರ ಕೈಗಾರಿಕೆಗಳು. ಇವುಗಳು ನವ ಮಾನವನನ್ನು ಕೃಷಿ ಮಾಡುವ ಪ್ರಧಾನ ಸಾಧನಗಳಾದಾಗ ಮಾತ್ರ ಸುಸ್ಥಿರ ಏಳಿಗೆಯನ್ನು ಸಾಧಿಸುವುದು



ಸಾಧ್ಯ. ಅಭಿವೃದ್ಧಿಯ ಕೇಂದ್ರ ಮನುಷ್ಯನಾದಾಗ ಮಾತ್ರ ರಾಷ್ಟ್ರದ ಅಭ್ಯುದಯ ನಿರಂತರವಾಗಿರಲು ಸಾಧ್ಯ.

ಭಾರತದ ಹಳ್ಳಿಗಳು ಸಮೃದ್ಧವಾಗಲು ಅಗತ್ಯವಾದ ಯೋಜನೆಗಳನ್ನು ರೂಪಿಸಬೇಕು. ಗ್ರಾಮೀಣ ಜನರು ಸುಖಮಯ ಪೂರ್ಣಜೀವನವನ್ನು ಅನುಭವಿಸಬೇಕು. ಗ್ರಾಮೀಣ ಬದುಕು ವಿಕಾಸಗೊಳ್ಳಲು ಪೂರ್ಣ ಅವಕಾಶ ವಿರಬೇಕು. ಇಂತಹ ಹಳ್ಳಿಗಳನ್ನು ರೂಪಿಸಬೇಕೆನ್ನುವುದು ಗಾಂಧಿಯವರ ಗುರಿಯಾಗಿತ್ತು. ಸ್ವಸಂಪೂರ್ಣ, ಸುಸಂಘಟಿತ ಗ್ರಾಮಗಳ ರಚನೆ ಯೋಜನೆಯ ಗುರಿಯಾಗಬೇಕು. ಗ್ರಾಮೋದ್ಯೋಗಗಳನ್ನು ಬೆಳೆಸಲು, ಗ್ರಾಮಸ್ಥರು ಊರಿನ ಕೆಲಸವನ್ನು ಸುಸೂತ್ರವಾಗಿ ನಡೆಸಲು ವಿವಿಧೋದ್ದೇಶ ಸಹಕಾರ ಸಂಘಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು. ಸಹಕಾರ ಎಂದರೆ ಪೈಪೋಟಿ ಇಲ್ಲದೆ ಎಲ್ಲರಿಗೂ ಹಿತವಾಗುವಂತೆ ಪಾಲುಗಾರಿಕೆಯಲ್ಲಿ ಕೆಲಸ ಮಾಡುವುದು.

ಗಾಂಧೀಯ ಪ್ರಭಾವಕ್ಕೊಳಗಾದ ಪ್ರಮುಖ ಅರ್ಥಶಾಸ್ತ್ರಜ್ಞ ಷೂಮಾಕರ್ ತಮ್ಮ ಕೃತಿ 'ಸ್ಮಾಲ್ ಈಸ್ ಬ್ಯೂಟಿಫುಲ್' ಪ್ರಕಟಿಸಿ ಮಧ್ಯವರ್ತಿ ತಾಂತ್ರಿಕತೆಯ ಅಭಿವೃದ್ಧಿಯ ಅಗತ್ಯವನ್ನು ಪ್ರತಿಪಾದಿಸಿದ್ದಾರೆ. ತಾಂತ್ರಿಕತೆಯ ಸುಧಾರಣೆಯು ಮನುಷ್ಯ ಕೇಂದ್ರೀಕೃತವಾಗಿದೆ. ಮನುಷ್ಯನನ್ನು ಯಂತ್ರದ ದಾಸನನ್ನಾಗಿ ಮಾಡುವುದಾಗಲಿ, ಅಥವಾ ಅವನನ್ನು ತೆಗೆದುಹಾಕಿ ಅವನ ಸ್ಥಳವನ್ನು ಅದೇ ಆಕ್ರಮಿಸುವುದಾಗಲಿ ಕೂಡದು. ಈ ಚಿಂತನೆಯಿಂದ ಸ್ಫೂರ್ತಿಪಡೆದ ವಿವಿಧ ಸಂಘಟನೆಗಳು ಅನೇಕ ದೇಶಗಳಲ್ಲಿ ಮಧ್ಯವರ್ತಿ ತಾಂತ್ರಿಕತೆಯನ್ನು ವಿಸ್ತರಿಸುವಲ್ಲಿ ಸಫಲವಾಗಿವೆ. ಷೂಮಾಕರ್‌ರವರ ಹಲವು ಬರಹಗಳು ಆರ್ಥಿಕ ಅಭ್ಯುದಯಕ್ಕೆ ಗಾಂಧೀಯ ಕಾರ್ಯಕ್ರಮವನ್ನು ಪೂರ್ಣ ಮತ್ತು ಸಮಗ್ರವಾಗಿ ವರ್ಣಿಸುತ್ತವೆ.

ಗಾಂಧೀಯ ಆರ್ಥಿಕ ತತ್ವಶಾಸ್ತ್ರದಲ್ಲಿ ಆತ್ಮಸಂಯಮ, ಆತ್ಮನಿಗ್ರಹ, ಪಶುಬಲಕ್ಕೆ ವಿರುದ್ಧವಾಗಿ ಆತ್ಮಬಲ ವಿಜೃಂಭಿಸುತ್ತದೆ. ಇಂಥ ರಾಜ್ಯದಲ್ಲಿ ಪ್ರಾಮಾಣಿಕತೆ, ದುರ್ಬಲರಿಗೆ ಅಭಯ, ಸಾಮಾನ್ಯನಿಗೆ ನ್ಯಾಯ, ಶೋಷಣೆ ಮತ್ತು ವಂಚನೆರಹಿತ ಸಮಾಜ ಮುಂತಾದವುಗಳಿಂದ ಶಾಶ್ವತ ಅರ್ಥವ್ಯವಸ್ಥೆ ಉದಯಿ ಸುತ್ತದೆ.

(ಸಾಗರದಲ್ಲಿ ನಡೆದ ಗಾಂಧಿ ಚಿಂತನೆಗಳ ಕುರಿತ ಅಧ್ಯಯನ ಶಿಬಿರದಲ್ಲಿ ಮಂಡಿಸಿದ ಉಪನ್ಯಾಸ.)

## ನೀನಾಸಮ್ ರಂಗಶಿಕ್ಷಣ ಕೇಂದ್ರ

ಕೇಂದ್ರದ ವಿದ್ಯಾರ್ಥಿಗಳು ತಮ್ಮ ಅಭ್ಯಾಸಮಾಲಿಕೆಯ ಮೂರನೆಯ ನಾಟಕವಾಗಿ ದಿ. ಎಮ್. ಎಲ್. ಶ್ರೀಕಂಠೇಶಗೌಡರು ೧೮೯೭ರಲ್ಲಿ ರಚಿಸಿ ಪ್ರಕಟಿಸಿದ್ದ 'ಪ್ರಮೀಳಾರ್ಜುನೀಯಂ' (ಷೇಕ್ಸ್‌ಪಿಯರ್‌ನ 'ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್' ನ ರೂಪಾಂತರ) ನಾಟಕವನ್ನು ಮಾರ್ಚ್ ೨೭, ೨೮, ೨೯ ಮತ್ತು ೩೦ ರಂದು ಪ್ರದರ್ಶಿಸಿದರು (ನಿರ್ದೇಶನ: ಬಿ. ಆರ್. ವೆಂಕಟರಮಣ ಐತಾಳ). ಅಕ್ಷರ ಕೆ. ವಿ. ಅವರ ನಿರ್ದೇಶನದಲ್ಲಿ ಆಯ್ದ ನಾಟಕಗಳ ರಂಗಗೀತೆಗಳನ್ನಾಧರಿಸಿದ 'ಹಾಡೋಣ ಬಾ' ಎಂಬ ರಂಗಪ್ರಸ್ತುತಿಯನ್ನು ಎಪ್ರಿಲ್ ೨೪ ಮತ್ತು ೨೫ರಂದು ಪ್ರದರ್ಶಿಸಿದರು.

ಈನಡುವೆ ವಿದ್ಯಾರ್ಥಿಗಳು ಪ್ರೊಥಿಯೂ, ತಿಪಟೂರು ಪ್ರಸ್ತುತಪಡಿಸಿದ ನಾಟಕಗಳು – ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ, ಧರ್ಮದುರಂತ, ಮಾಸ್ತಿ ಮೂರು ಕಥೆ, ನಾನು, ಗೋಕುಲ ನಿರ್ಗಮನ, ಸಾಣೇಹಳ್ಳಿಯ ಶಿವಸಂಚಾರವು ಪ್ರಸ್ತುತಪಡಿಸಿದ ಮೂರು ನಾಟಕಗಳು, ಭರತ್ ಶರ್ಮ ಅವರ 'ಚಾಲಿ' ತಂಡವು ಪ್ರಯೋಗಿಸಿದ ಆಧುನಿಕ ನೃತ್ಯಪ್ರದರ್ಶನಗಳು, ಹುಚ್ಚೇಶ್ವರ ನಾಟಕ ಮಂಡಳಿಯವರ 'ಕಿವುಡ ಗಂಡನ ಕಿತಾಪತಿ' ಎಂಬ ಕಂಪೆನಿನಾಟಕ, ಸಾಗರದ ಉದಯ ಕಲಾವಿದರು ಪ್ರಯೋಗಿಸಿದ ಕೈಲಾಸಂ ಅವರ 'ನಂ ಕಂಪ್ನಿ' ಆಧರಿತ ನಾಟಕ ಹಾಗೂ ಕೆಲವು ಯಕ್ಷಗಾನ ಬಯಲಾಟಗಳನ್ನು ನೋಡಿ ಅವುಗಳ ಬಗ್ಗೆ ಚರ್ಚೆನಡೆಸಿದರು. ವಿದ್ಯಾರ್ಥಿಗಳ ಅಭ್ಯಾಸಾರ್ಥವಾಗಿ ಕೆ. ಎಸ್. ಶರತ್ ಅವರಿಂದ ಆಧುನಿಕ ಕನ್ನಡ ಕಾವ್ಯಗಳ ರಸಗ್ರಹಣ ಹಾಗೂನಟನಾಶಿಬಿರ, ಪುರುಷೋತ್ತಮ ತಲವಾಟ ಅವರಿಂದ ಮೊಗವಾಡ ತಯಾರಿ ಮತ್ತು ಗುರುಮೂರ್ತಿ ವರದಾಮೂಲ ಅವರಿಂದ ಸ್ಕ್ರೀನ್‌ಪ್ರಿಂಟಿಂಗ್ ಕಾರ್ಯಾಗಾರಗಳನ್ನು ನಡೆಸಲಾಗಿದೆ. ಫೆಬ್ರವರಿ ೯ ಮತ್ತು ೧೦ರಂದು ಭರತ್ ಶರ್ಮ ಮತ್ತು ತಂಡದವರು ಆಧುನಿಕ ನೃತ್ಯವನ್ನು ಕುರಿತು ಶಿಬಿರವೊಂದನ್ನು ನಡೆಸಿಕೊಟ್ಟಿದ್ದರು. ಎಪ್ರಿಲ್ ಮೊದಲವಾರ ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಹೆಗ್ಗೋಡಿನಲ್ಲಿ ನಡೆಸಿದ 'ನಾಟಕ ರಚನಾ ಶಿಬಿರ' ದಲ್ಲಿ ರಂಗಶಿಕ್ಷಣ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಪ್ರಶ್ನೋತ್ತರದ ಮತ್ತೊಂದಿಷ್ಟು ಮಾದರಿಗಳು

ಜಸವಂತ ಜಾಧವ

ಪ್ರಶ್ನೆಗಳಲ್ಲಿ ಅನೇಕ ಪರಿಯ ಪ್ರಶ್ನೆಗಳಿರುವುದುಂಟು: ಕೆಲವು ಪ್ರಶ್ನಾತೀತ ಪ್ರಶ್ನೆಗಳಾಗಿದ್ದರೆ ಇನ್ನು ಕೆಲವು ಪ್ರಶ್ನಾರ್ಹ ಪ್ರಶ್ನೆಗಳಾಗಿರುತ್ತವೆ. ಕೆಲವು ಉತ್ತರ ಸಾಧ್ಯವಾದುವಾದರೆ ಇನ್ನು ಕೆಲವು ಉತ್ತರಾತೀತವಾಗಿರುತ್ತವೆ. ಉತ್ತರಸಾಧ್ಯ ಪ್ರಶ್ನೆಗಳಲ್ಲಿ ಕೆಲವಕ್ಕೆ ಒಂದೆ ಉತ್ತರ ಸಾಧ್ಯ; ಇನ್ನು ಕೆಲವಕ್ಕೆ ಒಂದಕ್ಕಿಂತ ಹೆಚ್ಚು ಉತ್ತರಗಳು ಸೂಕ್ತ. ಕೆಲವು ಪ್ರಶ್ನೆಗಳು ತಮ್ಮ ಧ್ವನಿಯಲ್ಲಿಯೆ ಉತ್ತರದ ಪ್ರತಿಧ್ವನಿಯನ್ನೂ ಅಡಗಿಸಿಕೊಂಡಿರುವುದುಂಟು; ಇನ್ನು ಕೆಲವು ತಮ್ಮನ್ನು ಎದುರುಗೊಂಡ ಎಲ್ಲ ಉತ್ತರಗಳನ್ನೂ ಅಣಕಿಸುವುದುಂಟು. ಕೆಲವು ಪ್ರಶ್ನೆಗಳಿಗೆ ಬರಿಯೆ 'ಹೌದು' ಅಥವಾ 'ಇಲ್ಲ' ವೆನ್ನುವ ಉತ್ತರಗಳನ್ನು ನೀಡಬಹುದು; ಇನ್ನು ಕೆಲವಕ್ಕೆ 'ಹೌದು – ಹಾಗೆಯೆ – ಇಲ್ಲ' ವೆನ್ನುವ ದ್ವಂದ್ವ ಸಮೃದ್ಧ ಉತ್ತರಗಳನ್ನು ನೀಡಬೇಕಾಗುವುದು. ಕೆಲವೊಮ್ಮೆ ಪ್ರಶ್ನೆಗಳಿಗಿಂತ ಉತ್ತರಗಳೆ ಹೆಚ್ಚು ಅರ್ಥಪೂರ್ಣವಾಗಿರಬಹುದು; ಇನ್ನು ಕೆಲವೆಡೆ ಉತ್ತರಗಳಿಗಿಂತ ಪ್ರಶ್ನೆಗಳೆ ಹೆಚ್ಚು ಮಹತ್ವದವಾಗಿರಬಹುದು. ಕೆಲವು ಸನ್ನಿವೇಶಗಳಲ್ಲಿ ಪ್ರಶ್ನಾವಳಿಯನ್ನು ಬೆಳೆಸುವುದಕ್ಕಿಂತ ಉತ್ತರಗಳನ್ನು ಕಂಡುಕೊಳ್ಳುವುದೆ ಮುಖ್ಯವಾಗಬಹುದು; ಇನ್ನು ಕೆಲವೆಡೆ ಉತ್ತರಗಳ ಸಮಾಧಾನಕ್ಕಿಂತ ಪ್ರಶ್ನೆಗಳ ಸಂದೇಹವೆ ಹೆಚ್ಚು ಮೌಲಿಕವಾಗಬಹುದು. ಕೆಲವೊಮ್ಮೆ ಉತ್ತರಗಳು ನೀಡುವ ಪ್ರಸನ್ನತೆಗಿಂತ ಪ್ರಶ್ನೆಗಳ ಪರದಾಟವೆ ಹೆಚ್ಚು ಪ್ರಸ್ತುತವೆನ್ನಿಸಬಹುದು.

ಪ್ರಶ್ನೋತ್ತರದ ಈ ಪರಿಯ ಮಾಯೆಯ ಅರಿಯದವರು ಯಾರು?

– ಇದೆಲ್ಲ ಹೌದೆಂಬುದಾದಲ್ಲಿ

– 'ಕೌನ್ ಬನೇಗಾ ಕರೋಡ್‌ಪತಿ' ಗೆ 'ಸವಾಲ್ ದಸ್ ಕರೋಡ್ ಕಾ' ಸವಾಲೆ ಅಥವಾ ಜವಾಬೆ? ಅಥವಾ ಅದು ಎರಡೂ ಇರಬಹುದೆ? ಇಲ್ಲ, ಅವುಗಳ ಜನಪ್ರಿಯತೆಯ ಪ್ರವಾಹ ಉಕ್ಕಿಹರಿಯುತ್ತಿರುವಾಗ ಇಂಥ ಪ್ರಶ್ನೆಗಳೆ ಅಪ್ರಸ್ತುತವೆ?

ಪ್ರಸ್ತುತ ಭಾರತೀಯ ಟೆಲಿವಿಷನ್ ರಂಗದಲ್ಲಿ ಇಂಥ ಏಕಮುಖಿ ಪ್ರಶ್ನೆಗಳು ಹಾಗೂ ಏಕರೂಪಿ ಉತ್ತರಗಳ ಕಾರ್ಯಕ್ರಮ ಧಾರೆ ಏಕಪ್ರಕಾರವಾಗಿ ಸುರಿಯ ತೊಡಗಿದೆ. ಇವುಗಳಲ್ಲಿ 'ಬೋರ್ನ್‌ವಿಟಾ ಕ್ವಿಜ್ ಕಾಂಟೆಸ್ಟ್' ಹಲವು ವರ್ಷಗಳಷ್ಟು, ಬಿಬಿಸಿಯ 'ಮಾಸ್ಟರ್ ಮೈಂಡ್ ಇಂಡಿಯಾ' ಹಲವು ತಿಂಗಳುಗಳಷ್ಟು ಹಳೆಯವು. ಇವೆರಡೂ ಕೂಡಾ ಇಂದಿಗೂ ಪುಟ್ಟಪುಟ್ಟ ಗುಂಪುಗಳಲ್ಲಷ್ಟೆ ಖ್ಯಾತವಾಗಿರುವಂಥವು. ಇತ್ತೀಚೆಗೆ ಪ್ರಾರಂಭಗೊಂಡ 'ಕೌನ್ ಬನೇಗಾ ಕರೋಡ್‌ಪತಿ' ಮಾತ್ರ ಇವೆರಡರ ಜನಪ್ರಿಯತೆಯ ಪರಿಮಿತಿಗಳನ್ನೆಲ್ಲ ಕಿತ್ತು ಬಿಸುಡಿದೆ; ಆ ಉನ್ಮತ್ತತೆಯಲ್ಲಿ ಅನೇಕ ಕ್ಲೋನುಗಳನ್ನು ಹೆತ್ತಿದೆ.

ಪ್ರಸಕ್ತ ಲೇಖನ ಇಂಥ ಕಾರ್ಯಕ್ರಮಗಳ ಪರಿಯನ್ನು ನೆಪಮಾತ್ರವಾಗಿಟ್ಟು ಕೊಂಡು, ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು ಹುಡುಕುವ, ಹಾಗೆಯೆ ಆ ಉತ್ತರಗಳಿಗೆ ಪ್ರತಿಪ್ರಶ್ನೆಗಳನ್ನು ಹುಟ್ಟಿಸುವ ಒಂದು ಪರದಾಟದ ಪ್ರಯತ್ನ. ಅಥವಾ, ಇದು ಪ್ರಶ್ನೆಗಳಿಗೆ ಉತ್ತರಗಳನ್ನು ಸೃಷ್ಟಿಸುವ, ಆ ಉತ್ತರಗಳಿಗೆ ಪ್ರತಿಪ್ರಶ್ನೆಗಳನ್ನು ಹುಟ್ಟಿಸುವ ಪ್ರಯಾಸದ ಪ್ರಯೋಗ ಏರಬಹುದೆ? – ಈ ಪ್ರಶ್ನೆಗಂತೂ ಸ್ವತಃ ಯಾವ ಉತ್ತರವೂ ತೋಚದು.

ಅದೇನೆ ಇರಲಿ, ಇದೂ ಒಂದು ಆಟ; ರಸಪ್ರಶ್ನೋತ್ತರದ ಬೇರೊಂದು ಬಗೆಯ ಆಟ. ಒಂದೆ ಉತ್ತರಕ್ಕೆ ತೃಪ್ತಿಗೊಂಡು ತೇಗಲಾಗದ ಪ್ರಶ್ನೆಗಳು ಹಾಗೂ ಕೇಳಿದಷ್ಟನ್ನೆ ಹೇಳಿ ತೆಪ್ಪಗಿರಲಾರದ ಉತ್ತರಗಳ ನಡುವಿನ ಸಸ-ವಿರಸದ ಒಂದು ಜೋಡಾಟ.

– ಹಾಗಾಗಿ ಇಲ್ಲಿ ತುಸು ಮೆಚ್ಚುಗೆ ತುಸು ಮತ್ಸರಗಳ, ಅರೆವ್ಯಂಗ್ಯ ಅರೆ ವಿನೋದಗಳ ಕಲಬೆರಕೆಯಿದೆ; ಅರ್ಧ ವಾಸ್ತವತೆ ಅರ್ಧ ಕಲ್ಪಕತೆಗಳ ಹಸಿಬಿಸಿ ಮಿಶ್ರಣವಿದೆ. ಇಲ್ಲಿ ಹಲವೆಡೆ ಉತ್ತರಕುಮಾರನ ಪೌರುಷವಿರುವುದಂತೂ ನಿಶ್ಚಿತ; ಜೊತೆಗೆ ಪ್ರಶ್ನಕುಮಾರನ ವಿನಯವೂ ಒಂದಿಷ್ಟು ಇರುವುದೆ ಎನ್ನುವುದನ್ನು ತಿಳಿದವರು ಹೇಳಬೇಕು.

ಸರಿ, ಇನ್ನು ಆಟವನ್ನು ಆರಂಭಿಸಬಹುದೆ?

••• ••• •••

ಆಟದ ಮೊದಲ ಹಂತದಲ್ಲಿ, ಪ್ರಾರಂಭಿಕನೋರ್ವನ ರೀತಿಯಲ್ಲಿ, 'ಕೌನ್ ಬನೇಗಾ ಕರೋಡ್‌ಪತಿ' ಯಂತಹ ಕಾರ್ಯಕ್ರಮಗಳ ಬಗ್ಗೆ ಇಂಥ ಕೆಲವು ಸರಳ ಪ್ರಶ್ನೆಗಳನ್ನು ಕೇಳಬಹುದು:

– ಯಾವುದೋ ದೇಶವೊಂದರ ರಾಜಧಾನಿ, ಯಾವುದೋ ದಿಕ್ಕೊಂದರ



ತುಟ್ಟತುದಿಯ ಭೂಭಾಗ, ಯಾವುದೋ ಒಂದು ಘಟನೆ ಜರುಗಿದ ವರ್ಷ, ಯಾವುದೋ ಚಲನಚಿತ್ರ ನಟನಟಿಯರ ನಿಜ ನಾಮಧೇಯ, ಇತ್ಯಾದಿ ಮಾಹಿತಿ ಸಂಗ್ರಹಕ್ಕೆ ಸಂಬಂಧಿಸಿದಂಥ ಇಪ್ಪತ್ತೆರಡು ಪ್ರಶ್ನೆಗಳನ್ನು ಉತ್ತರಿಸುವುದು ಮಹಾದೊಡ್ಡ ಸಾಧನೆಯೆ? ಲಕ್ಷ/ಕೋಟಿ ರೂಪಾಯಿಗಳ ಪುರಸ್ಕಾರಕ್ಕೆ ಅರ್ಹವಾದಂಥ ಸಿದ್ಧಿಯೆ?

– ದೂರವಾಣಿ ಸಂಪರ್ಕದ ಸೌಭಾಗ್ಯ ದೊರಕುವ ವಿಧಾನ, ಲಕ್ಷಗಟ್ಟಲೆ ಸ್ಪರ್ಧಾಕಾಂಕ್ಷಿಗಳ ನಡುವೆ ನಡೆವ ಅಂತಿಮ ಸ್ಪರ್ಧಿಗಳ ಆಯ್ಕೆಯ ಕ್ರಮ, ಅವರು ಕೊನೆಗೆ ಎದುರಿಸುವ ಪ್ರಶ್ನೆಗಳ ಸರಣಿ – ಈ ಎಲ್ಲ ಘಟ್ಟಗಳಲ್ಲೂ ಸ್ಪಷ್ಟವಾಗಿ ಕಾಣುವುದು ಅರ್ಹತೆಗಿಂತ ಅದೃಷ್ಟದ ಮೇಲಾಟವಲ್ಲವೆ?

– ಸುಮಾರಾಗಿ ಇಪ್ಪತ್ತರಿಂದ ಅರವತ್ತರಷ್ಟು ಭಿನ್ನ ವಯೋಮಾನ ದವರನ್ನು ಒಟ್ಟಿಗೆ ಸೇರಿಸಿ, 'ಅತಿ ಚುರುಕು ಕೈಬೆರಳು' ಗಳ ಮುಖಾಂತರ ಅವರಲ್ಲೋರ್ವನನ್ನು ಸ್ಪರ್ಧೆಯ ಮುಂದಿನ ಹಂತಕ್ಕೆ ಆಯುವಲ್ಲಿ, ಉತ್ತರ ಗೊತ್ತಿದ್ದ ಒಬ್ಬ ಯುವಕ ಹಾಗೂ ಒಬ್ಬ ವೃದ್ಧನ ಮಧ್ಯೆ ಅತಿಸಾಮಾನ್ಯವಾಗಿ ಯುವಕ ಗೆಲ್ಲುವಂತಾಗುವಲ್ಲಿ, ಬುದ್ಧಿಗಿಂತ ಬೆರಳ ಶಕ್ತಿಯ ಮೇಲುಗೈ ಯಾದಂತನಿಸುವುದಿಲ್ಲವೆ?

– ಕಾರ್ಯಕ್ರಮದಲ್ಲಿ ಪ್ರಶ್ನೆಗಳಷ್ಟೆ ಬಾರಿ ಪ್ರತಿಯೊಂದು ಪ್ರಶ್ನೆ ಹೊತ್ತಿರುವ ಬಹುಮಾನ ಧನದ ಮೊತ್ತ ಪುನರುಚ್ಚಾರಗೊಳ್ಳುವುದು ಕಾರ್ಯಕ್ರಮದ ಪ್ರಧಾನ ಲಕ್ಷ್ಯ ಪ್ರಶ್ನೋತ್ತರದ ಕಡೆಗೊ, ಇಲ್ಲ ಲಕ್ಷಗಟ್ಟಲೆ ಹಣದ ಕಡೆಗೊ ಎನ್ನುವ ಗೊಂದಲವನ್ನು ಹುಟ್ಟಿಸುವುದಿಲ್ಲವೆ?

ಇಂಥೆಲ್ಲ ಪ್ರಶ್ನೆಗಳಿಗೆ ಅಷ್ಟೇ ನೇರ ಸರಳ ಉತ್ತರಗಳು ಸಾಧ್ಯ. ಉದಾಹರಣೆಗೆ,

– ಕಾರ್ಯಕ್ರಮದ ಸ್ವರೂಪ ನಿರ್ಧರಿಸುವುದು ನಿರ್ಮಾಪಕ – ಪ್ರಾಯೋಜಕ-ನಿರ್ವಾಹಕರ ಇಷ್ಟಾನಿಷ್ಟಗಳಿಗೆ ಬಿಟ್ಟ ವಿಷಯ; ಇಷ್ಟೆ ಸಾಧನೆಗೆ ಅಷ್ಟೆಲ್ಲ ಬಹುಮಾನ ನೀಡುವುದು ಅವರ ಖುಷಿಯ ವಿಷಯ; ಅದನ್ನು ಪ್ರಶ್ನಿಸಲು ನಾವು ಯಾರು?

– ಇಂಥದರ ಮುಖಾಂತರವಾದರೂ ನಮ್ಮಂಥವರ ಸಾಮಾನ್ಯ ಜ್ಞಾನ ಬೆಳೆಯುತ್ತಿದೆಯಲ್ಲ; ಇದನ್ನು ಯಾರು ತಾನೆ ಅಲ್ಲಗಳೆಯಲು ಸಾಧ್ಯ?

– ಆಧುನಿಕ ಜಗತ್ತಿನಲ್ಲಿ ಮಾಹಿತಿಯೆ ಮುಖ್ಯ ಶಕ್ತಿಯಾಗಿರುವಲ್ಲಿ ಅದನ್ನು ಹೀಗೆ ಹಣ ಗಳಿಸುವ ಹೂಡಿಕೆಯೊಂದಾಗಿ ಹೀಗೆ ಬಳಸುವುದರಲ್ಲಿ ತಪ್ಪೇನಿಲ್ಲವಲ್ಲ?

••• ••• •••

ಪ್ರಶ್ನೋತ್ತರದ ಈ ಒಂದು ಪರಿ ಬರಿಯೆ ನೀತಿಸೀಮಿತವೆಂದು ಬೋರಾದಲ್ಲಿ,

ಬೇರೊಂದು ಪರಿಯನ್ನು ಸ್ವಲ್ಪ ಪರಿಶೀಲಿಸಬಹುದು, ಹೀಗೆ –

– 'ಕೌನ್ ಬನೇಗಾ ಕರೋಡ್‌ಪತಿ', 'ಸವಾಲ್ ದಸ್ ಕರೋಡ್ ಕಾ', 'ಬೋರ್ನ್‌ವಿಟಾ ಕ್ವಿಜ್ ಕಾಂಟೆಸ್ಟ್', 'ಮಾಸ್ಟರ್‌ಮೈಂಡ್ ಇಂಡಿಯಾ' ಗಳಂತಹ ಕಾರ್ಯಕ್ರಮಗಳು ಪುಸ್ತಕಗಳಲ್ಲಿ ದೊರೆಯುವ ಹಾಗೂ ನಗರ ಕೇಂದ್ರಿತವಾದ ಸಂಗತಿಗಳ ಬಗ್ಗೆಯಷ್ಟೆ ಪ್ರಶ್ನೆಗಳನ್ನು ಕೇಳುತ್ತವಲ್ಲ; ಜೀವನಾನುಭವದಲ್ಲಿ ದಕ್ಕುವ, ಗ್ರಾಮಗಳಲ್ಲಿ ಕಂಡುಬರುವ ಇಲ್ಲ ಅಡುಗೆಮನೆಗೆ ಸಂಬಂಧಿಸಿದ ಸಂಗತಿಗಳ ಬಗ್ಗೆ ಏಕೆ ಅವು ಪ್ರಶ್ನೆಗಳನ್ನು ಕೇಳುವುದಿಲ್ಲ? ಉದಾಹರಣೆಗೆ, 'ಇಂಥದೊಂದು ಜಾತಿಯ ಹಸು ಒಂದು ಹೊತ್ತಿಗೆ ಎಷ್ಟು ಹಾಲು ನೀಡುತ್ತದೆ?' ; 'ಒಂದು ಎಕರೆ ಗದ್ದೆಯಲ್ಲಿ ಇಂಥ ಭತ್ತ ಬೆಳೆಯಲು ಎಷ್ಟು ಕೇಜಿ ಗೊಬ್ಬರ ಹಾಕಬೇಕು?'; 'ಒಂದು ಕಪ್ ಕಾಫಿ ಮಾಡಲು ಸಕ್ಕರೆ ಎಷ್ಟು ಬೇಕು?' ಎನ್ನುವ ರೀತಿಯ ಪ್ರಶ್ನೆಗಳಿಗೇಕೆ ಅಲ್ಲಿ ಜಾಗವಿಲ್ಲ? – ಎನ್ನುವ ಪ್ರಶ್ನೆಗೆ –

ಜಗತ್ತಿನಲ್ಲಿ ಸಿಗುವ ಎಲ್ಲ ಮಾಹಿತಿಯನ್ನೂ ಸೂತ್ರ ರೂಪಕ್ಕಿಳಿಸಲಾಗುವುದಿಲ್ಲ; ಎಲ್ಲ ಕಾಲಗಳಿಗೂ ದೇಶಗಳಿಗೂ ಜನರಿಗೂ ಸಮಾನವಾಗಿ ಅನ್ವಯವಾಗುವ ಕೆಲವು ರೀತಿಗಳ ಮಾಹಿತಿಯನ್ನು ಮಾತ್ರ ಸ್ಥಿರ ಮಾನದಂಡದ ಸೂತ್ರದಲ್ಲಿ ಹೆಣೆಯಲು ಸಾಧ್ಯ. ಉದಾಹರಣೆಗೆ, ಒಂದೆ ಜಾತಿಯ ಬೇರೆಬೇರೆ ಹಸುಗಳು ಒಂದು ಹೊತ್ತಿಗೆ ಬೇರೆ ಬೇರೆ ಪ್ರಮಾಣಗಳಲ್ಲಿ ಹಾಲು ನೀಡುವುದುಂಟು; ಒಂದು ಎಕರೆ ಭತ್ತದ ಗದ್ದೆಗೆ ಬೇಕಾಗುವ ಗೊಬ್ಬರದ ಪ್ರಮಾಣ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆಬೇರೆಯಿರುವುದುಂಟು; ಒಂದು ಕಾಫಿಗೆ ಸಕ್ಕರೆಯೆಷ್ಟು ಎನ್ನುವುದು ವ್ಯಕ್ತಿಯಿಂದ-ವ್ಯಕ್ತಿಗೆ ಭಿನ್ನವಾಗುವುದುಂಟು. ಇಂಥ ಮಾಹಿತಿಗೆ ಸರ್ವಾನ್ವಯದ ಶಕ್ತಿ ಇಲ್ಲವಾದ್ದರಿಂದ ಅದನ್ನು ಸ್ಥಿರಪ್ರಮಾಣವಾಗಿ ಸೂತ್ರೀಕರಿಸಲು ಸಾಧ್ಯವಿಲ್ಲ; ಹಾಗಾಗಿ ಅದನ್ನು ಇಂಥ ಪ್ರಶ್ನೋತ್ತರಗಳಲ್ಲಿ ಬಳಸುವುದು ಸಾಧ್ಯವಿಲ್ಲ – ಎಂದು ಉತ್ತರಿಸಬಹುದು.

ಹಾಗೆಯೆ –

– ಮಾನವ ನಾಗರಿಕತೆಯ ಇತಿಹಾಸದುದ್ದಕ್ಕೂ ಮಾಹಿತಿಗಿಂತ ಜ್ಞಾನ ಮೇಲು, ಜ್ಞಾನಕ್ಕಿಂತ ವಿವೇಕ ಮೇಲು ಎನ್ನುವ ಒಂದು ನಂಬುಗೆ ಬೆಳೆದು ಬಂದಿದೆಯಲ್ಲ; ಜ್ಞಾನದ ಮಟ್ಟಿಗೂ knowledge about things ಗಿಂತಲೂ knowledge of things ಹೆಚ್ಚು ಬೆಲೆಬಾಳುವಂಥಾದ್ದು ಎನ್ನುವ ತಿಳುವಳಿಕೆಯಿದೆಯಲ್ಲ; ಇಂಥ ಹಿನ್ನೆಲೆಯಲ್ಲಿ, ವಿವೇಕ, ಜ್ಞಾನಗಳನ್ನು ಮರೆಸುವಂತೆ ಮಾಹಿತಿಯನ್ನೆ ಹೀಗೆ ಮೆರೆಸುವುದು ಎಷ್ಟು ಸರಿ? - ಎಂಬ ಪ್ರಶ್ನೆಗೆ –

ಇಂಥ ಭಿನ್ನ ಸ್ತರಗಳ ವಿಷಯ ತಿಳಿದಿಲ್ಲವೆಂದಲ್ಲ. ಆದರೆ ಜ್ಞಾನ-ವಿವೇಕಗಳದ್ದು



ತುಸು ಕಷ್ಟದ ವಲಯ; ಅದಕ್ಕೆ ಹೊರತಾಗಿ, ನಿತ್ಯ ಜಂಜಡಗಳ ನಡುವೆ ಕೊಂಚ ಖುಷಿಯಲ್ಲಿ ಕಾಲ ಕಳೆಯುವ ಕ್ರಮಗಳೂ ಉಂಟಲ್ಲ. ಹಾಗಾಗಿ, ಇಂಥ quiz show ಗಳು, ತುಸು ಮಾಹಿತಿ ತುಸು ಮನರಂಜನೆಯನ್ನು ಬೆರೆಸಿ ನೀಡುವ infotainment ನ ಕಾರ್ಯಕ್ರಮಗಳಿಗೂ ಜೀವನದಲ್ಲಿ ಒಂದು ಜಾಗವುಂಟಲ್ಲ – ಎಂಬ ಉತ್ತರ ಬರುವುದು.

ಅಥವಾ, ಒಂದಿಷ್ಟು ಅದಲಿ-ಬದಲಿ ಆಟದ ಮಾದರಿಯಲ್ಲಿ –

– 'ಬೋರ್ನ್‌ವಿಟಾ ಕ್ವಿಜ್ ಕಾಂಟೆಸ್ಟ್' ನಲ್ಲಿ ವಿಜೇತರಿಗೆ ಕೊಡಲಾಗುವ ಬಹುಮಾನದ ಮೊತ್ತ ಸಾವಿರಗಟ್ಟಲೆ ಮಾತ್ರ; 'ಮಾಸ್ಟರ್ ಮೈಂಡ್ ಇಂಡಿಯಾ' ದಲ್ಲಿ ಚಿಕ್ಕಾಸೂ ಇಲ್ಲ. ಒಂದು ವೇಳೆ 'ಕರೋಡ್‌ಪತಿ - ದಸ್ ಕರೋಡ್' ಗಳಲ್ಲೂ ಬಹುಮಾನದ ಅಂತಿಮ ಮೊತ್ತ ಬರಿಯೆ ಸಾವಿರಗಳ ಲೆಕ್ಕದಲ್ಲಿದ್ದಿದ್ದಿಷ್ಟು ಅವು ಇಷ್ಟು ಜನಪ್ರಿಯವಾಗುತ್ತಿದ್ದವೆ? ಈ ಕಾರ್ಯಕ್ರಮಗಳ ಪ್ರಸಿದ್ಧಿ ಕೊನೆಗೂ ಹಣವನ್ನೆ ಅವಲಂಬಿಸಿಲ್ಲವೆ?

– ಇರಲಿ, ಅವು ಕೋಟಿಗಟ್ಟಲೆ ಹಣವನ್ನೆ ಹೇರಿಕೊಂಡಿರಲಿ. ಆದರೆ ಅವುಗಳಲ್ಲಿ, ಕ್ವಿಜ್ ಷೋ ಕ್ಷೇತ್ರಕ್ಕೆ ಇದೆ ಮೊದಲ ಬಾರಿಗೆ ಪ್ರವೇಶಿಸಿರುವ ಅಮಿತಾಬ್ ಬಚ್ಚನ್ ಬದಲು, ಆ ಕ್ಷೇತ್ರದಲ್ಲಿ ವರ್ಷಗಟ್ಟಲೆ ದುಡಿದಿರುವ ಡೆರೆಕ್ ಓ 'ಬ್ರಯನ್ ಅಥವಾ ಸಿದ್ಧಾರ್ಥ ಬಸು ಕ್ವಿಜ್ ಮಾಸ್ಟರರಾಗಿದ್ದರೆ ಅವುಗಳಿಗ ಇಷ್ಟೆ ಜನಪ್ರಿಯತೆ ದೊರಕುತ್ತಿತ್ತೆ? ಅರ್ಥಾತ್ 'ಕರೋಡ್ ಪತಿ' ಯ ಖ್ಯಾತಿಗೆ ಅಮಿತಾಬ್‌ನ ಚಲನಚಿತ್ರ ತಾರಾಖ್ಯಾತಿಯೆ ಹೆಚ್ಚು ಕಾರಣವಲ್ಲವೆ? ಉಳಿದಿಬ್ಬರು ಎಷ್ಟೇ ಪರಿಶ್ರಮಿಗಳಿರಲಿ, ಅವರು ಚಲನಚಿತ್ರ ತಾರೆಗಳಲ್ಲವೆಂಬ ಒಂದು ಕಾರಣಕ್ಕೆಯೆ ಅವರ ಕಾರ್ಯಕ್ರಮಗಳು ಅಷ್ಟು ಪ್ರಸಿದ್ಧಿ ಪಡೆದಿಲ್ಲ ಹೌದೆ?

– ಅದೂ ಇರಲಿ; ಆದರೆ, ಒಂದು ಪಕ್ಷ ಇವಿಷ್ಟೂ ಕಾರ್ಯಕ್ರಮಗಳು ಒಂದೊಂದು ಚಾನೆಲ್‌ನಲ್ಲಿ, ಒಂದೇ ವೇಳೆಯಲ್ಲಿ ಪ್ರಸಾರವಾಗುತ್ತಿದ್ದರೆ ನಾವು ಆಯ್ದು ನೋಡುವುದು ಯಾವ ಒಂದನ್ನು? ಜ್ಞಾನ- ಮಾಹಿತಿ-ಹಣಗಳ ನಡುವೆ ನಮ್ಮ ಆದ್ಯತೆ ಯಾವುದೆಂಬುದನ್ನು ಇಂಥ ಆಯ್ಕೆಯೆ ಸೂಚಿಸುವುದಿಲ್ಲವೆ?

– ಎನ್ನುವ ಪ್ರಶ್ನೆಗಳನ್ನೆತ್ತಿದರೆ, ಅವುಗಳಿಗೆ ಭಿನ್ನಭಿನ್ನ ಉತ್ತರಗಳು ಹುಟ್ಟಬಹುದು.

ಪ್ರಶ್ನೋತ್ತರದ ಈ ಮಾದರಿಯೂ ಬರಿಯೆ ಜಾಣತನದ್ದೆಂದು ಬೇಸರ ತರಿಸಿದಲ್ಲಿ–

ಭಾರತೀಯ ಟೆಲಿವಿಷನ್ ಜಗತ್ತಿನ ಪ್ರಾಚೀನ ಇತಿಹಾಸವನ್ನು ಒಂದಿಷ್ಟು

ಅಗೆದಲ್ಲಿ ಪ್ರಶ್ನೋತ್ತರದ ಮಗುದೊಂದು ಬಗೆ ತುಸು ತೋರಬಹುದೆ ?

••• ••• •••

ಹಾಗೆ ನೋಡಿದರೆ, ಅದು ತೀರ ಇತ್ತೀಚಿನ ಪ್ರಾಚೀನ; ಕಾಲಗತಿಯ ಒಂದು ಲೆಕ್ಕದಲ್ಲಿ ಇಪ್ಪತ್ತೈದು ವರ್ಷಗಳಷ್ಟು ಈಚಿನದಾದರೂ ಭಾರತೀಯ ಟೆಲಿವಿಷನ್ ಇತಿಹಾಸದ ಲೆಕ್ಕದಲ್ಲಿ ಪುರಾತನ.

ಅದು ಆಧುನಿಕ ಸ್ವತಂತ್ರ ಭಾರತ ಇಪ್ಪತ್ತೈದರ ಹರೆಯ ತುಂಬ ಸಂಭ್ರಮಿಸುತ್ತಿದ್ದ ಕಾಲವಾಗಿತ್ತು; ಕೃಷಿ-ವಿಜ್ಞಾನ-ಉದ್ಯಮ-ಆರ್ಥಿಕತೆ ಇತ್ಯಾದಿಗಳಲ್ಲೆಲ್ಲ ದೇಶ ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಹೊರಳಿಕೊಂಡ ಕಾಲಘಟ್ಟವಾಗಿತ್ತು. ಆಗ, ೧೯೭೫-೭೬ರ ಅವಧಿಯಲ್ಲಿ ಭಾರತ ಬಾಹ್ಯಾಕಾಶ ಯೋಜನೆಯಡಿಯಲ್ಲಿ ತನ್ನ ಮೊತ್ತ ಮೊದಲ ಎರಡು ಕೃತಕ ಉಪಗ್ರಹಗಳನ್ನು ಹಾರಿಬಿಟ್ಟಿತು. ಜೊತೆಗೆಯೆ ಅದು ಅದೇ ವರ್ಷಗಳಲ್ಲಿ ಅನನ್ಯವಾದುದೊಂದು ಜನಶಿಕ್ಷಣ ಯೋಜನೆಯನ್ನೂ ನಡೆಸಿತು. ಅಮೆರಿಕೆಯ ಎ.ಟಿ.ಎಸ್-೬ ಎಂಬ ಉಪಗ್ರಹವನ್ನು ಬಳಸಿಕೊಂಡು ಯೋಜಿಸಲಾದ ಈ ಕಾರ್ಯಕ್ರಮದ ಫಲಾನುಭವಿಗಳು ಕೆಲವು ಆಯ್ದ ಗ್ರಾಮೀಣ ಪ್ರದೇಶಗಳ ರೈತಾಪಿ ಜನರಾಗಿದ್ದರು. ನಿತ್ಯ ಸಂಜೆ ನಿರ್ದಿಷ್ಟ ವೇಳೆಯಲ್ಲಿ ಉಪಗ್ರಹದ ಮೂಲಕ ಆರೋಗ್ಯ, ನೈರ್ಮಲ್ಯ, ಸುಧಾರಿತ ಕೃಷಿ ಪದ್ಧತಿಗಳಂತಹ ವಿಷಯಗಳ ಬಗ್ಗೆ ಕಾರ್ಯಕ್ರಮಗಳನ್ನು ಬಿತ್ತರಿಸಿ, ನೆಲದ ಮೇಲೆ ನಿಲ್ಲಿಸಿದ್ದ ಡಿಷ್‌ಗಳ ಮುಖಾಂತರ ಅವನ್ನು ಸ್ವೀಕರಿಸಿ, ಹಳ್ಳಿಹಳ್ಳಿಗಳ ಶಾಲೆ ಪಂಚಾಯತಿ ಕಟ್ಟಡಗಳಲ್ಲಿರಿಸಿದ್ದ ಟೆಲಿವಿಷನ್ ಸೆಟ್‌ಗಳಲ್ಲಿ ಪ್ರದರ್ಶಿಸಲಾಗುತ್ತಿತ್ತು. Satellite Instructional Television Experiment (SITE) ಎಂಬ ಈ ಯೋಜನೆ ಜಗತ್ತಿನಲ್ಲೇ ಅತ್ಯಂತ ಅಪರೂಪದ್ದೆಂಬ ಮನ್ನಣೆ ಗಳಿಸಿಕೊಂಡಿತ್ತು. ಈ ಯೋಜನೆಯಲ್ಲಿ ಹಳ್ಳಿಗಳ ರೈತರು ಹಾಗೂ ಶ್ರಮಜೀವಿಗಳು ಕೇಂದ್ರವಾಗಿದ್ದರು.

ಇಂದು ಭಾರತೀಯ ಟೆಲಿವಿಷನ್ ಜಗತ್ತಿನಲ್ಲಿ ರೈತರು-ಶ್ರಮಿಕರು-ಬಡವರು ಕಂಡುಬರುವುದು ಅತ್ಯಂತ ಅಪರೂಪವಾಗಿ. ಅದೂ ಕೂಡ ಎಲ್ಲೋ ಒಂದು ಚಂಡಮಾರುತ, ಕ್ಷಾಮ, ಪ್ರವಾಹ, ಬೆಳೆ ನಾಶ, ಬೆಲೆ ಕುಸಿತದಂತಹ ವಿದ್ಯಮಾನ ಅವರನ್ನು ಬೀದಿಗೆ ತಂದಾಗ, ಇಲ್ಲ ಬಲಿ ತೆಗೆದುಕೊಂಡಾಗ. ಹಾಗೆಯೆ ವರ್ಷಕ್ಕೊಮ್ಮೆ, ಟೆಲಿವಿಷನ್ ಜಾಲದ ಬೆಂಬಲದೊಂದಿಗೆ, ನಡೆಯುವ ಸೌಂದರ್ಯ ಸ್ಪರ್ಧೆಗಳ ಪ್ರಶ್ನೋತ್ತರದ ಸುತ್ತಿನಲ್ಲಿ, ತಾಯಿ ತೆರೆಸಾ ತಮ್ಮ ಪರಮಾದರ್ಶವೆಂದೂ ಬಡವರ ಸೇವೆ ಮಾಡುವುದೆ ತಮ್ಮ ಪರಮೋದ್ದೇಶವೆಂದೂ ಸಾರುವ ಸ್ಪರ್ಧಾಸುಂದರಿಯರ



ಚಂದದ ಮಾತುಗಳಲ್ಲೂ ಅವರು ಕಾಣಿಸಿಕೊಳ್ಳುವುದುಂಟು.

ತಾಯಿ ತೆರೆಸಾ ತನ್ನ ದೇಹವೆನ್ನುವುದು ದುರ್ಬಲರ ಸೇವೆಗೆಂದು ದೇವರು ತನಗೆ ನೀಡಿದ ಸಾಧನವೆಂದು ಮನಸಾರೆ ನಂಬಿದವಳು. ಈ ಸುಂದರಿಯರೊ, ದೈವಿ ವ್ಯಕ್ತಿಗಳು ಹಾಗೂ ದುರ್ಬಲರನ್ನು ತಮ್ಮ ಮೈಗೆ ಆಧ್ಯಾತ್ಮಿಕತೆಯನ್ನು ಮೆತ್ತಿಕೊಡುವ ಇನ್ನೊಂದು ಬಗೆಯ ಸೌಂದರ್ಯ ಸಾಧನಗಳಂತೆ ಬಳಸಿಕೊಳ್ಳುವವರು.

ಇದನ್ನು ಕೇಂದ್ರವಾಗಿಟ್ಟುಕೊಂಡು ನಮ್ಮ ಪ್ರಶ್ನೋತ್ತರದ ಆಟವನ್ನು ಇನ್ನೊಂದು ರೀತಿಯಲ್ಲಿ ಮುಂದುವರಿಸಬಹುದೆ ? ಹೀಗೆ –

ಪರರನ್ನು ತನ್ನ ಸ್ವತ್ತಾಗಿ ಬಳಸಿಕೊಳ್ಳುವ ಮತ್ತು ಸಾಮಾಜಿಕ ಸಂಪತ್ತನ್ನು ತನ್ನ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವ ಕ್ರಿಯೆಗಳಿಗೆ ಸಂಬಂಧಿಸಿ ಇಂಗ್ಲಿಷ್ ಭಾಷೆಯಲ್ಲಿ appropriation ಮತ್ತು misappropriation ಎನ್ನುವ ಪದಗಳುಂಟು. ಅವುಗಳೊಡನೆ ಪುಟ್ಟದೊಂದು ಆಟವನ್ನಾಡಿ – ಅಬಲರನ್ನು ಶುದ್ಧ ಹೃದಯಿ ತಾಯಿ ತೆರೆಸಾಳನ್ನು ಮಿಸ್ ವರ್ಲ್ಡ್‌ಗಳು ಮಿಸ್ ಯೂನಿವರ್ಸ್‌ಗಳು ಹೀಗೆ ಸ್ವಲಾಭಕ್ಕೆ ಬಳಸಿಕೊಳ್ಳುವುದನ್ನು Mis(s) appropriation of the poor and the pure ಎಂದು ಕರೆಯಬಹುದೆ ?

ಇದನ್ನು ಇನ್ನೊಂದು ದಿಕ್ಕಿನೆಡೆ ತಿರುಗಿಸಿ –

ಹಿಂದೆ ಅಮಿತಾಬ್ ಬಚ್ಚನ್ ತನ್ನ ಚಲನಚಿತ್ರ ಅವತಾರದಲ್ಲಿ ಸರ್ವಸಾಮಾನ್ಯ ವಾಗಿ ಅಶಕ್ತರ ಪ್ರತಿನಿಧಿಯೆಂಬತ್ತಿರುತ್ತಿದ್ದ; ಮಧ್ಯಮ ಹಾಗೂ ಮೇಲು ವರ್ಗಗಳಿಗೆ ಮೈ ಬೆವರಿಳಿಸುವಂತಹ ಪ್ರಶ್ನೆಗಳ ಚಾಟಿಯೇಟು ಕೊಡುತ್ತಿದ್ದ. ಇಂದು ಅದೇ ಅಮಿತಾಬ್ ತನ್ನ ಟೆಲಿವಿಷನ್ ಅವತಾರದಲ್ಲಿ ಅದೇ ಮಧ್ಯಮ ಹಾಗೂ ಮೇಲು ವರ್ಗಗಳಿಗೆ ಹೆಚ್ಚೆಂದರೆ ತಲೆ ಕೆರೆದುಕೊಳ್ಳುವ ರೀತಿಯ ಪ್ರಶ್ನೆಗಳನ್ನುಕೇಳುತ್ತಾನೆ; ಅವನ್ನೂ ಉತ್ತರಿಸಲಾಗದೆ ಅವರು ಒದ್ದಾಡಿದರೆ ಅವರ ಮೈಸವರಿ ಉತ್ತೇಜಿಸುತ್ತಾನೆ. ಹಿಂದೊಮ್ಮೆ ಆತ ಕುಪಿತ ಯುವಕನಾಗಿ ಇವರ ವಿರುದ್ಧ ಕೆಂಡ ಕಾರಿದ್ದುಂಟು; ಕೋಡಂಗಿಯಾಗಿ ಇವರ ಮೌಲ್ಯ ವ್ಯವಸ್ಥೆಯನ್ನು ಅಣಕಿಸಿದ್ದುಂಟು. ಇಂದು ಆತ ಅದೇ ಅವರನ್ನು ಅಪಾರ ಕರುಣೆಯೊಂದಿಗೆ ಕೈಹಿಡಿದು ನಡೆಸುತ್ತಾನೆ – ಕೋಟಿ ರೂಪಾಯಿ ಕನಸಿನೆಡೆಗೆ, ಇಲ್ಲ ಕ್ಷಣ ಮಾತ್ರವಾದರೂ ಆತನ ಸನ್ನಿಧಿಯಲ್ಲಿ ಕುಳಿತ ಪ್ರಸಿದ್ಧಿಯ ಕಡೆಗೆ.

ಇದನ್ನು – ಚಲನಚಿತ್ರ ಪ್ರಪಂಚದಲ್ಲಿ ಅಮಿತಾಬ್‌ನ ಸವಾಲುಗಳಿಗೆ ತತ್ತರಿಸಿದ್ದ ಈ ವರ್ಗ ಈಗ ಅದರ ಸೇಡು ತೀರಿಸಿಕೊಳ್ಳುತ್ತಿದೆಯೊ ಎನ್ನುವ ರೀತಿಯಲ್ಲಿ, ತನ್ನ ಖಾಸಗಿ ಆಸ್ತಿಯಾಗಿಸಿಕೊಂಡ ಟೆಲಿವಿಷನ್ ಪ್ರಪಂಚದಲ್ಲಿ ಅವನನ್ನು ಕೈಸೆರೆ – ap-

propriate - ಮಾಡಿಕೊಂಡಿದೆ ಎಂದೂ ವ್ಯಾಖ್ಯಾನಿಸಬಹುದೆ?

••• ••• •••

ಟೆಲಿವಿಷನ್‌ನಲ್ಲಿ ಒಂದೊಂದು ಚಾನೆಲ್ಲಿನದೂ ಒಂದೊಂದು ಪ್ರಪಂಚ; ಅಥವಾ ಪ್ರಪಂಚದ ಒಂದೊಂದು ಖಂಡ. ಬಹುಬಾರಿ ತನ್ನ ಖಂಡವೆ ಇಡಿಯ ಪ್ರಪಂಚವೆನ್ನುವ ಖಡಾಖಂಡಿತ ನಿಲುವು.

ಇದಕ್ಕೊಂದು ಬಡಕಲು ಉದಾಹರಣೆಯನ್ನು ನೀಡುವುದಾದರೆ —

ನಿಜ ಜಗತ್ತಿನಲ್ಲಿ ಇರುವಂತೆಯೆ ಟೆಲಿವಿಷನ್ ಜಗತ್ತಿನಲ್ಲಿಯೂ ವಿಭಿನ್ನ ಜನ ಶ್ರೇಣಿಗಳು ಇರುವುದುಂಟು. ಆದರೆ ಸ್ವಾರಸ್ಯವೆಂದರೆ, ಟೆಲಿವಿಷನ್ ಧಾರಾವಾಹಿಗಳ ವಿಷಯದಲ್ಲಿ, ಒಂದು ಚಾನೆಲ್‌ನಲ್ಲಿ ಅತಿಬಡವನೆಂದರೆ ಒಂದೇ ಒಂದು ದ್ವಿಚಕ್ರ ವಾಹನ ಹೊಂದಿರುವವನು; ಇನ್ನೊಂದು ಚಾನೆಲ್‌ನಲ್ಲಿ ಅತಿ ಬಡವನೆಂದರೆ ಒಂದೇ ಒಂದು ಕಾರು ಹೊಂದಿರುವವನು; ಮತ್ತೊಂದರಲ್ಲಿ ಒಂದೇ ಒಂದು ವಿಮಾನ ವಿರುವವನು. ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದಂತಹ ನಿಜ ಜಗತ್ತಿನ ದುರ್ದೈವಿಗಳಿಗೆ ಟೆಲಿವಿಷನ್ ಧಾರಾವಾಹಿಗಳ ಜಗತ್ತಿನಲ್ಲಿ ಪ್ರವೇಶವೆ ಇಲ್ಲ; ಮಾತ್ರವಲ್ಲ, ಅಲ್ಲಿ ಅವರಿಗೆ ಅಸ್ತಿತ್ವವೇ ಇಲ್ಲ. ಕೊನೆಯ ಪಕ್ಷ, ಸದಾ ಮುನ್ನೆಲೆ ಯಲ್ಲಿರುವ ಮಧ್ಯಮ ಹಾಗೂ ಮೇಲು ವರ್ಗಗಳ ನಿತ್ಯ ರಗಳೆ - ಬೊಗಳೆಗಳಿಗೆ ಭಿನ್ನವಾದೊಂದು ಹಿನ್ನೆಲೆಯನ್ನು ಕಟ್ಟುವುದಕ್ಕೂ ಅವರಿಗೆ ಅವಕಾಶವಿಲ್ಲ.

ಈ ನಿದರ್ಶನ ಬರಿಯೆ ರಾಜಕೀಯ ರಂಜಕತೆಯದ್ದು ಎಂದೆನಿಸಿದರೆ ಅದನ್ನು ಕೈಬಿಟ್ಟು ತುಸು ಬೇರೆ ರೀತಿಯ ಇನ್ನೊಂದು ನಿದರ್ಶನದೊಂದಿಗೆ ಆಟವನ್ನು ಮುಂದುವರೆಸಬಹುದು.

ಭಾಷೆ-ಕಲೆ-ಮಾಧ್ಯಮಗಳನ್ನು ಅರ್ಧ ಕನ್ನಡಿಗಳು ಹಾಗೂ ಅರ್ಧ ಕಿಟಕಿಗಳು ಎಂದು ಪರಿಭಾವಿಸುವ ಕ್ರಮವೊಂದಿದೆ. ಅಂದರೆ, ಅವು ನಮಗೆ ನಮ್ಮ ರೂಪಗಳನ್ನು ತೋರಿಸುವುದರ ಜತೆಜತೆಯಲ್ಲಿ ನಮ್ಮ ಎದುರಿನ ಬಾಹ್ಯ ಪ್ರಪಂಚಗಳನ್ನೂ ಕಾಣಿಸುತ್ತವೆ. ಅವುಗಳನ್ನು ಬರಿಯೆ ಕನ್ನಡಿಯಾಗಿ ಬಳಸಿದಲ್ಲಿ ನಾವು ಕೂಪಮಂಡೂಕ ಗಳಾಗುವುದುಂಟು, ಆತ್ಮರತರಾಗುವುದುಂಟು; ಹಾಗೆಯೆ, ಅವುಗಳನ್ನು ಕೇವಲ ಕಿಟಕಿಯಾಗಿ ಬಳಸಿದಲ್ಲಿ ಆತ್ಮ ಪ್ರತಿಫಲನವಿಲ್ಲದೆ ಗೊಡ್ಡುಗಾಳಿಯಾಗುವುದುಂಟು.

ನಮ್ಮ ಟೆಲಿವಿಷನ್ ಧಾರಾವಾಹಿಗಳ ಸ್ವಕೇಂದ್ರಿತ ಸ್ವಸಂಕುಚಿತ ಸ್ವರೂಪ ವಂತೂ ಸ್ವಯಂಸಿದ್ಧವಾದದು. ನಾಲ್ಕು ಗೋಡೆಗಳ ನಡುವೆಯೆ ಕೊಳೆಯುತ್ತ ತಾವೇ ಸೃಷ್ಟಿಸಿಕೊಂಡ ರಂಪರಗಳೆಗಳಲ್ಲಿ ನಿತ್ಯ ನರಳಾಡುವ ಅಲ್ಲಿಯ ವ್ಯಕ್ತಿಗಳಿಗೆ ತಮ್ಮ ಆಚೆಗೂ ಅನೇಕ ಜಗತ್ತುಗಳು ಜೀವನಕ್ರಮಗಳು ಇವೆ ಎನ್ನುವ ಸತ್ಯ ಕೊಂಚವೂ



ಗೋಚರವಾಗುವುದಿಲ್ಲ.

ಇದಕ್ಕೆ ಕಾರಣ ಅವರು ಕಿಟಕಿಗಳನ್ನು ತೆರೆಯದೆ ಸದಾ ಕನ್ನಡಿಯ ಮುಂದೆ ನಿಂತಿರುವಂತೆ ಜೀವಿಸುವುದೆ ಆಗಿರಬಹುದೆ? ತಾವೇ ಕುಗ್ಗಿಸಿಕೊಂಡ ಜಗತ್ತಿನಲ್ಲಿ ತಾವೇ ಕುಗ್ಗಿಸಿಕೊಂಡ ಪ್ರಜ್ಞೆಯೊಂದಿಗೆ ಪ್ರತಿಕ್ಷಣ ಕೃತಕ ನರಕಗಳಲ್ಲಿ ಮುಲುಕಾಡುವ ಈ ವರ್ಗದ ಸಮಸ್ಯೆಯ ಒಂದು ಸುಳಿವು ಇಲ್ಲಿಯೆ ಅಡಗಿರಬಹುದೆ?

••• ••• •••

ಕನ್ನಡಿಗಳನ್ನು ತುಸು ಮಾರ್ಪಡಿಸಿದರೆ ಅವು ಭೂತಗನ್ನಡಿಗಳಾಗುವುದುಂಟು; ಸ್ಥೂಲಾಕೃತಿಗಳ ಒಳಗಿನ ಸೂಕ್ಷ್ಮಾಂಶಗಳನ್ನು ಎತ್ತಿ ತೋರಿಸುವುದುಂಟು. ನಮ್ಮ ಟೆಲಿವಿಷನ್ ಧಾರಾವಾಹಿಗಳ ಪ್ರಪಂಚದ ವಿಷಯದಲ್ಲಿ ಇಂಥದೆ ಸೂಕ್ಷ್ಮದರ್ಶಕ ಕಾರ್ಯಕ್ಕಾಗಿ ಜಾಹೀರಾತುಗಳನ್ನು ಕನ್ನಡಿ - ಭೂತಗನ್ನಡಿಯಂತೆ ಬಳಸಲು ಸಾಧ್ಯವೆ?

ಧಾರಾವಾಹಿ— 'ದರ್ಶನ'ದ ಧ್ಯಾನಸ್ಥಿತಿಯನ್ನು ಭಂಗಗೊಳಿಸುವ ವಿಘ್ನಗಳೆಂದು ಜಾಹಿರಾತುಗಳ ಬಗ್ಗೆ ಹಲವರು ಸಿಡುಕುವುದುಂಟು; ಇನ್ನು ಕೆಲವರು ಅವನ್ನು ಟೆಲಿವಿಷನ್ ಅರ್ಥವ್ಯವಸ್ಥೆಯ ಅನಿವಾರ್ಯ ಅನಿಷ್ಟಗಳೆಂದು ಸಹಿಸಿಕೊಳ್ಳು ವುದುಂಟು, ಕೆಲವರು ಅವನ್ನು ಆ ವ್ಯವಸ್ಥೆಯ ಅತ್ಯಾವಶ್ಯಕ ಆಧಾರಸ್ತಂಭಗಳೆಂದು ಸಮರ್ಥಿಸುವುದುಂಟು; ಮತ್ತೆ ಕೆಲವರು ಅವನ್ನು ಟೆಲಿವಿಷನ್ ವಾರ್ತೆ-ಧಾರಾವಾಹಿಗಳ ನಿತ್ಯನರಕದಲ್ಲಿ ತೇಲಿಬರುವ ಸ್ವರ್ಗದ ತಂಗಾಳಿಯ ತುಣುಕುಗಳೆಂದು ಅರ್ಥೈಸಿರುವುದುಂಟು. ಮತ್ತೂ ಕೆಲವರು ಅವು ವ್ಯಾಪಾರಿ ಶಕ್ತಿಗಳ ವಶೀಕರಣದ ಅಸ್ತ್ರಗಳೆಂದು, ಅವುಗಳ 'ಬಂಡವಾಳ' ವನ್ನು ಬಯಲು ಮಾಡಲು ಪ್ರಯತ್ನಿಸಿರುವು ದುಂಟು.

ಇದನ್ನು ಇನ್ನೊಂದಿಷ್ಟು ವಿಸ್ತರಿಸಿ, ಟೆಲಿವಿಷನ್‌ನ ಧಾರಾವಾಹಿ-ಸಿನೆಮಾ ಗೀತ ನೃತ್ಯಗಳು - ಅವುಗಳನ್ನು ಆಧರಿಸಿದ ಸ್ಪರ್ಧೆಗಳು — ಇತ್ಯಾದಿಯಂತಹ ಕಾರ್ಯಕ್ರಮ ರಾಶಿಯನ್ನು ಹಾಗೂ ಅವುಗಳ ನಡುವೆ ಮತ್ತೆ ಮತ್ತೆ ತೂರಿಬರುವ ಜಾಹೀರಾತು ಸಮೂಹವನ್ನು ಅವಳಿ-ಜವಳಿಗಳೆಂದು ನೋಡಲು ಸಾಧ್ಯವಿದೆ. ಅವುಗಳಲ್ಲಿ ಒಂದನ್ನು ಬಿಟ್ಟು ಇನ್ನೊಂದಕ್ಕೆ ಅಸ್ತಿತ್ವವಿಲ್ಲ ಮಾತ್ರವಲ್ಲ, ಅವು ಒಂದಕ್ಕೊಂದು ಅಧಿಕೃತತೆಯನ್ನೂ ಪೋಷಣೆಯನ್ನೂ ನೀಡುವಂಥವು.

ಇಂದು ಸರಕುಗಳಲ್ಲಿ branded goods ಮತ್ತು unbranded goods ಎನ್ನುವ ಎರಡು ವರ್ಗಗಳಿರುವುದು ಎಲ್ಲರಿಗೂ ತಿಳಿದ ವಿಷಯ. ಎರಡೂ ಬಹುಮಟ್ಟಿಗೆ ಒಂದೇ ರೀತಿ ತಯಾರಾದ, ಒಂದೇ ಗುಣಮಟ್ಟದ ಸರಕುಗಳಾದರೂ ಸಹ ಪ್ರತಿಷ್ಠಿತ

ಕಂಪೆನಿಯೊಂದರ brand label ಅಂಟಿಸಿದ ಕಾರಣಕ್ಕೆಯೆ ಒಂದಕ್ಕೆ ಮಾರುಕಟ್ಟೆಯಲ್ಲಿ ದಿವ್ಯಪ್ರಭೆಯೊಂದು ಲಭ್ಯವಾಗುತ್ತದೆ; ಇನ್ನೊಂದಕ್ಕೆ ಅಂಥ ಬ್ರಾಂಡ್ ಭಾಗ್ಯ ದೊರಕದ ಕಾರಣ ಅದು ತುಸು ಮಸುಕಾಗಿ ಹಿಂದುಳಿಯುತ್ತದೆ.

ಇದನ್ನು ತುಸು ಮಾರ್ಪಡಿಸಿ, ಟೆಲಿವಿಷನ್ ಜಾಹೀರಾತುಗಳನ್ನು branded ಜಾಹೀರಾತುಗಳೆಂದೂ, ಧಾರಾವಾಹಿ-ಸಿನಿಮಾ-ಹಾಡು-ನೃತ್ಯ ಇತ್ಯಾದಿಗಳನ್ನು unbranded ಜಾಹೀರಾತುಗಳೆಂದೂ ತಿಳಿಯಬಹುದೆ? ಯಾಕೆಂದರೆ, ಜಾಹೀರಾತುಗಳು ಪ್ರತ್ಯಕ್ಷವಾಗಿ ಪ್ರವರ್ತಿಸುವ ಸರಕುಗಳನ್ನೆ ಧಾರಾವಾಹಿ ಇತ್ಯಾದಿಗಳು ಪರೋಕ್ಷವಾಗಿ ಪ್ರವರ್ತಿಸುತ್ತಿರುತ್ತವೆ. ಸ್ಥೂಲಸ್ತರದಲ್ಲಿ, ವೇಷಭೂಷಣ ಸೌಂದರ್ಯ ಸಾಧನ ಜೀವನವಿಧಾನದಂತಹ ವಿಷಯಗಳ ಬಗ್ಗೆ ಒಂದು ಏರುದನಿಯಲ್ಲಿ ಅಬ್ಬರಿಸುತ್ತಿದ್ದರೆ, ಇನ್ನೊಂದು ಅವುಗಳದೇ ಬಗ್ಗೆ ಪಿಸುನುಡಿ ಯನ್ನುಸುರುತ್ತಿರುತ್ತದೆ. ಒಂದರ ಬ್ರಾಂಡ್ ಲೇಬಲನ್ನು ಕಿತ್ತು ಇನ್ನೊಂದಕ್ಕೆ ತಗುಲಿಹಾಕಿದರೆ ಅಂಥದ್ದೇನೂ ದೊಡ್ಡ ವ್ಯತ್ಯಾಸವಾಗದಷ್ಟರ ಮಟ್ಟಿಗೆ ಅವು ಸಮಾನರೂಪಿಗಳಾಗಿವೆ.

ಜಾಹೀರಾತು ಜಗತ್ತಿನ ಜನರ ಜೀವ ಹಿಂಡುವ ಸಮಸ್ಯೆಗಳು ನಿಜ ಜಗತ್ತಿನಲ್ಲಿ ಕಾಡುವಂತಹ ಗಾಢವಾದುವು ಯಾವುವೂ ಅಲ್ಲ; ಬದಲಿಗೆ, ಅವು ಬಟ್ಟೆಬರೆ ಮುಖಮೈಗಳ ಕಲೆಗಳು, ಚರ್ಮದ ಹಾಗೂ ತಲೆಗೂದಲ ತುರಿಕೆಗಳು ಇತ್ಯಾದಿ. ಈ ಜಗತ್ತು ಇಷ್ಟೊಂದು ಸಂಕುಚಿತಗೊಂಡದ್ದು; ಈ ಜಗತ್ತಿನ ಜನರ ಪ್ರಜ್ಞೆ ಇಷ್ಟೊಂದು ಕುಗ್ಗಿರುವಂಥದು. ಇಂಥ ಸಮಸ್ಯೆಗಳನ್ನು ಪರಿಹರಿಸಲು ಜಾಹೀರಾತುಗಳಲ್ಲಿ ದೈವರೂಪದೋಪಾದಿಯಲ್ಲಿ Itchguardಗಳು stain-removerಗಳು ಥಟ್ಟನೆ ಪ್ರತ್ಯಕ್ಷವಾಗುತ್ತವೆ; ಸಂತ್ರಸ್ತರನ್ನು ಸಂತೈಸುತ್ತವೆ.

ನಮ್ಮ ಅದಲಿ-ಬದಲಿ ಆಟಕ್ಕೆ ಮರಳಿಬರುವುದಾದರೆ –

ಜಾಹೀರಾತು-ಜನರು ಹಾಗೂ ಧಾರಾವಾಹಿ- ಜನರುಗಳ ಬಾಧೆಗಳ ನಡುವೆ ಏನಾದರೂ ಮೂಲಭೂತ ಹೋಲಿಕೆಯಿರಬಹುದೆ? ಒಂದೆಡೆ ದೈಹಿಕವಾಗಿ ಕಾಡುವ ಪೀಡೆಯೆ ಇನ್ನೊಂದೆಡೆ ಮನೋದೈಹಿಕ ಪೀಡೆಯಾಗಿ ಕಾಣಿಸಿಕೊಳ್ಳುತ್ತದೆ; ಯಾಕೆಂದರೆ ಧಾರಾವಾಹಿಗಳ ಪಾತ್ರಗಳೂ ಬಹುಪಾಲು ಒಂದಲ್ಲ ಒಂದು ರೀತಿಯ ಮಾನಸಿಕ ಕಲೆ (stain) ಯಿಂದ ಇಲ್ಲ ತುರಿಕೆ (itch) ನಿಂದ ಸದಾಕಾಲ ನರಳುತ್ತಿರುತ್ತವೆ – ಎಂದೂ ಇದನ್ನು ವ್ಯಾಖ್ಯಾನಿಸಬಹುದೆ?

ಈ ಸಾಮ್ಯತೆ ಇಲ್ಲಿಗೆಯೆ ನಿಲ್ಲುತ್ತದೆ. ಇಲ್ಲಿಂದ ಧಾರಾವಾಹಿ ಜಗತ್ತು ಹಾಗೂ ಜಾಹೀರಾತು ಜಗತ್ತು ಭಿನ್ನವಾಗಿ ಬೆಳೆಯುತ್ತವೆ. ಜಾಹೀರಾತು ಜಗತ್ತನ್ನು ಕಾಡುವ stain ಹಾಗೂ itch ಗಳಿಗೆ ಮಾರುಕಟ್ಟೆ ಒಂದಲ್ಲ ಒಂದು ಔಷಧಿಯನ್ನು ಸೃಷ್ಟಿಸಿ



ಕೊಡುವುದುಂಟು. ಆದರೆ ಧಾರಾವಾಹಿ ಜಗತ್ತಿನ ಜನರ stain ಮತ್ತು itch ಗಳಿಗೆ ಮಾತ್ರ ಇಂದಿನವರೆಗೂ ಯಾವ ಚಿಕಿತ್ಸಾಕ್ರಮವೂ ದೊರಕಿದಂತಿಲ್ಲ. ಹೊರತುರಿಕೆ ಹೊರಕಲೆಗಳಿಗೆ ಪರಿಹಾರವನ್ನು ನೀಡಿದಂತೆ ಒಳತುರಿಕೆ ಒಳಕಲೆಗಳಿಗೂ ಯಾರಾದರೂ ಯಾವುದಾದರೂ ಪರಿಹಾರವನ್ನು ಕಂಡುಹಿಡಿಯಬಾರದೆ?

••• ••• •••

ಕೊಳೆ ಕಲೆ ತುರಿಕೆಗಳನ್ನು ತೊಡೆಯುವ ಕ್ರೀಮು ಸೋಪುಗಳನ್ನು ದೊಡ್ಡ ದೈವ ಸಾಕ್ಷಾತ್ಕಾರವೆಂದು ಬಗೆಯುವ ಈ ಅವಳಿ ಜಗತ್ತಿನ ಸ್ವಸಂಕುಚಿತ ದೃಷ್ಟಿಕೋನ ಬೇರೆ ಬಗೆಗಳಲ್ಲೂ ಕಾಣಿಸಿಕೊಳ್ಳುವುದುಂಟು; ವಾಸ್ತವ ಪ್ರಜ್ಞೆಯ ಜೊತೆಗೆ ಕಲ್ಪನಾ ಶಕ್ತಿಯನ್ನೂ ಕುಗ್ಗಿಸುವುದುಂಟು:

ಮೊನ್ನೆ 'ಕರೋಡ್ ಪತಿ' ಯಲ್ಲಿ ಒಬ್ಬ ಸ್ಪರ್ಧಿ ಒಂದು ಕೋಟಿ ರೂಪಾಯಿಗಳನ್ನು ಗೆದ್ದಾಗ ಹಲವರು ಅದೊಂದು ಅದ್ಭುತವೆಂದು ಉದ್ಗರಿಸಿದರು; 'ಮೂರು ಬಾರಿ ಐ.ಎ.ಎಸ್. ಪರೀಕ್ಷೆ ಬರೆದವನವನು, ಆತ ಮಹಾಮೇಧಾವಿಯೆ ಸರಿ, ಅಂಥವನಲ್ಲದೆ ಇನ್ಯಾರು ತಾನೆ ಇಂಥ ಅಭೂತಪೂರ್ವ ಸಾಧನೆಗೈಯಲು ಸಾಧ್ಯ?' ಎಂದು ಕೊಂಡಾಡಿದರು. ಅದೇನೋ ಸರಿ, ಆದರೆ ಅಂಥ ಪರೀಕ್ಷೆಗಳಲ್ಲಿ ಮೊತ್ತಮೊದಲ ಪ್ರಯತ್ನದಲ್ಲಿಯೆ ಮೊತ್ತಮೊದಲ ಸ್ಥಾನ ಗಳಿಸಿದವರು ಅನೇಕರು ಈ ದೃಷ್ಟಿಕೋನಕ್ಕೆ ಮೇಧಾವಿಗಳೆಂದು ತೋರಲಿಲ್ಲವೆ? ಅಥವಾ 'ಕರೋಡ್‌ಪತಿ'ಯ ಸ್ಪರ್ಧಿ ಗೆದ್ದ ಮೊತ್ತ ಈ ಕಣ್ಣನ್ನು ಕೋರೈಸಿ ಕುರುಡಾಗಿಸಿತೆ? ಸುತ್ತಮುತ್ತ ಸ್ಪಷ್ಟ ಕಾಣಸಿಗುವ ವಿವಿಧ ಬಗೆಯ ಮೇಧಾವಿಗಳನ್ನು ಗಮನಕೊಟ್ಟು ನೋಡಲಾಗದಷ್ಟು ಸಂಕುಚಿತವಾದುದೆ ಇಂಥ ಕಣ್ಣಿನ ವಾಸ್ತವಪ್ರಜ್ಞೆ?

ಹಾಗೆಯೆ – ಡಿಸ್ಕವರಿ, ನ್ಯಾಷನಲ್ ಜಿಯಾಗ್ರಫಿಕ್ ಚಾನೆಲ್‌ಗಳನ್ನು ನೋಡಿ ಕೆಲವರು 'ಆ ಕಾರ್ಯಕ್ರಮಗಳು ಎಷ್ಟು ಚಂದವಿರುತ್ತವೆ. ನೋಡುತ್ತ ಕುಳಿತರೆ ಎಲ್ಲೊ ನಮ್ಮ ಮನೆಯೊಳಗೆಯೆ ಒಂದು ಪ್ರಾಣಿ ಸಂಗ್ರಹಾಲಯವೊ ಮತ್ಸ್ಯಾಲಯವೊ ಇದ್ದಂತೆನಿಸುವುದು' ಎಂದು ಹೇಳುವುದುಂಟು. ಅದೇನೂ ಸುಳ್ಳಲ್ಲ; ಆದರೆ ಅದಷ್ಟೆ ಸತ್ಯವೆ? ನಾವು ನಮ್ಮ ಮನೆಯ ನಾಲ್ಕು ಗೋಡೆಗಳ ದಾಟಿ, ದಟ್ಟಕಾಡಿನ ನಡುವೆ ಇಲ್ಲ ಆಳಸಮುದ್ರದ ಬುಡದಲ್ಲಿ ಇರುವಂತೆಯೋ ಅದು ಭಾಸವಾಗಬಾರದೇಕೆ? ವಾಸ್ತವದಲ್ಲಿ ನಾವು ಅಲ್ಲೆಲ್ಲ ಹೋಗುವುದು ಅಸಾಧ್ಯವಿರಬಹುದು. ಆದರೆ ವಾಸ್ತವದಲ್ಲಿಯೆ ನಮ್ಮ ಪರವಾಗಿ ಬೇರೆ ಕೆಲವರು ಹೋಗಿದ್ದಾರಲ್ಲ? ಆ ವಾಸ್ತವವಾದರೂ ನಮ್ಮ ಕಲ್ಪನೆಗೆ ರೆಕ್ಕೆ ಮೂಡಿಸಬಾರದೆ? ಕಲ್ಪನೆಯಲ್ಲಿಯೂ

ಲಂಘನೆಯ ಶಕ್ತಿಯಿಲ್ಲದಷ್ಟು ಕುಬ್ಜವಾಗಿಹೋಯಿತೆ ಈ ವೀಕ್ಷಕ ದೃಷ್ಟಿ?

'ಕರೋಡ್‌ಪತಿ' ರೀತಿಯ ಕಾರ್ಯಕ್ರಮಗಳ ಒಳಗಡೆಯೂ ಇಂಥದೆ ಸಂಕುಚಿತತೆಯನ್ನು ಕಾಣಬಹುದು. ಕೆಲವು ವರ್ಷಗಳ ಹಿಂದೆ ಬಿಬಿಸಿ ಟೆಲಿವಿಷನ್‌ನಲ್ಲಿ 'ಎ ಕ್ವೆಶ್ಚನ್ ಆಫ್ ಸ್ಪೋರ್ಟ್' ಎನ್ನುವ ರಸಪ್ರಶ್ನಾವಳಿಯ ಕಾಯಕ್ರಮವೊಂದು ಬಿತ್ತರವಾಗುತ್ತಿತ್ತು. ಅದರಲ್ಲಿ ಕ್ರೀಡಾಜಗತ್ತಿಗೆ ಸಂಬಂಧಪಟ್ಟ ಅಂಕಿ-ಅಂಶಗಳ ಬಗ್ಗೆ ಒಂದಿಷ್ಟು ಪ್ರಶ್ನೆಗಳ ಜೊತೆಗೆ 'ವಾಟ್ ಹ್ಯಾಪನ್ಸ್ ನೆಕ್ಸ್ಟ್' ಎಂಬ ಒಂದು ಸುತ್ತೂ ಇತ್ತು. ಆ ಸುತ್ತಿನಲ್ಲಿ ಕ್ರೀಡಾ ಪಂದ್ಯವೊಂದರ ಕುತೂಹಲಕಾರಿ ಕ್ಷಣವೊಂದರ ದೃಶ್ಯಾವಳಿಯನ್ನು ತೋರಿಸಲಾರಂಭಿಸಿ, ಅದನ್ನು ಅರ್ಧಕ್ಕೆಯೆ ನಿಲ್ಲಿಸಿ, ಆ ಪ್ರಸಂಗ ಹೇಗೆ ಮುಂದುವರೆ ದಿರಬಹುದು ಅಥವಾ ಮುಗಿದಿರಬಹುದು ಎಂದು ಪ್ರಶ್ನೆಯನ್ನು ಕೇಳಲಾಗುತ್ತಿತ್ತು. ಸ್ಪರ್ಧಾಳುಗಳು ತಮ್ಮ ತಮ್ಮ ನೆನಪನ್ನೂ ಇಲ್ಲ ಕಲ್ಪನೆಯನ್ನೂ ಬಳಸಿ ಉತ್ತರ ನೀಡಿದ ಮೇಲೆ ದೃಶ್ಯಾವಳಿಯ ಉತ್ತರಾರ್ಧವನ್ನು ತೋರಿ, ಸ್ಪರ್ಧಾಳುಗಳು ಕೊಟ್ಟ ಉತ್ತರ ಸರಿಯಿದ್ದಲ್ಲಿ ಅವರಿಗೆ ಅಂಕಗಳನ್ನು ನೀಡಲಾಗುತ್ತಿತ್ತು. ಅಲ್ಲಿ ಸರಿ-ತಪ್ಪು ಉತ್ತರಗಳನ್ನು ಬಿಡಿ, ಆ ಇಡೀ ಸುತ್ತಿನ ಜೀವಾಳ ಸ್ಪರ್ಧಿಗಳು ನೀಡುತ್ತಿದ್ದ ಕಲ್ಪನೆಯ ಉತ್ತರಗಳಾಗಿರು ತ್ತಿದ್ದವು. ತಮ್ಮ ಕಲ್ಪನಾಲಹರಿಯನ್ನು ಹರಿಯಬಿಡುವುದರಲ್ಲಿ ಆ ಸ್ಪರ್ಧಿಗಳು – ಅದರಲ್ಲಿ ವಿಶೇಷವಾಗಿ ಖ್ಯಾತ ಆಲ್‌ರೌಂಡ್ ಕ್ರಿಕೆಟಿಗ ಇಯಾನ್ ಬೋಥಮ್ - ನಿಷ್ಣಾತರಾಗಿದ್ದರು. ಬಹಳ ಸಲ ಆ ಪ್ರಸಂಗಗಳ ವಾಸ್ತವರೂಪಕ್ಕಿಂತ ಇವರ ಕಲ್ಪನಾರೂಪಗಳೆ ಹೆಚ್ಚು ರೋಮಾಂಚಕವೂ ರಮ್ಯಾದ್ಭುತವೂ ವಿನೋದ ಮಯವೂ ಆಗಿದ್ದು, ಅವನ್ನು ಕೇಳಿದ ಬೇರೆ ಸ್ಪರ್ಧಿಗಳು ಹಾಗೂ ಪ್ರೇಕ್ಷಕರ ನಗೆಯ ಸ್ಫೋಟದಲ್ಲಿ ಅಂಕಿ-ಅಂಶಗಳಿಗೆ ಸಂಬಂಧಿಸಿದ ಜಡ ಪ್ರಶ್ನೆಗಳೆಲ್ಲ ಚಿಂದಿಯಾಗುತ್ತಿದ್ದವು.

'ಕರೋಡ್‌ಪತಿ' ಯಲ್ಲಿ ಇಂಥ ಒಂದೇ ಒಂದು ಪ್ರಶ್ನೆಗೂ ಸ್ಥಾನವಿಲ್ಲ; ಶುಷ್ಕ ಅಂಕಿ-ಅಂಶಗಳ ನಡುವೆ ಕಲ್ಪನೆಯ ಸೆಲೆಗೆ ಒಂದಿಷ್ಟೂ ಅವಕಾಶವಿಲ್ಲ. ಅದರ ಬಹುಮಾನದ ಮೊತ್ತ, ಅದನ್ನು ನಿರ್ವಹಿಸುವ ಸೂಪರ್‌ಸ್ಟಾರ್, ಅದರ ನಿರ್ಮಾಣ ತಂತ್ರಗಳು, ಅದನ್ನು ಪ್ರಾಯೋಜಿಸುವ ಕಂಪನಿಗಳೆಲ್ಲದರ ಮಟ್ಟಿಗೂ 'ಕರೋಡ್‌ಪತಿ' ಅತ್ಯಂತ ಶ್ರೀಮಂತವಾದುದು. ಭೌತಿಕವಾಗಿ ಇಷ್ಟು ಶ್ರೀಮಂತವಾದ ಕಾರ್ಯಕ್ರಮ ಕಲ್ಪನೆಯ ಲೆಕ್ಕದಲ್ಲಿ ಮಾತ್ರ ಎಷ್ಟು 'ದರಿದ್ರ'!? ಮಾನವ ಚೇತನದ ಒಂದರ್ಧವಾದ ನೆನಪಿನ ಶಕ್ತಿಗೆ ಇಲ್ಲಿ ಇಷ್ಟೊಂದು ಮನ್ನಣೆಯಾದರೆ ಇನ್ನೊಂದು ಅರ್ಧವಾದ ಕಲ್ಪನಾವಿಲಾಸದ ಬಗ್ಗೆ ಎಷ್ಟೊಂದು ಉಪೇಕ್ಷೆ?!

'ಕರೋಡ್‌ಪತಿ' ಯ ಬಗ್ಗೆ , 'ಅಲ್ಲಿ ಅಮಿತಾಬ್ ಕಂಪ್ಯೂಟರನ್ನು ನಡೆಸಿ ಕೊಳ್ಳುವ ರೀತಿಯನ್ನು ನೋಡಿ; ಆತ ಅದನ್ನು ಕಂಪ್ಯೂಟರ್‌ಜಿ, ಕಂಪ್ಯೂಟರ್‌ಜಿ ಎಂದು



ಸಂಬೋಧಿಸುತ್ತ, ಆ ಯಂತ್ರವನ್ನು ಮಾನವಿಕರಿಸಿದ್ದಾನೆ; ಆಧುನಿಕ ಜೀವನದ ಅವಿಭಾಜ್ಯ ಅಂಗವಾಗಿರುವ ಆ ಸಾಧನವನ್ನು ಮಾನವಸ್ತರದಲ್ಲಿ ಸ್ಥಾಪಿಸಿಕೊಳ್ಳುವ ಒಂದು ಸಾಧ್ಯತೆಯನ್ನು ಸೂಚಿಸಿದ್ದಾನೆ, ಅಲ್ಲವೆ?' ಎಂಬ ಮೆಚ್ಚುಗೆಯ ಮಾತುಗಳು ಕೇಳಿಬರುವುದುಂಟು. ಇದೇನೊ ಸರಿ. ಆದರೆ ಈ ಪ್ರಕ್ರಿಯೆಯ ಇನ್ನೊಂದೆ ಮುಖವನ್ನು ಹೀಗೆ ಗುರುತಿಸಬಹುದೆ –

'ಕರೋಡ್‌ಪತಿ' ಯಂತ್ರವೊಂದನ್ನು ಮಾನವಿಕರಿಸಿದಂತೆಯೆ ಮಾನವರನ್ನು ಯಂತ್ರೀಕರಿಸಿಲ್ಲವೆ? 'ಹೌದು-ಇಲ್ಲ'ಗಳ ನಡುವೆ, ಎ),ಬಿ),ಸಿ),ಡಿ)ಗಳ ನಡುವೆಯಷ್ಟೆ ಹರಿದಾಡುವಂತೆ ಮಾನವ ಪ್ರಜ್ಞೆಯನ್ನು ನಿಯಂತ್ರಿಸಿಲ್ಲವೆ? ಯಾವ ಶ್ರೇಷ್ಠಾತಿಶ್ರೇಷ್ಠ ಯಂತ್ರವೂ ಸಹ ಮಾನವ ತನ್ನಲ್ಲಿ ತುಂಬಿಸಿಟ್ಟ ಮಾಹಿತಿಗಳ ಚೌಕಟ್ಟನ್ನು ಬಿಟ್ಟು, ಸ್ವಂತ ಕಲ್ಪನೆಯಿಂದ ಕಾರ್ಯ ನಿರ್ವಹಿಸಲಾರದು. ಯಾವ ಉಪಕರಣವೂ ತನ್ನ ನೆನಪಿನ ಪರಿಮಿತಿಯನ್ನು ಮೀರಿ ಸ್ವೋಪಜ್ಞ ಕಲ್ಪನೆಯ ಗರಿ ಬಿಚ್ಚಿ ಹಾರಲಾರದು. ಸದ್ಯದ ವಾಸ್ತವ ಹೀಗಿರುವಾಗ, ಮಾನವ ಪ್ರಜ್ಞೆಯನ್ನು ಎರಡೊ ನಾಲ್ಕೊ ಆಯ್ಕೆಗಳಿಗಷ್ಟೆ ಸೀಮಿತಗೊಳಿಸುವಂತಹ ಪ್ರಶ್ನೆಗಳನ್ನುಮಾತ್ರ ಕೇಳುತ್ತ ಸಾಗುವುದು, ಕಲ್ಪನಾಪ್ರತಿಭೆಗೆ ಯಾವ ಬೆಲೆಯನ್ನೂ ಕೊಡದಿರುವುದು ಆ ಪ್ರಜ್ಞೆಯನ್ನು ಕುಬ್ಜಗೊಳಿಸಿದಂತಾ ಗುವುದಿಲ್ಲವೆ?

ಕೆಲ ಶತಮಾನಗಳ ಹಿಂದೆ 'I think, therefore I exist' ಎಂಬ ರೆನೆ ಡೆಕಾರ್ಟ್‌ನ ಹೇಳಿಕೆ ಯುರೋಪಿನಲ್ಲಿ ಮಾತ್ರವಲ್ಲ ಜಗತ್ತಿನಾದ್ಯಂತ ಹೊಸ ಯುಗವೊಂದನ್ನು ಉದ್ಘಾಟಿಸಿಕೊಟ್ಟಿತು. ಇಂಥ ಆಧುನಿಕತೆಯ ಕಹಿಯನ್ನು ಉಂಡ ಸಮಾಜಗಳ ಪರವಾಗಿ ಮುಂದೊಂದು ದಿನ ಆಫ್ರಿಕಾದ ಧೀಮಂತ ಸೆಂಗೊರ್, ಡೆಕಾರ್ಟ್‌ನಿಗೆ ತದ್ವಿರುದ್ಧವಾಗಿ ಹೇಳಿದ: I feel, there I exist. 'ಕರೋಡ್‌ಪತಿ', 'ಅಂತ್ಯಾಕ್ಷರಿ' ಗಳಂತಹ ಕಾಯಕ್ರಮಗಳ ಜಗ-ಯುಗದ ಜನರ ಹೇಳಿಕೆಯೇನಿರ ಬಹುದು – 'I memorize, therefore I exist' ಎಂದೆ?

••• ••• •••

ಹೀಗೆ ಸ್ವತಃ ಹೆಚ್ಚೇನನ್ನೂ ಕಲ್ಪಿಸಿಕೊಳ್ಳಲಾಗದ ಸೃಷ್ಟಿಸಲಾಗದ ಹಾಗೂ ಉತ್ಪಾದಕತೆಗಿಂತ ಉಪಭೋಗವನ್ನೆ ಹೆಚ್ಚು ನೆಚ್ಚಿಕೊಂಡಿರುವ ಈ ನಿಲುವನ್ನು, ಇನ್ನೊಂದು ರೀತಿಯಲ್ಲಿ I consume, therefore I exist ಎಂದೂ ಸೂತ್ರೀ ಕರಿಸಬಹುದೆ?

ಉಪಭೋಗವಾದಿ ಸಂಸ್ಕೃತಿಯ ಮುಖ್ಯವಾದೊಂದು ಚಿಹ್ನೆ ಜಾಹೀರಾತುಗಳು.

'ಸುಂದರಿ ಜಾಹೀರಾ/ಥೂ ಎಂದರದೇ ಜಾಹೀರಾಥೂ' ಎಂದು ವೈ.ಎನ್.ಕೆ. ಈಗಾಗಲೇ ಜಾಹೀರಾತುಗಳ ಒಂದು ಮುಖವನ್ನು ಅನಾವರಣಗೊಳಿಸಿದ್ದಾರೆ. ಹಾಗೆಯೆ, ಅವುಗಳ ಇನ್ನೊಂದು ಮುಖವನ್ನು ಹೀಗೆ ಗುರುತಿಸಬಹುದು:

ಪ್ರಸ್ತುತ ಭಾರತೀಯ ಟೆಲಿವಿಷನ್ ಪ್ರಪಂಚದ ಬಗ್ಗೆ ಧೋರಣೆಯ ಮಾತೊಂದನ್ನು ಹೇಳುವುದಾದರೆ – ಅಲ್ಲಿ ಸ್ವಲ್ಪವಾದರೂ ಸೃಷ್ಟಿಶೀಲತೆಯನ್ನು ತೋರುವುದು ಜಾಹೀರಾತುಗಳು ಹಾಗೂ ಅಡಿಗೆ ಕಾರ್ಯಕ್ರಮಗಳು. ಟೆಲಿವಿಷನ್‌ಗೆಂದೆ ತಯಾರಾದ ಎಲ್ಲ ಕಾರ್ಯಕ್ರಮಗಳಲ್ಲಿ ಇವೆರಡೆ ಕೊಂಚ ಕಲ್ಪನಾಶೀಲತೆಯನ್ನು ಹಾಗೂ/ಅಥವಾ ಉತ್ಪಾದನಾಶೀಲತೆಯನ್ನು ಬಳಸಿಕೊಳ್ಳುವಂಥವು. ಹೀಗಿದ್ದೂ, ಜಾಹೀರಾತುಗಳಲ್ಲಿ ಎರಡು ಮೂಲಭೂತ ಪ್ರಭೇದಗಳನ್ನು ಗುರುತಿಸಿಕೊಳ್ಳುವುದು ಅತಿಮುಖ್ಯ. ಅವುಗಳಲ್ಲಿ ಒಂದು ವರ್ಗ ತಾನು ಹಾಡಿಹೊಗಳುವ ವಸ್ತುವನ್ನು ಮಾನವ ಜೀವನದ ಒಂದು ವಿಸ್ತರಣೆಯೆಂಬಂತೆ, ಆ ಜೀವನದ ಮೂಲಭೂತ ಚಟುವಟಿಕೆ – ಅವಶ್ಯಕತೆ-ಉದ್ದೇಶಗಳಿಗೆ ಸಹಾಯಕವಾಗಿ ಒದಗಿಬರುವ ಒಂದು ಸಲಕರಣೆಯೆಂಬಂತೆ ಚಿತ್ರಿಸಿದರೆ, ಇನ್ನೊಂದು ವರ್ಗ ಆ ಸರಕನ್ನು ಮೆರೆಸುವ ಭರದಲ್ಲಿ ಮನುಷ್ಯನನ್ನು ಮೂಲೆಗೆ ತಳ್ಳುತ್ತದೆ ಇಲ್ಲ ಮರೆಯುತ್ತದೆ. ಇದಕ್ಕೆ ಉದಾಹರಣೆಗಳಾಗಿ ಎರಡು ಟೆಲಿವಿಷನ್ ಜಾಹೀರಾತುಗಳನ್ನು ತುಸು ಪರಿಶೀಲಿಸ ಬಹುದು.

ಒಂದು, ಕೆಲವರ್ಷಗಳ ಹಿಂದೆ ಅಪಾರ ವೀಕ್ಷಕಪ್ರಿಯತೆಯನ್ನೂ ಅನೇಕ ಪ್ರಶಸ್ತಿಗಳನ್ನೂ ಗಳಿಸಿಕೊಂಡ ಎರಿಕ್‌ಸನ್ ಮೊಬೈಲ್ ಫೋನ್‌ನ ಜಾಹೀರಾತು; ಇನ್ನೊಂದು, ಅದೇ ಕಾಲದಲ್ಲಿ ಪ್ರಸಾರವಾಗುತ್ತಿದ್ದ ಭಾರತಿ ಟೆಲಿಕಾಮ್‌ನ ಜಾಹೀರಾತು. ವಿವರಗಳನ್ನು ತುಸು ನೆನಪಿಸಿಕೊಡುವುದಾದರೆ – ಎರಿಕ್‌ಸನ್ ಜಾಹೀರಾತಿನಲ್ಲಿ ಏಕಾಂಗಿ ಚೆಲುವೆಯೊಬ್ಬಳು ಹೋಟಲೊಂದರಲ್ಲಿ ಬಂದು ಕೂರುತ್ತಾಳೆ, ಎಡ ಅಂಗೈಯ ಮೇಲೆ ತನ್ನ ಸುಂದರ ವದನವನ್ನೂರಗಿಸಿ ಮೆಲುದನಿಯಲ್ಲಿ ಹೇಳತೊಡಗುತ್ತಾಳೆ: 'ಹಲೊ, ನೀನಿಂದು ಬಿಡುವಾಗಿದ್ದೀಯಾ? ರಾತ್ರಿ ಭೇಟಿಯಾಗೋಣವೆ? ಜೊತೆ ಕೂತು ಊಟ ಮಾಡೋಣವೆ? ಎಂಟು ಗಂಟೆಗೆ ಸರಿಯಾಗಿ?' ತುಸು ದೂರದ ಇನ್ನೊಂದು ಮೇಜಿನೆದುರು ಕುಳಿತ, ಸತ್ಯವಾಗಿಯೂ ಸದ್‌ಗೃಹಸ್ಥನಂತೆ ತೋರುವ ಏಕಾಂಗಿ ಮಧ್ಯವಯಸ್ಕನೋರ್ವ, ಆಕೆಯ ಮಾತುಗಳು ತನ್ನನ್ನೆ ಉದ್ದೇಶಿಸಿದ್ದುದೆಂದು ತಿಳಿದು ಕೊಂಚ ಗಲಿಬಿಲಿಗೊಳ್ಳುತ್ತಾನೆ; ಅನಂತರ ಸಾವರಿಸಿಕೊಂಡು ಎದ್ದು ಆಕೆಯತ್ತ ಸಾಗುತ್ತಾನೆ. ಆತ ಬಳಿ ಬರುತ್ತಿದ್ದಂತೆಯೆ ಆಕೆ ತನ್ನ ಎಡಗೈಯ ಮೇಲೆ ವಾಲಿಸಿಕೊಂಡಿದ್ದ ತಲೆಯನ್ನೆತ್ತಿ ಆತನನ್ನು ಗಮನಿಸುತ್ತಾಳೆ. ಆತ ಹೋಟೆಲ್‌ನ ಸೇವಕನೆಂದು ಭಾವಿಸಿ 'ಒನ್ ಬ್ಲ್ಯಾಕ್ ಕಾಫಿ, ಪ್ಲೀಸ್' ಎಂದು



ಆರ್ಡರ್ ನೀಡುತ್ತಾಳೆ. ಆಘಾತಗೊಂಡ ಆತ ಆ ಇಕ್ಕಟ್ಟಿನಿಂದ ಬಿಡುಗಡೆ ಪಡೆಯುವುದು ಹೇಗೆಂದು ಗೊತ್ತಾಗದೆ ಒದ್ದಾಡುತ್ತಿದ್ದಂತೆಯೆ, ಆಕೆಯ ಕೈಯಲ್ಲಿದ್ದುದು ಪುಟ್ಟ ಎರಿಕ್‌ಸನ್ ಮೊಬೈಲ್ ಫೋನೆಂದೂ, ಆಕೆ ಇಷ್ಟು ಹೊತ್ತೂ ಸಂಭಾಷಿಸು ತ್ತಿದ್ದುದು ಯಾರೊ ಬೇರೆಯವರ ಜೊತೆಗೆಂದೂ ತಿಳಿದುಬರುತ್ತದೆ. ಈ ಜಾಹೀರಾತು ಹಾಸ್ಯಮಿಶ್ರಿತ ಧಾಟಿಯಲ್ಲಿರುವುದೇನೊ ಹೌದು. ಆದರೆ ಅಂಥ ಹಾಸ್ಯದ ಹಿಂದೆ ಹಾಸ್ಯಾಸ್ಪದ ಮುಖವೊಂದಿರುವುದೂ ಹೌದಲ್ಲ. ಅದು, ಒಂದು ಅರ್ಥದಲ್ಲಿ, ದೂರಸಂವಹನದ ಯಂತ್ರಸಾಧನವೊಂದನ್ನು ವೈಭವೀಕರಿಸುವ ತರಾತುರಿಯಲ್ಲಿ ಮುಖಾಮುಖಿ ಮಾನವ ಸಂವಹನವನ್ನು ನಗಣ್ಯಗೊಳಿಸುತ್ತದೆ. ಇಲ್ಲಿ ಯಾಂತ್ರಿಕ ಸಲಕರಣೆಯೊಂದು ಮಾನವ ಜೀವನದ ನಿತ್ಯ ಸಹಜ ಚಟುವಟಿಕೆಯೊಂದರ ಸಾಧ್ಯತೆಗಳನ್ನು ವಿಸ್ತರಿಸಿಕೊಡುವ ಸಾಧನವಾಗುಳಿಯದೆ, ಆ ಸಹಜ ಪ್ರಕ್ರಿಯೆಗಿಂತ ತನ್ನಕ್ರಿಯೆ ಮಿಗಿಲೆಂಬ ರೀತಿಯ ಮೆರುಗನ್ನು ಪಡೆದುಕೊಳ್ಳುತ್ತದೆ; ಸರಕುಸನ್ನಿಯ ಕಿರು ಚಿಹ್ನೆಯಾಗುತ್ತದೆ.

ಭಾರತಿ ಟೆಲಿಕಾಮ್‌ನ ಜಾಹೀರಾತೂ ಇಂಥದೆ ಸರಕನ್ನು ಸ್ತುತಿಸುವುದಾದರೂ ತನ್ನ ತರ್ಕ ಹಾಗೂ ಹಾಸ್ಯಪ್ರಜ್ಞೆಯನ್ನು ತದ್ವಿರುದ್ಧ ರೀತಿಯಲ್ಲಿ ತೋರುತ್ತದೆ. ನಾಲ್ಕು ಬೇರೆಬೇರೆ ಕಿರು ಸನ್ನಿವೇಶಗಳನ್ನು ಹೊಂದಿರುವ ಈ ಜಾಹೀರಾತಿನ ಒಂದು ಭಾಗದಲ್ಲಿ ಗಂಡ ಕಚೇರಿಯಿಂದ ಮನೆಯಲ್ಲಿರುವ ಪತ್ನಿಗೆ ಮೊಬೈಲ್ ಫೋನ್ ಮೂಲಕ ತಾನು ಸಂಜೆ ವ್ಯವಹಾರನಿಮಿತ್ತ ಅತಿಥಿಗಳಿಗೆ ಭೋಜನ ನೀಡಬೇಕಾಗಿದೆಯೆಂದೂ ಆ ಕಾರಣ ಮನೆಗೆ ಮರಳುವುದು ತುಂಬಾ ತಡವಾಗುವುದೆಂದೂ ಹೇಳುತ್ತ ಕಾರು ಹತ್ತುತ್ತಾನೆ; ಕಾರನ್ನು ನಡೆಸುತ್ತ ಸಂಭಾಷಣೆಯನ್ನು ಮುಂದುವರೆಸುತ್ತಾನೆ; ಕಾರಿನಿಂದ ಇಳಿದು ಮನೆಯೊಳಕ್ಕೆ ಪ್ರವೇಶಿಸುತ್ತ 'ಎಷ್ಟು ಒಳ್ಳೆ ಸುಗಂಧದ್ರವ್ಯವನ್ನು ಹಚ್ಚಿಕೊಂಡಿದ್ದೀಯ!' ಎಂದು ಉದ್ಗರಿಸುತ್ತಾನೆ; ಅಚ್ಚರಿಗೊಂಡ ಹೆಂಡತಿ ತನ್ನ ಸುಗಂಧದ ಸಂಗತಿ ಅಷ್ಟು ದೂರದಲ್ಲಿರುವ ಆತನಿಗೆ ತಿಳಿದುದು ಹೇಗೆಂದು ಪ್ರಶ್ನಿಸುತ್ತ ತಿರುಗುತ್ತಿದ್ದಂತೆ, ಮೊಬೈಲ್ ಫೋನಿನಲ್ಲಿ ಇಷ್ಟೆಲ್ಲ ಮಾತಾಡುತ್ತಲೆ ಕೋಣೆಯೊಳಗೆ ಬರುತ್ತಿರುವ ಗಂಡನನ್ನು ಕಾಣುತ್ತಾಳೆ; ಮುದದಲ್ಲಿ ಮೊಗವರಳಿಸುತ್ತಾಳೆ. ಎರಡನೆಯ ಹಾಗೂ ಮೂರನೆಯ ಭಾಗಗಳೂ ಇದೆ ಕ್ರಮದಲ್ಲಿ ದೂರಸಂಪರ್ಕ ಸಾಧನಗಳು ನೇರ ಮುಖಾಮುಖಿ ಸಂವಹನದ ವಿಸ್ತರಣೆಗೆ ಸಹಾಯಕವಾದುದನ್ನು ಬಿಂಬಿಸುತ್ತವೆ. ನಾಲ್ಕನೆಯ ಭಾಗದಲ್ಲಿ ಕಡು ಶಿಸ್ತಿನ ಕಾಲೇಜು ಅಧ್ಯಾಪಕನೊಬ್ಬ ತರಗತಿಯಲ್ಲಿ ಪಾಠ ಮಾಡುತ್ತಿರುತ್ತಾನೆ; ಕೊನೆಯ ಸಾಲಿನ ಹುಡುಗನೊಬ್ಬನ ಪೇಜರ್ ರಿಂಗಣಿಸುತ್ತದೆ. ಕುಪಿತನಾದ ಅಧ್ಯಾಪಕ ಆ ಸಲಕರಣೆಯನ್ನು ಕಿತ್ತುಕೊಂಡು ಅದನ್ನೂ ಹುಡುಗನನ್ನೂ

ದುರುಗುಟ್ಟಿ ನೋಡುತ್ತಾನೆ; ಪೇಜರ್‌ನ ಸಂದೇಶ ಕಾಣಿಸುತ್ತದೆ– ಇಂಡಿಯಾ ವಿನ್ಸ್ ದಿ ಮ್ಯಾಚ್!'; ಅಧ್ಯಾಪಕ ಕ್ಷಣಾರ್ಧದಲ್ಲಿ ತರಗತಿಯಲ್ಲಿಯೆ ಕುಣಿದು ಕುಪ್ಪಳಿಸ ತೊಡಗುತ್ತಾನೆ. ಅಧ್ಯಾಪಕ-ವಿದ್ಯಾರ್ಥಿಗಳ ನಡುವಿನ ನೇರ ಸಂವಹನ; ಹೊರಗಿನ ಸ್ನೇಹಿತ ವಿದ್ಯಾರ್ಥಿಗೆ ಕಳಿಸಿದ ಸುದ್ದಿಯ ದೂರ ಸಂವಹನ; ಇವೆರಡನ್ನೂ ಮೀರಿ ಮಿಂಚುವ ಅಧ್ಯಾಪಕನ ನರ್ತನದ ಶಬ್ದಾತೀತ ಸಂವಹನ – ಈ ಮೂರೂ ಸೇರಿ, ಆಧುನಿಕ ಮಾನವ ಸಂವಹನದ ವಿಭಿನ್ನ ಸ್ತರಗಳನ್ನು ಗುರುತಿಸುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ, ಆ ಅಧ್ಯಾಪಕನ ತತ್‌ಕ್ಷಣ ಸ್ಫೂರ್ತ ಕುಣಿತ, ಅವನ ಹಾಗೂ ವಿದ್ಯಾರ್ಥಿಗಳ ನಡುವಿನ ನಿತ್ಯರೂಢಿಯ ಜಡ ಸಂವಹನದ ಸ್ತರಕ್ಕಿಂತ ತೀರಾ ಭಿನ್ನವಾದ, ಮತ್ತು ಅದನ್ನು ಮೀರುವ ಮತ್ತೊಂದೆ ಶ್ರೀಮಂತ ಸ್ತರವನ್ನು ಕಾಣಿಸಿಕೊಡುತ್ತದೆ. ಇಲ್ಲಿಯ ತರ್ಕ ನಿಖರವಾಗಿದ್ದರೆ ಇಲ್ಲಿಯ ಹಾಸ್ಯ ಮನುಷ್ಯವ್ಯಕ್ತಿಗಳನ್ನು ಮಾನವೀಯ ಗೊಳಿಸುವಂತಿದೆ. ಎರಿಕ್‌ಸನ್ ಜಾಹೀರಾತು ತರ್ಕ ಹಾಗೂ ಹಾಸ್ಯಪ್ರಜ್ಞೆಗಳೆರಡನ್ನೂ ಕುಗ್ಗಿಸುವಂತಿದ್ದರೆ ಭಾರತಿ ಟೆಲಿಕಾಮ್ ಜಾಹೀರಾತು ಅವನ್ನು 'ಹಿಗ್ಗಿಸು'ವಂತಿದೆ. ಒಂದರದ್ದು ಕುಬ್ಜಕಲ್ಪನೆ, ಮತ್ತೊಂದರದ್ದು ಮುಕ್ತಕಲ್ಪನೆ.

ಪ್ರಸಕ್ತ ಜಾಹೀರಾತು ಜಗತ್ತಿನಲ್ಲಿ ಕುಗ್ಗಿದ ಪ್ರಜ್ಞೆಯ ಜಾಹೀರಾತುಗಳ ಸಂಖ್ಯೆ ಹಾಗೂ ಬಲವೆ ಬಲುಹೆಚ್ಚು ಹೌದೆ ?

ಇಂಥ ಜಗತ್ತಿನ ಜೀವಿಗಳು – ಅರ್ಥಾತ್ ರೂಪದರ್ಶಿಗಳು – ಪೆಪ್ಸಿ, ಕೋಕಾ ಕೋಲಾಗಳಂತಹ ಲಘುಪಾನೀಯಗಳನ್ನು ಕುಡಿದಾಗ ಕಡುಪಾನೀಯಗಳನ್ನು ಕುಡಿದಾಗಿನದಕ್ಕಿಂತ ಹೆಚ್ಚು ಅಮಲಿಗೊಳಗಾದವರಂತೆ ಆಡುವುದೂ ಇದೆ ಕುಗ್ಗಿದ ಪ್ರಜ್ಞೆಯ ಮತ್ತೊಂದು ಆಟವಿರಬಹುದೆ ?

(ಇಲ್ಲಿ ಇನ್ನೆರಡು ಸಂಗತಿಗಳನ್ನು ಹೇಳುವ ಒಳಒತ್ತಡ ತೀವ್ರವಾಗಿರುವುದರಿಂದ ಹೇಳಿಯೆಬಿಡುತ್ತೇನೆ:

ಒಂದು, ಸರಕುಮುಖಿ ಜಾಹೀರಾತುಗಳ ಗದ್ದಲದ ನಡುವೆ ಅಪರೂಪ ಕ್ಕೊಮ್ಮೆಯಾದರೂ ಮೂಡಿಬರುವ ಸಮಾಜಮುಖಿ ಜಾಹೀರಾತಿಗೆ ಸಂಬಂಧಿಸಿದ್ದು. ಇದು ನನಗೆ ಅತ್ಯಂತ ಪ್ರಿಯವಾದ ಅಂಥದ್ದೊಂದು ಜಾಹೀರಾತು. ಕೆಲವು ವರ್ಷಗಳ ಹಿಂದಿನವರೆಗೆ ದೂರದರ್ಶನದ ರಾತ್ರಿ ವಾರ್ತೆಯ ಮೊದಲು ಇದು ಪ್ರಸಾರ ವಾಗುತ್ತಿತ್ತು. ರಾಷ್ಟ್ರೀಯ ಸಾಕ್ಷರತಾ ಆಂದೋಲನದ ಪ್ರಚಾರದ ಭಾಗವಾಗಿದ್ದ ಅದರಲ್ಲಿ ಅಕ್ಷರಜ್ಞಾನದ ಅವಶ್ಯಕತೆ ಹಾಗೂ ಮಹತ್ವವನ್ನು ಬಿಂಬಿಸುವ ಹಲವು ಕಿರು ಬಿಡಿ ಪ್ರಸಂಗಗಳಿದ್ದವು. ಕೊನೆಯ ಪ್ರಸಂಗದಲ್ಲಿ, ವಾರದ ಬಟವಾಡೆಯ ದಿನ ಮಾಲೀಕ ಮೇಜಿನ ಮೇಲೆ ಹಣದ ರಾಶಿ, ಕೆಲಸಗಾರರ ಹೆಸರಿನ ಪಟ್ಟಿ ಇಟ್ಟುಕೊಂಡು



ಕುರ್ಚಿಯಲ್ಲಿ ಜಬರುದಸ್ತಾಗಿ ಕುಳಿತು, ಒಬ್ಬೊಬ್ಬರನ್ನೆ ಕೂಗಿ ಕರೆಯತೊಡಗುತ್ತಾನೆ. ಎಲ್ಲರೂ ಹೆಬ್ಬೆಟ್ಟೊತ್ತಿ ಸಂಬಳ ಪಡೆದು ಹೋಗುತ್ತಿರುವಾಗ ಒಬ್ಬ ನಿತ್ಯಸಹಜ ನಡಿಗೆಯನ್ನು ಬಿಟ್ಟು ಸಂಭ್ರಮದಲ್ಲಿ ನರ್ತಿಸುತ್ತ ಬರುತ್ತಾನೆ; ಅರ್ಧ ಅಚ್ಚರಿ ಅರ್ಧಕಿರಿಕಿರಿಯಲ್ಲಿ ಒಡೆಯ ಹೆಸರು ಪಟ್ಟಿಯ ಮೇಲೊಂದುಕಡೆ ತೋರುಬೆರಳಿಟ್ಟು 'ಇಲ್ಲಿ ಹೆಬ್ಬೆಟ್ಟೊತ್ತು' ಎಂದು ಗದರುತ್ತಾನೆ; ಅದಕ್ಕೇನೂ ಬೆಲೆ ಕೊಡದೆ ಆ ಕೂಲಿ ಗಕ್ಕನೆ ಒಡೆಯನ ಜೇಬಿನಿಂದ ಪೆನ್ನು ಕಿತ್ತುಕೊಳ್ಳುತ್ತಾನೆ; ಸಹಿ ಹಾಕಿ ಸಂಬಳ ಪಡೆದು ಪೆನ್ನು ಮರಳಿಸಿ ಅದೇ ನರ್ತನಗತಿಯಲ್ಲಿ ತೆರಳುತ್ತಾನೆ. ಅವನ ಆ ಮಂಗಾಟ ಇನ್ನಿಲ್ಲದಂತೆ ಅವನನ್ನು ಮಾನವೀಯಗೊಳಿಸಿತ್ತು. ಅವನ ನವಸ್ವಗೌರವದ ಆ ಪುಟ್ಟ ವೈನೋದಿಕ ಸಮರ್ಥನೆ ಒಂದು ಯುಗಪಲ್ಲಟವನ್ನು ಸೂಚಿಸಿತ್ತು.

ಇನ್ನೊಂದು ಸಂಗತಿ ಸಚಿನ್ ತೆಂಡುಲ್ಕರ್‌ನನ್ನು ಒಳಗೊಂಡ ಮೂರು ಜಾಹೀರಾತುಗಳಿಗೆ ಸಂಬಂಧಿಸಿದ್ದು. ಇವುಗಳಲ್ಲಿ ಎರಡು ಪೆಪ್ಸಿಯವು; ಮತ್ತೊಂದು ಆದಿದಾಸ್‌ನದು. 'ಓ ಸಚಿನ್ ಆಯೋರೆ ಭಯ್ಯಾ' (ರಾಮಯ್ಯಾ ವಸ್ತಾವಯ್ಯಾ ಧಾಟಿಯಲ್ಲಿ) ಹಾಗೂ 'ಘುಮಡ್ ಘುಮಡ್‌ಕರ್ ದಿಲ್ ಯೆ ಬೋಲೆ' ಎಂಬ ತುಣುಕು ಹಾಡುಗಳನ್ನು ಬಳಸಿಕೊಂಡಿರುವ ಈ ಎರಡೂ ಜಾಹೀರಾತುಗಳಲ್ಲಿ ತೆಂಡುಲ್ಕರ್ ಅತಿಸಾಮಾನ್ಯರ ನಡುವೆ ಕಾಣಿಸಿಕೊಳ್ಳುತ್ತಾನೆ. ಮೊದಲನೆಯದರಲ್ಲಿ, ಹೊಳೆಬದಿಯ ಕಟ್ಟೆಗಳಲ್ಲಿ ಬಟ್ಟೆಗಳನ್ನೊಗೆಯುತ್ತಿರುವ ಅಗಸರು ಆತ ಬಂದ ಸುದ್ದಿ ಕೇಳಿ ಹಾಡಿ ಕುಣಿದು ಸಂಭ್ರಮಿಸುತ್ತಾರೆ. ಎರಡನೆಯದರಲ್ಲಿ, ಹಳ್ಳಿಯೊಂದರ ಬಯಲಲ್ಲಿ ಎಲ್ಲರೂ ಸಚಿನ್‌ನ ಮುಖವಾಡ ಧರಿಸಿದ ಹೈದರು ತಮ್ಮಲ್ಲಿ ಪೆಪ್ಸಿ ಮಾರಲೆಂದು ಬಂದ ಹುಡುಗ ಸ್ವತಃ ಸಚಿನ್ ಎಂಬುದು ತಿಳಿದು ಆನಂದಿಸುತ್ತಾರೆ. ಆದಿದಾಸ್ ಜಾಹೀರಾತು ಆತನನ್ನು ಇದಕ್ಕೆ ತೀರ ಭಿನ್ನವಾಗಿ ಚಿತ್ರಿಸುತ್ತದೆ. ಇಲ್ಲಿ ಆತ ಕ್ರಿಕೆಟ್ ರಣಾಂಗಣದಲ್ಲಿ ಬ್ಯಾಟೆಂಬ ಆಯುಧ ಹಿಡಿದ ಧೀರಯೋಧ; ಆತನ ಪ್ರತಿ ಚಲನವಲನವನ್ನೂ ಉಸಿರುಹಿಡಿದು ಕೆಲಸಬಿಟ್ಟು ಕಣ್ಣುನೆಟ್ಟು ನೋಡುವ, ಮಂತ್ರ ಧ್ವನಿಯಲ್ಲಿ ಆತನಿಗೆ ಶುಭ ಹಾರೈಸುವ ಮಧ್ಯಮ-ಮೇಲುವರ್ಗಗಳ ಆರಾಧ್ಯವೀರ. ಜಾನಪದ- ಅಭಿಜಾತಗಳೆಂಬ ವರ್ಗೀಕರಣವನ್ನು – ಗೊತ್ತು, ಇಂಥ ವರ್ಗೀಕರಣ ಅತ್ಯಂತ ವಾದವಿವಾದಾಸ್ಪದ ವಿಷಯ – ಜಾಹೀರಾತು ಜಗತ್ತಿಗೂ ಅನ್ವಯಿಸು ವುದಾದಲ್ಲಿ, ಸಚಿನ್ ಒಂದೆಡೆ folk hero, ಇನ್ನೊಂದೆಡೆ classical hero; ಅಥವಾ ಎರಡೂ ಒಟ್ಟೊಟ್ಟಿಗೆಯೆ. ಸದ್ಯದ ಜಾಹೀರಾತು ವ್ಯಕ್ತಿಮಾದರಿಗಳಲ್ಲಿ ಈ ಎರಡೂ ವರ್ಗಗಳ ನಡುವೆ ಇಷ್ಟು ಸಲೀಸಾಗಿ ಚಲಿಸಲು ಸಾಧ್ಯವಿರುವುದು ಸಚಿನ್ ಒಬ್ಬನಿಗೆಯೆ ಎಂದು ತೋರುತ್ತದೆ. ಆತ ಒಂದೆಡೆ ಪ್ರಿಯ ಪುಟ್ಟ ಬಾಲನೂ ಹೌದು, ಇನ್ನೊಂದೆಡೆ

‘ರಾಷ್ಟ್ರದ ಆಶೋತ್ತರ’ಗಳನ್ನು ಹೊತ್ತ ದಿಟ್ಟ ಯೋಧನೂ ಹೌದು.

ಇದಕ್ಕೆ ಇನ್ನೊಂದಿಷ್ಟುದ್ದದ ಬಾಲವನ್ನು ಸೇರಿಸುವುದಾದಲ್ಲಿ —ಕ್ರಿಕೆಟನ್ನೂ ಒಂದು ಮಾಧ್ಯಮವೆಂದು ಪರಿಗಣಿಸುವುದಾದಲ್ಲಿ, ಎಲ್ಲ ಮಾಧ್ಯಮಗಳಂತೆಯೆ ಕ್ರಿಕೆಟ್ ಕೂಡ ತನ್ನದೆ ರೀತಿಯ ಬಿಂಬವಾಸ್ತವವೊಂದನ್ನು ಕಟ್ಟಿಕೊಳ್ಳುತ್ತದೆ. ಕೆಲವೊಮ್ಮೆ ಇಂಥ ಬಿಂಬವಾಸ್ತವ ವಾಸ್ತವಕ್ಕೆ ಸರಿಸಮಾನವಾಗಿ ಸೆಡ್ಡು ಹೊಡೆಯಬಹುದು; ಕೆಲವೊಮ್ಮೆ ಅದನ್ನು ಸೋಲಿಸಲಿಕ್ಕೂ ಸಾಕು. ಎರಡು ವರ್ಷದ ಹಿಂದೆ ಕಾರ್ಗಿಲ್ ಸಮರದ ವೇಳೆಯಲ್ಲಿ ಇಂಡಿಯಾ — ಪಾಕಿಸ್ತಾನಗಳ ನಡುವೆ ವಿಶ್ವಕಪ್ ಕ್ರಿಕೆಟ್ ಪಂದ್ಯವೊಂದು ನಡೆಯಿತು (ಅಥವಾ, ಪಂದ್ಯದ ವೇಳೆಯಲ್ಲಿ ಸಮರವೊಂದು ನಡೆಯಿತು ) ಮ್ಯಾಚಿನ ಮರುದಿನ ಹಲವು ದಿನಪತ್ರಿಕೆಗಳಲ್ಲಿ ಪ್ರಕಟವಾದ ಚಿತ್ರವೊಂದು ಹೀಗಿತ್ತು: ಕದನದ ನಡುವಿನ ಬಿಡುವಿನಲ್ಲಿ ಸೈನಿಕರು ಅದು ಜೀವನ್ಮರಣದ ಮಾನಾಪಮಾನದ ಪ್ರಶ್ನೆಯೊ ಎನ್ನುವಂತೆ ಕ್ರಿಕೆಟ್ ಕಾಮೆಂಟರಿಗೆ ಕಿವಿಕೊಟ್ಟು ಕೂತಿದ್ದರು .

ಇನ್ನು ಕೆಲವೊಮ್ಮೆ ವಾಸ್ತವ-ಬಿಂಬ ವಾಸ್ತವಗಳೆರಡೂ ಕಲಸಿಹೋಗಬಹುದು: ಚಿತ್ರನಟ ರಾಜ್‌ಕುಮಾರ್-ವೀರಪ್ಪನ್ ಪ್ರಕರಣದ ಮೊದಲ ದಿನವದು. ಬೆಂಗಳೂರಿನ ಬೀದಿಬೀದಿಗಳ ಮೇಲೆ ಭುಗಿಲೆದ್ದಿದ್ದ ಗಲಭೆಘರ್ಷಣೆಗಳನ್ನು ಖಾಸಗಿ ಟೆಲಿವಿಷನ್ ಚಾನೆಲೊಂದು ಪ್ರತ್ಯಕ್ಷವಾಗಿ ಪ್ರಸರಿಸುತ್ತಿತ್ತು. ಪಡ್ಡೆಗಳ ಗುಂಪೊಂದು ರಸ್ತೆಬದಿಯ ಅಂಗಡಿ-ಮನೆಗಳಿಗೆ ಕಲ್ಲು ಬೀರುತ್ತ ಸಾಗುತ್ತಿದ್ದಂತೆ ವಾಹನಾರೂಢ ಟೆಲಿವಿಷನ್ ತಂಡ ಅವರನ್ನು ಹಿಂಬಾಲಿಸುತ್ತಿತ್ತು. ಪಡ್ಡೆಗಳು ತೂರಿದ ಕಲ್ಲು ಮನೆಯೊಂದರ ಕಿಟಕಿಯನ್ನು ಪುಡಿಪುಡಿಗೈಯುತ್ತಿದ್ದಂತೆ, ಮನೆಯೊಳಗೊಬ್ಬಾತ ಇಣಿಕಿ ಹಿಮ್ಮೆಟ್ಟುತ್ತಿದ್ದಂತೆ, ಮುನ್ನೂರು ಮೈಲು ದೂರದಿಂದ ಈ ವಾಸ್ತವದ ಬಿಂಬವನ್ನು ಕಂಡು ಭಯಗೊಂಡ ಮನಸ್ಸು ಇನ್ನಷ್ಟು ಭಯಾನಕ ಕಲ್ಪನೆಯಲ್ಲಿ ತತ್ತರಿಸುತ್ತ ತೊದಲಿತು: ಆ ಪುಂಡರು ಎಸೆದದ್ದು ಒಂದು ವೇಳೆ ಬರಿಯೆ ಕಲ್ಲಾಗಿರದೆ ಪುಟ್ಟದೊಂದು ಬಾಂಬಾಗಿದ್ದರೆ? ಕಿಟಕಿಗಷ್ಟೆ ಅಲ್ಲದೆ ಅದು ಮನೆಯಾತನ ಜೀವಕ್ಕೂ ಕಂಟಕವಾಗಿ ಪರಿಣಮಿಸಿದ್ದರೆ? ಟೆಲಿವಿಷನ್ ತಂಡ ಆ ಸನ್ನಿವೇಶವನ್ನೂ ‘ವಸ್ತುನಿಷ್ಠ’ವಾಗಿ ಸೆರೆಹಿಡಿದಿದ್ದರೆ? ಆ ಹೊತ್ತು ಮನೆಯ ಟೆಲಿವಿಷನ್ ಸೆಟ್ಟೂ ಆನಾಗಿದ್ದು, ಮನೆಯಾತ ಅದೇ ಚಾನೆಲ್ಲನ್ನು ಹಚ್ಚಿಕೊಂಡಿದ್ದರೆ? ತನ್ನ ಮನೆಯ ‘ಒಳಗ’ನ್ನು ಆತ ಆಗ ‘ಹೊರಗಿನವ’ನಾಗಿ ವೀಕ್ಷಿಸುತ್ತಿದ್ದನೆ? ತನ್ನ ಸಾವಿಗೆ ಆತ ತಾನೆ ಜೀವಂತ ಸಾಕ್ಷಿಯಾಗುತ್ತಿದ್ದನೆ? ತನ್ನ ದುರಂತದ ‘ದೃಶ್ಯ’ ಕ್ಕೆ ಆತ ತಾನೆ ‘ಪ್ರತ್ಯಕ್ಷದರ್ಶಿ’ ಯಾಗುತ್ತಿದ್ದನೆ?)



••• ••• •••

ಟೆಲಿವಿಷನ್ ಧಾರಾವಾಹಿ ಹಾಗೂ ಜಾಹೀರಾತುಗಳ ಜೋಡಿಗೆ ಈಚೆಗೆ ಇನ್ನೊಂದು ಪ್ರಕಾರ ಜೊತೆಗೂಡಿ ಅವು ಮೂರೂ ಸೇರಿ ತ್ರಿವಳಿಗಳಾಗಿರುವುದುಂಟು. ಈ ಮೂರನೆಯ ಪ್ರಕಾರ ಮ್ಯೂಸಿಕ್ ವಿಡಿಯೊ. ಪ್ರಜ್ಞಾಕುಬ್ಜತೆಯಲ್ಲಿ ಇದು ಮೊದಲೆರಡಕ್ಕಿಂತ ಭಿನ್ನವೇನಲ್ಲ. ಹತ್ತಾರು ಚಾನಲ್‌ಗಳಲ್ಲಿ ಪ್ರತಿನಿತ್ಯ ಇಪ್ಪತ್ತನಾಲ್ಕು ಗಂಟೆಗಳೂ ಹರಿದುಬರುವ ಈ ಮ್ಯೂಸಿಕ್ ವಿಡಿಯೊಗಳು ನೂರಕ್ಕೆ ನೂರರಷ್ಟು ಎನ್ನುವಷ್ಟು ಪ್ರೇಮ ಪ್ರಸಂಗಗಳನ್ನು ಕೇಂದ್ರವಾಗಿಟ್ಟುಕೊಂಡವು; ಇನ್ನಷ್ಟು ಸೂಕ್ಷ್ಮವಾಗಿ ನೋಡಿದರೆ, ಪ್ರೇಮಕ್ಕಿಂತ ಹೆಚ್ಚು ಕಾಮವನ್ನು ಕೇಂದ್ರವಾಗಿಟ್ಟುಕೊಂಡವು. ಈ ಪ್ರೇಮ-ಕಾಮ ಕೂಡ ನಿರ್ದಿಷ್ಟ ವರ್ಗ ಹಾಗೂ ವಯೋಮಾನವೊಂದಕ್ಕಷ್ಟೆ ಸೀಮಿತವಾದುದು. ಇದರ ಜಗತ್ತಿನೊಳಗಡೆಗೆ ಹೊರ ಜಗತ್ತಿನ ಅಜ್ಜ ಅಜ್ಜಿಯರಿಗೆ, ಅಪ್ಪ ಅಮ್ಮಂದಿರಿಗೆ, ಅಕ್ಕತಂಗಿ ಅಣ್ಣ ತಮ್ಮಂದಿರಿಗೆ ಯಾವ ಜಾಗವೂ ಇಲ್ಲ. ಇಲ್ಲಿ ಅಜ್ಜಿ ಮೊಮ್ಮಗುವನ್ನು ಮಲಗಿಸಲು ಹಾಡುವ ಲಾಲಿಯಿಲ್ಲ; ತಂಗಿ ಅಣ್ಣನನ್ನು ನೆನೆಯುವ ಹಾಡಿಲ್ಲ; ಬಿತ್ತನೆ ಮಾಡುತ್ತ ಗುನುಗುವ ರೈತರ ಪದವಿಲ್ಲ; ಕಾಳು ಬೀಸುತ್ತ ಸುಯ್ಯುವ ಹೆಂಗಸರ ಸೊಲ್ಲಿಲ್ಲ; ಮಳೆರಾಯನಿಗೆ ಮೊರೆಯಿಡುವ ಮನದಾಳದ ಮೊರೆತವಿಲ್ಲ; ಸುಗ್ಗಿಯ ಹಿಗ್ಗಿನ ಗೆಲುವಿನ ಗುಲ್ಲಿಲ್ಲ. ಅಲ್ಲಲ್ಲಿ ಈ ಹಾಡುಗಳ ಧಾಟಿಯನ್ನು ಬಳಸಿಕೊಂಡರೂ ಕೂಡ ಮ್ಯೂಸಿಕ್ ವಿಡಿಯೊಗಳು ಅವುಗಳ ವಸ್ತುಗಳನ್ನು ಮಾತ್ರ ತಮ್ಮೊಳಗೆ ಬಿಟ್ಟುಕೊಳ್ಳುವುದಿಲ್ಲ.

ಮ್ಯೂಸಿಕ್ ವಿಡಿಯೊ ಜಗತ್ತಿನಲ್ಲಿ ಈಚೆಗೆ ದೊಡ್ಡ ಹೆಸರು ಮಾಡಿದವರಲ್ಲಿ ದಾಲೆರ್ ಮೆಹೆಂದಿ ಎಂಬಾತನೂ ಒಬ್ಬ. ಈತ ಪಂಜಾಬಿ ಜಾನಪದ ಮಟ್ಟು - ಕುಣಿತಗಳನ್ನೆ ರಿಮಿಕ್ಸ್, ರಿಸೈಕಲ್ ಮಾಡಿ ಲಕ್ಷೋಪಲಕ್ಷ ಆಲ್ಬಮುಗಳನ್ನು ಮಾರಿದವನು. ಇಂಥ ನೃತ್ಯ - ಸಂಗೀತವನ್ನು ‘ಪಾಪ್’, ‘ಇಂಡಿ - ಪಾಪ್’ ಎಂದೆಲ್ಲ ಕರೆಯುತ್ತಾರಾದರೂ ಅದು ಜನಪದದ ಸಮೃದ್ಧಿಯನ್ನು ಸೂರೆಗೈದು ಅದನ್ನು ತನ್ನ ಬಂಡವಾಳವಾಗಿ ಬಳಸಿಕೊಂಡಿರುವುದನ್ನು ಅಲ್ಲಗಳೆಯಲು ಮಾತ್ರ ಯಾರಿಗೂ ಸಾಧ್ಯವಿಲ್ಲ. ಇಂಥ ದಾಲೆರ್ ಮೆಹೆಂದಿಯನ್ನು ಉಪಯೋಗಿಸಿಕೊಂಡ ಜಾಹೀರಾತೊಂದು ಕೆಲ ವರ್ಷಗಳ ಹಿಂದೆ ಕ್ರಿಕೆಟ್ ಪಂದ್ಯಪ್ರಸಾರಗಳ ನಡುವೆ ಮೂಡಿಬರುತ್ತಿತ್ತು. ‘ಓಹ್ಹೋರೆ, ಓಹ್ಹೋರೆ, ..... ಮಸ್ತಿಯಾ ಮಸ್ತಿಯಾ ಛಾಗಯೀ, ..... ಬಾರಿಶೆ ಆಗಯೀ’ ಎಂದು ಬಹುಸುಂದರ ಜಾನಪದ ಧಾಟಿಯ ತುಣುಕುಹಾಡಿದ್ದ ಅದರಲ್ಲಿ ಮೆಹೆಂದಿಯ ಜೊತೆ ತುಂಡುಬಟ್ಟೆಯ ಲಲನೆಯರೊಂದಿಷ್ಟು ಜನ

ಕುಣಿಯುತ್ತಿದ್ದರು; ಎಲ್ಲರೂ ಸೇರಿ ಕೊನೆಗೆ 'ಮಿಲ್‌ಕೆ ಪಿಯೊ ಕೋಕಾ ಕೋಲಾ, ಕೋಕಾ ಕೋಲಾ' ಎಂದು ಮುಗಿಸುತ್ತಿದ್ದರು.

ಇಲ್ಲಿ, ನಮ್ಮ ಈ ಒಟ್ಟೂ ಆಟದ ಒಂದು ಭಾಗವಾಗಿರುವ ಶಬ್ದಚಮತ್ಕಾರಕ್ಕೊಂದಿಷ್ಟು ರಾಜಕೀಯ ಸೂಕ್ತತೆಯನ್ನು ಬೆರೆಸಿ, ಈ ಅರ್ಧ ಮ್ಯೂಸಿಕ್ ವಿಡಿಯೊ-ಅರ್ಧ ಜಾಹೀರಾತನ್ನು ಇನ್ನೊಂದು ಚರ್ಚಾಖಂಡದ ಪ್ರಾರಂಭ ಬಿಂದುವನ್ನಾಗಿಟ್ಟುಕೊಂಡು, ಅದರ ಬಗ್ಗೆ 'ಇದನ್ನು ಏನೆಂದು ಕರೆಯೋಣ – folklore ಎಂದೊ ಅಥವಾ cokelore ಎಂದೊ ? ' – ಎಂಬ ಪ್ರಶ್ನೆಯನ್ನೆತ್ತಬಹುದೆ ? ಇಂದು, ನಿರ್ದಿಷ್ಟ ರಾಜಕೀಯ ಅರ್ಥವೊಂದರಲ್ಲಿ, ನಿಜವಾದ folk singer ಎಳನೀರು ನಿಂಬೆಪಾನಕ ಕಷಾಯ ಲಸ್ಸಿಗಳ ಬೆಂಬಲಿಸಿ ಹಾಡಬೇಕಾಗಿರುವಾಗ folk ಅಂಶಗಳನ್ನು ಬಳಸಿಕೊಂಡು coke ಪರವಾಗಿ ಹಾಡಿ ಕುಣಿಯುವುದು ಎಷ್ಟು ಸಮಂಜಸವೆಂದು ಕೇಳಬಹುದೆ ? ಕೋಲಾವನ್ನು ಯುವ ಪೀಳಿಗೆಗೆ ಸಮೀಕರಿಸಿ, ಅವರ ಪರಮ ಪೀಳಿಗೆಯೆಂಬಂತೆ, ಅದು ಅವರ ಪರಮ ಪಾನೀಯವೆಂಬಂತೆ, ಹುಚ್ಚೆಬ್ಬಿಸಿ ಪ್ರವರ್ತಿಸುವುದರ ಹಿಂದೆ, ತನ್ಮೂಲಕ ಬಾಲ ಹಾಗು ವೃದ್ಧವರ್ಗಗಳನ್ನು ನಗಣ್ಯಗೊಳಿಸುವುದರ ಹಿಂದೆ cola colonialisms ನ ಹೊಸ ಹುನ್ನಾರವೊಂದು ಅಡಗಿರಬಹುದೆ ?

ಟೆಲಿವಿಷನ್ ಪ್ರಪಂಚದ ಮ್ಯೂಸಿಕ್ ವಿಡಿಯೊ ಖಂಡದ ಅಳತೆಗೋಲಲ್ಲಿ ಚಾನೆಲ್ ವಿ, ಎಂಟಿವಿಗಳು ಅತ್ಯುನ್ನತ ಶಿಖರಗಳು. ಅವನ್ನು ಇಷ್ಟಪಡುವವರು ಅನಿಷ್ಟವೆಂದು ಜರೆಯುವವರು ಇಬ್ಬರೂ ಸಹ ಅವುಗಳ 'ಆಧುನಿಕತೆ'ಯನ್ನು ಒಪ್ಪಿಕೊಂಡು, ಅದರ ಆಧಾರದ ಮೇಲೆಯೆ ತಂತಮ್ಮ ಧ್ರುವಭಿನ್ನ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುತ್ತಾರೆ. ಆಯಿತು, ಅಂಥ ಆಧುನಿಕತೆಯನ್ನು ಇನ್ನೊಂದು ವಿಧದಲ್ಲಿ ವ್ಯಾಖ್ಯಾನಿಸಲು ಸಾಧ್ಯವೆ ? ಉದಾಹರಣೆಗೆ, M.T.V. ಅನ್ನು Music Television ಎಂಬುದರ ಬದಲು Modern Tribal Video ಎಂದೂ ವಿಸ್ತರಿಸಬಹುದೆ ? M.T.V.ಯ ಆಧುನಿಕರು ಅನ್ಯ ಅಭಿರುಚಿಯವರನ್ನು ಟ್ರೈಬಲ್‌ಗಳು - ಆದಿವಾಸಿಗಳು – ಎಂದು ತಿಳಿಯುವ ರೀತಿಯ ಪ್ರಸ್ತುತ ಐತಿಹಾಸಿಕ ಸಂದರ್ಭದಲ್ಲಿ, ಇಂಥ ತಿರುಚು ವ್ಯಾಖ್ಯೆಯ ಮೂಲಕ, 'ಆಧುನಿಕರು' ಹಾಗೂ 'ಆದಿವಾಸಿಗಳ' ನಡುವಿನ ಮೂಲಭೂತ ಸಾಮ್ಯತೆ-ಭಿನ್ನತೆಗಳನ್ನು ಹೀಗೆ ಗುರುತಿಸಬಹುದೆ ? ಒಂದು, 'ಆದಿವಾಸಿ' ಬುಡಕಟ್ಟುಗಳು ಸೀಮಿತ ಭೌಗೋಳಿಕ ವಲಯಗಳಲ್ಲಿ – ನಾಗರಹೊಳೆ ಅರಣ್ಯ, ನೀಲಗಿರಿ ಬೆಟ್ಟ, ಬಸ್ತಾರ್‌ನ ಕುರುಚಲು ಕಾಡು, ಆಫ್ರಿಕೆಯ ಕಾಂಗೊ ನದಿ ತಟ, ಅಮೆರಿಕೆಯ ಹುಲ್ಲುಗಾವಲು ಇತ್ಯಾದಿ – ಒಟ್ಟೊಟ್ಟಿಗೆ ವಾಸಮಾಡಿಕೊಂಡಿರುವಂಥವರು. ಅದೇ, 'ಆಧುನಿಕ' ಬುಡಕಟ್ಟಿನವರು ಇಂಥ ಕಿರು ಭೌಗೋಳಿಕ



ಸೀಮೆಗಳನ್ನು ಮೀರಿ, ಬೆಂಗಳೂರಿನ ಕಂಟೋನ್‌ಮೆಂಟಿನಲ್ಲಿ ಎರಡು ಲಕ್ಷ, ಮುಂಬಯಿಯ ಮಲಬಾರ್ ಹಿಲ್‌ನಲ್ಲಿ ನಾಲ್ಕು, ಲಂಡನ್‌ನ ವೆಸ್ಟ್ ಎಂಡ್‌ನಲ್ಲಿ ಹತ್ತು, ನ್ಯೂಯಾರ್ಕ್‌ನ ಮ್ಯಾನ್‌ಹಟನ್‌ನಲ್ಲಿ ಇಪ್ಪತ್ತು ಲಕ್ಷಗಳಂತೆ ಭೂಗೋಳದ ಬಿಡಿಬಿಡಿ ಭಾಗಗಳಲ್ಲಿ ಹರಡಿಕೊಂಡಿರುವವರು. ಎರಡು, ಆದಿಮ ಬುಡಕಟ್ಟುಗಳಿಗೆ ಕಾಮವೆನ್ನುವುದು ಜೀವ-ಜೀವನದ ಅನೇಕಾನೇಕ ಅಂಶಗಳಲ್ಲಿ ಇನ್ನೊಂದು ಮಾತ್ರ; ಆಧುನಿಕ ಬುಡಕಟ್ಟುಗಳಿಗೆ ಅದು ಏಕಮಾತ್ರ. ಪುರಾತನ ಬುಡಕಟ್ಟುಗಳಿಗೆ ಕಾಮ ಭಯ-ವಿಸ್ಮಯ-ವಿನಯಗಳ ಆಗರವಾದರೆ, ಆಧುನಿಕ ಬುಡಕಟ್ಟುಗಳಿಗೆ ಅದು ವಿಕ್ರಮ-ವಿಕ್ರಯಗಳ ವಿಷಯ.

ಈ ನಿಸ್ಸೀಮ ಆಧುನಿಕರು ಸೀಮಾಬದ್ಧ ಆದಿಮರನ್ನು ಹಳ್ಳಿಗೊಡ್ಡುಗಳೆಂದೂ ಸೀಮಿತ ಪ್ರಜ್ಞೆಯವರೆಂದೂ ಲೇವಡಿಗೀಡು ಮಾಡುವುದುಂಟು. ಸಂಕುಚಿತ ಸ್ಥಳೀಯತೆಯನ್ನು ಬಿಟ್ಟು ಕೊಟ್ಟು ಇಡಿಯ ಜಗತ್ತನ್ನು ಒಂದು ಪುಟ್ಟ ಹಳ್ಳಿಯಾಗಿ ಪರಿವರ್ತಿಸಿದರೆ ಮಾತ್ರ ಅಭಿವೃದ್ಧಿ ಸಾಧ್ಯವೆಂದು ಅವರು ವಾದಿಸುವುದುಂಟು. ಆದರೆ, ಆದಿಮರ ಸೀಮಿತ ಸ್ಥಳ ಪ್ರಜ್ಞೆ ತನ್ನ ಅಂಡರೂಪದಲ್ಲಿ ಸೀಮಾತೀತ ಬ್ರಹ್ಮಾಂಡ ಪ್ರಜ್ಞೆಯನ್ನು ಅಡಗಿಸಿಕೊಂಡಿದ್ದರ ಬಗ್ಗೆ ಇವರಿಗೆ ಅರಿವಿಲ್ಲ; ವ್ಯಕ್ತಿಗಳನ್ನು ಮಾತ್ರವಲ್ಲ ಸಂಸ್ಕೃತಿ-ಸಮುದಾಯಗಳನ್ನೂ ಕಾಮಾರ್ಥವಾಗಿ ಮಾತ್ರ ಗ್ರಹಿಸುವ ತಮ್ಮ ಕಣ್ಣು ಮನಸುಗಳೆ ಅತ್ಯಂತ ಕುಗ್ಗಿದವೆಂಬುದು ಇವರಿಗೆ ಅರಿವಾಗುವುದಿಲ್ಲ. ತಾವು ಗ್ರಾಮಪ್ರಜ್ಞೆಗೆ ಆರೋಪಿಸುವ ಕೂಪಮಂಡೂಕತೆ ವಾಸ್ತವದಲ್ಲಿ ತಮಗಷ್ಟೆ ಸೀಮಿತವಾದ ಗುಣವೆಂಬ ಸರಳಸತ್ಯವನ್ನು ಕಾಣುವ ಕನಿಷ್ಠ ವೈಶಾಲ್ಯವೂ ಇವರಿಗಿಲ್ಲ. ಇಂಥ 'ಆಧುನಿಕ' ಪ್ರಜ್ಞೆಯ ದಿಟ ಆಯಾಮಗಳನ್ನು ಕಂಡಾಗ ಇನ್ನೊಂದು ಪ್ರಶ್ನೆ ಕಾಡಬಹುದು – ಕುಗ್ಗಿದ್ದು ನಮ್ಮ ಭವಲೋಕವೊ ಇಲ್ಲ ಭಾವಲೋಕವೊ ?

ಪ್ರಸಕ್ತ ಟೆಲಿವಿಷನ್ ಪ್ರಪಂಚದ ಧಾರಾವಾಹಿಖಂಡ, ಜಾಹೀರಾತುಖಂಡ, ಮ್ಯೂಸಿಕ್ ವಿಡಿಯೊಖಂಡಗಳೆಲ್ಲವೂ ತಮ್ಮ ತಮ್ಮ ಬಿಡಿಕನ್ನಡಿಗಳಲ್ಲಿ ಇಂಥ ಸಂಕುಚಿತ ಪ್ರಜ್ಞೆಯನ್ನೆ ಪ್ರತಿಫಲಿಸುತ್ತವೆ. ಅಲ್ಲಿಯ ವ್ಯಕ್ತಿಗಳು ವ್ಯಕ್ತಿತ್ವಗಳು ವ್ಯಕ್ತಿತ್ವ-ಮಾದರಿಗಳು ಬಹುಪಾಲು ಇಂಥ ಸ್ವರತಿಯ ರೋಗಕ್ಕೆ ತುತ್ತಾಗಿರುವಂತೆ ತೋರುತ್ತವೆ. ಮಾಧ್ಯಮಗಳನ್ನು ಕಿಟಕಿಗಳಿಗಿಂತ ಹೆಚ್ಚಾಗಿ ಕನ್ನಡಿಗಳಂತೆ ಬಳಸುವ ಅವು ತಮ್ಮ ಸೀಮಿತ ಚೆಲುವನ್ನೊ ಸೀಮಿತ ನೋವನ್ನೊ ಸರ್ವಸ್ವವೆಂದು ಬಗೆದು ತಮ್ಮ ಮೈಮನಸುಗಳನ್ನು ಸದಾಕಾಲ ತಾವೇ ನೇವರಿಸಿಕೊಳ್ಳುತ್ತಿರುತ್ತವೆ; ಮಸಾಜು ಮಾಡಿಕೊಳ್ಳುತ್ತಿರುತ್ತವೆ.

ಮಾಧ್ಯಮ ಅಧ್ಯಯನದ ಮುಖ್ಯಮಾದರಿಯೊಂದನ್ನು ಉದ್ಘಾಟಿಸಿಕೊಟ್ಟ

ಮಾರ್ಶಲ್ ಮೆಕ್‌ಲೂಹನ್ ಹಿಂದೊಮ್ಮೆ ಹೇಳಿದ್ದುಂಟು: Medium is the message. ಈಗ ಅದನ್ನು ತುಸು ತಿರುಚಿ Medium is the massage ಎಂದೂ ಹೇಳಬೇಕಾಗಿದೆಯೆ? ಆತ್ಮಾಭಿವ್ಯಕ್ತಿಗಿಂತ ಹೆಚ್ಚು ಆತ್ಮಪ್ರದರ್ಶನವನ್ನೆ ನೆಚ್ಚಿಕೊಂಡಾಗ ಆತ್ಮದ ಪರಿಧಿ ಹೀಗೆ ಕುಗ್ಗಿಯೇ ತೀರುವುದೆ?

••• ••• •••

ಇಂಥ ಸಮಸ್ಯೆ, ಸ್ವವಿಶಿಷ್ಟ ಹಾಗೂ ಸ್ಥಳವಿಶಿಷ್ಟವಾದ ಸತ್ವ-ತತ್ವ-ಮೌಲ್ಯಗಳನ್ನು ಮಾಲುಗಳಾಗಿಸಿ ಜಾಗತಿಕ ಮಟ್ಟದಲ್ಲಿ ಮಾರಹೊರಡುವ ಮನೋಧರ್ಮದ ಅನಿವಾರ್ಯ ಉಪಫಲವೆ? ಉತ್ಪಾದಕರನ್ನು ಉಪೇಕ್ಷಿಸಿ ಉಪಭೋಗಿಗಳನ್ನೆ ಅಪೇಕ್ಷಿಸುವ ಸನ್ನಿವೇಶದಲ್ಲಿ ಈ ಸಮಸ್ಯಾತ್ಮಕತೆ ಅತ್ಯಂತ ಸಹಜ ಹೌದೇ? ಮೇಲ್ಕಂಡ ಎಲ್ಲ ಖಂಡಗಳನ್ನು ಇಷ್ಟಿಷ್ಟು ಹಾದುಬಂದಿರುವ ದೊಡ್ಡ ಮಾದರಿಯೊಂದರ ಕಥೆ ಈ ಪ್ರಶ್ನೆಗಳಿಗೇನಾದರೂ ಉತ್ತರ ಸೂಚಿಸಬಹುದೇ?

ಆಧುನಿಕ ಭಾರತದ ಇತಿಹಾಸದಲ್ಲಿ 'ಅಮುಲ್'ನದು ಬಲುದೊಡ್ಡ ಹೆಸರು. ಸ್ವಾತಂತ್ರ್ಯ ಬಂದ ಕೆಲವೆ ವರ್ಷಗಳಲ್ಲಿ ಪ್ರಾರಂಭಗೊಂಡ ಈ ಸಂಸ್ಥೆ ಮುಂದೆ ಸಹಕಾರಿ ಸಂಘಟನೆಯ ಘನ ಹರಿಕಾರನಾಗಿ ಬೆಳೆಯಿತು. ಮೊದಲ ಹಂತಗಳಲ್ಲಿ ಅತೀವ ಸಂಕಷ್ಟಗಳನ್ನು ಅಸೀಮ ಸ್ಥೈರ್ಯದಿಂದೆದುರಿಸಿ ಗೆದ್ದು ಸ್ಥಿರಗೊಂಡ ಇದರ ಮೇಲ್ಪಂಕ್ತಿಯನ್ನನುಸರಿಸಿ ಅನಂತರ ದೇಶದಲ್ಲಿ ಸಾವಿರಾರು ಸ್ಥಳೀಯ ಸಹಕಾರಿ ಸಂಸ್ಥೆಗಳು ರೂಪುಗೊಂಡವು. ನೂರಾರು ಹಳ್ಳಿಗಳ ಸಾವಿರಾರು ಸಣ್ಣಸಣ್ಣ ಹಾಲು ಉತ್ಪಾದಕರ ಸಹಯೋಗದ ವೇದಿಕೆಯಾದ 'ಅಮುಲ್' ಆರ್ಥಿಕ ಕ್ಷೇತ್ರದಲ್ಲಷ್ಟೆ ಅಲ್ಲ, ಸಾಮಾಜಿಕ ಹಾಗೂ ರಾಜಕೀಯ ಸ್ತರಗಳಲ್ಲೂ ಕ್ರಾಂತಿಯನ್ನು ಸಾಧಿಸಿತು. ಇಂದಿನ ಜಾಗತೀಕರಣ - ಉದಾರೀಕರಣಗಳ ಕಾಲದಲ್ಲೂ ಅದು ಯಾವುದೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಸೆಡ್ಡು ಹೊಡೆಯಬಲ್ಲಂತಹ ಸಾಮರ್ಥ್ಯವನ್ನು ಪಡೆದುಕೊಂಡಿದೆ.

ಇಷ್ಟು 'ವಿಶಿಷ್ಟ'ವಾದ ಒಂದು ಸಂಸ್ಥೆ ತನ್ನ ಉತ್ಪಾದನೆಗಳನ್ನು ಮಾರುವುದರ ಜೊತೆಗೆ, ತನ್ನ ವಾಸ್ತವವನ್ನು ಹೊರಗಿನ 'ಶಿಷ್ಟ' ಜಗತ್ತಿಗೆ ಬಿಂಬಿಸಿ ತೋರಿಸಹೊರಟಾಗ ಅದು ಯಾವ ಯಾವ ಘಟ್ಟಗಳನ್ನು ಹಾಯಬೇಕಾಗಬಹುದು ಎನ್ನುವುದನ್ನು ಕೊಂಚ ನೋಡಬಹುದು. ಎಂಬತ್ತರ ದಶಕದ ಮೊದಲ ಭಾಗದಲ್ಲಿ ತಯಾರಾದ ಶ್ಯಾಮ್ ಬೆನಗಲ್ ನಿರ್ದೇಶನದ ಹಿಂದಿ ಚಲನಚಿತ್ರ 'ಮಂಥನ್' ಈ ಸಂಸ್ಥೆಯ ಆದಿಮ ಇತಿಹಾಸವನ್ನು ಬಿಂಬಿಸುವಂತಿತ್ತು. ಇಷ್ಟೇ ಮುಖ್ಯವಾಗಿ, ಅಮುಲ್‌ನ ಆ ಕಾಲದ ಹತ್ತು ಲಕ್ಷ ಸಹಕಾರಿ ಸದಸ್ಯರು, ಪ್ರತಿಯೊಬ್ಬರೂ ಒಂದೊಂದು ರೂಪಾಯಿ



ನೀಡುವುದರ ಮೂಲಕ, ತಮ್ಮದೆ ಕಥೆಯನ್ನು ನಿರೂಪಿಸುವ, ಹತ್ತು ಲಕ್ಷ ರೂಪಾಯಿ ವೆಚ್ಚದ, ಆ ಚಿತ್ರದ ನಿರ್ಮಾಪಕರಾಗಿದ್ದರು. ಚಿತ್ರದ ಗುಣಾವಗುಣಗಳದ್ದು ಇನ್ನೊಂದೆ ಚರ್ಚೆಯ ವಿಷಯ; ಆದರೆ ಅದು ತನ್ನ ಕೇಂದ್ರಪ್ರಸ್ತರದಲ್ಲಿ ಅದೇ ಜನಸಾಮಾನ್ಯರ ನೋವು-ನಲಿವು ಸೋಲು-ಗೆಲವುಗಳನ್ನು ತನ್ನದೆ ರೀತಿಯಲ್ಲಿ ದಾಖಲಿಸಿತ್ತು. ಅವರ ಹಾಲಿನ ಹಿಂದಿನ ಜೀವ ಹಿಂಡುವ ಸಂಕಟವನ್ನು ಚಿತ್ರ ಗಮನಿಸಿತ್ತು.

'ಮಂಥನ'ದ ಅನಂತರ ಅಮುಲ್ ತನ್ನ ಎರಡನೆಯ ಬಿಂಬರೂಪವನ್ನು ತಳೆದದ್ದು 'ಸುರಭಿ'ಯಲ್ಲಿ. ಅಮುಲ್ ಪ್ರಾಯೋಜಿಸಿದ ಈ ಮ್ಯಾಗಸೀನ್ ಕಾರ್ಯಕ್ರಮ, ಎಂಬತ್ತರ ದಶಕದ ಕೊನೆಯ ಕೆಲವು ಹಾಗೂ ತೊಂಬತ್ತರ ದಶಕದ ಮೊದಲ ಕೆಲವು ವರ್ಷಗಳಲ್ಲಿ, ಸರ್ಕಾರಿ ಸ್ವಾಮ್ಯದ ಡಿಡಿ ಚಾನೆಲು ದೇಶಾದ್ಯಂತ ತನ್ನ ಜಾಲವನ್ನು ವ್ಯಾಪಕವಾಗಿ ವಿಸ್ತರಿಸಿಕೊಂಡ ದಿನಗಳಲ್ಲಿ ಅಪಾರ ಜನಪ್ರಿಯತೆಯನ್ನು, ಅಲ್ಲಲ್ಲ, ವೀಕ್ಷಕಪ್ರಿಯತೆಯನ್ನು ಗಳಿಸಿಕೊಂಡಿತ್ತು. ಆದರೆ ಇದರಲ್ಲಿ 'ಮಂಥನ'ದ ಪ್ರಕ್ರಿಯೆಗಿಂತ ಅದರ ಫಲಗಳೆ ಪ್ರಾಮುಖ್ಯವನ್ನು ಪಡೆದಿದ್ದವು. ಚಾಕೊಲೇಟ್ (ಅಮುಲ್-?) ನಗೆಯ ಚಂದದ ಇಬ್ಬರು ನಿರ್ವಾಹಕರು ಸಂಗೀತ-ಸಾಹಿತ್ಯ-ನೃತ್ಯ-ಚಿತ್ರ-ಪಾಕಶಾಸ್ತ್ರಗಳೆಲ್ಲದರ ಸ್ವಾದಿಷ್ಟ ಖಾದ್ಯಗಳನ್ನು ಇಷ್ಟಿಷ್ಟು ಮುಷ್ಠಿಯಳತೆಯಲ್ಲಿ ಉಣಿಸುತ್ತಿದ್ದರು. ಅಲ್ಲಿ ಮೂಲ ಮಂಥಕರ ಬೆವರ ವಾಸನೆ ಕಿಂಚಿತ್ತೂ ಸುಳಿಯುತ್ತಿರಲಿಲ್ಲ; ಅವರನ್ನು ಹೆಚ್ಚುಕಡಿಮೆ ಮರೆತಂತಿದ್ದ ಆ ಕಾರ್ಯಕ್ರಮ ಆದಾಗ್ಯೂ ಅಲ್ಲಲ್ಲಿ ಒಂದಿಷ್ಟು 'ಜಾನಪದ'ದ ಪದಾರ್ಥಗಳನ್ನು ರುಚಿಗೆಂದು ಸೇರಿಸುತ್ತಿತ್ತು; ಅವರನ್ನು ಮರೆತರೂ ಅವರಿಂದ ಅನತಿ ದೂರದ ಮಧ್ಯಮ-ಮೇಲುಮಧ್ಯಮ ವರ್ಗಗಳ ಅಭಿರುಚಿಗನುಸಾರವಾಗಿ ತನ್ನ ಸಾರವನ್ನು ಸಿದ್ಧ ಮಾಡಿಕೊಳ್ಳುತ್ತಿತ್ತು. (ಅನೇಕ ವರ್ಷಗಳ ಅನಂತರ, ಮೊನ್ನೆಯೊಮ್ಮೆ ಕುತೂಹಲಕ್ಕೆಂದು ಅದರ ಇತ್ತೀಚಿನ ರೂಪವನ್ನು ನೋಡಲೆತ್ನಿಸಿದಾಗ, ಇನ್ನೊಬ್ಬರಿಗೆ ಬಡಿಸುವ ಮಧ್ಯೆ ತಾನೂ ಒಂದಿಷ್ಟು ತಿಂದುಕೊಂಡು ಸ್ವಲ್ಪವಾದರೂ ತುಂಬಿಕೊಂಡಿದ್ದ ಆ ಕಾರ್ಯಕ್ರಮ ಈಗ ಸದಾಕಾಲ ಇನ್ನೊಬ್ಬರಿಗೆಯೆ ಬಡಿಬಡಿಸಿ ತಾನು ಮಾತ್ರ ತೀರಾ ಬಡಕಲು ಆಗಿರುವಂತೆ ಕಂಡಿತು)

ಅಮುಲ್‌ನ ಮೂರನೆಯ ಬಿಂಬರೂಪ ತೊಂಬತ್ತರ ದಶಕದಲ್ಲಿ ಸ್ಟಾರ್ ಪ್ಲಸ್‌ನಲ್ಲಿ ಪ್ರಸಾರವಾಗುತ್ತಿದ್ದ 'ಅಮುಲ್ ಇಂಡಿಯಾ ಶೋ'. ಇದು 'ಮಂಥನ್', 'ಸುರಭಿ' ಗಳೆರಡರ ವರ್ಗಗಳನ್ನು ಬಿಟ್ಟು ಬೃಹನ್ನಗರಗಳ ಬಹುಪ್ರತಿಷ್ಠಿತರನ್ನು ಗಮನದಲ್ಲಿಟ್ಟುಕೊಂಡಿತ್ತು. ಅಲ್ಲಿ ನಡೆಯುವ ಇಂಗ್ಲಿಷ್ ನಾಟಕಗಳು, ಪಶ್ಚಿಮೀಕೃತ ಕಲಾ ಚಟುವಟಿಕೆಗಳು ಇತ್ಯಾದಿಗಳನ್ನೆ ಹೆಚ್ಚು ಕಂಡು ಕಾಣಿಸುತ್ತಿದ್ದ ಈ ಕಾರ್ಯಕ್ರಮಕ್ಕೂ ಅಮುಲ್‌ನದೆ ಪ್ರಾಯೋಜನೆಯಿತ್ತು. ನಡುನಡುವೆ ಅಮುಲ್‌ನ

ಅನೇಕಾನೇಕ ಚಾಕೊಲೇಟು ಚೀಸು ಬಟರು ಇತ್ಯಾದಿ ಆಧುನಿಕ ಉತ್ಪಾದನೆಗಳ ಜಾಹೀರಾತುಗಳು 'Amul, The Taste of India' ಎಂಬ ಘೋಷಣೆಯೊಂದಿಗೆ ಮಿಂಚಿಮಾಯವಾಗುತ್ತಿದ್ದವು.

ಅಮುಲ್ ಆಧುನಿಕ ಭಾರತದ ಅಮೂಲ್ಯ ಆಸ್ತಿ ಯೆಂಬುದನ್ನು ಅಲ್ಲಗಳೆಯಲು ಯಾರಿಗೂ ಸಾಧ್ಯವಿಲ್ಲ. ನಿರ್ದಿಷ್ಟ ಐತಿಹಾಸಿಕ ಸಂದರ್ಭವೊಂದರಲ್ಲಿ ಅದು ಹಾಕಿಕೊಟ್ಟ ಮಾದರಿಯ ಮಹತ್ತಿಕೆ ಮರೆಯಲಾಗದಂಥಾದ್ದು. ಆದರೂ, ಹಸಿರುಕ್ರಾಂತಿ, ಕ್ಷೀರ ಕ್ರಾಂತಿಯಂತಹ ಯೋಜನೆಗಳ ಬಗ್ಗೆ ಇತ್ತೀಚೆಗೆ ಕೆಲವು ಪ್ರಾಜ್ಞರು ಎತ್ತಿರುವ ಪ್ರಶ್ನೆಗಳನ್ನೆ ಬೇರೆ ದಿಕ್ಕಿನಲ್ಲಿ ತಿರುಗಿಸಿ, ನಮ್ಮ ಶಬ್ದಚಮತ್ಕಾರದ ಆಟದ ಕ್ರಮದಲ್ಲಿ ಕೇಳಬೇಕೆನಿಸುತ್ತದೆ – The Test of Bharat ಘಟ್ಟದಿಂದ The Taste of India ಘಟ್ಟದವರೆಗೆ ಸಾಗಿಬಂದ ತನ್ನ ನಿಜ ಸಾಹಸಗಾಥೆಯನ್ನು ಬಿಂಬ ವಾಸ್ತವಗಳಲ್ಲಿ ಹಿಡಿದಿಡುವುದರಲ್ಲಿ ಪ್ರತಿಷ್ಠೆಯನ್ನು ಪಡೆದುಕೊಳ್ಳುವುದರಲ್ಲಿ, ಅಮುಲ್ ಗಳಿಸಿಕೊಂಡಿದ್ದರ ಜೊತೆಗೆ ಒಂದಿಷ್ಟು ಕಳೆದುಕೊಂಡಿದ್ದೂ ಇದೆಯೆ? ಸ್ವದೇಶಿ ಪ್ರಯೋಗವೊಂದು ಸರ್ವದೇಶಿ ಉದ್ಯಮವಾಗಹೊರಟಾಗ ಅದು, ಮುಖ್ಯಸ್ತರವೊಂದರಲ್ಲಾದರೂ, ಸುರೂಪಿಯಾಗುವ ಅವಸರದಲ್ಲಿ 'ಸ್ವ'ರೂಪವನ್ನು ಕುಂದಿಸಿಕೊಳ್ಳಬೇಕೆ? ಸಿರಿಮಾನ್ಯರಿಗೆ ಮೊಸರು ಉಣಿಸುವ ಭರದಲ್ಲಿ ಕೆಸರುಕೈಗಳ ಸಾಮಾನ್ಯರನ್ನು ಬದಿಸರಿಸಬೇಕೆ?

••• ••• •••

'ಸಾಮಾನ್ಯರು ಎಂದರೆ ಯಾರು' ಎನ್ನುವುದು ಈ ಮೊದಲೆ ಅಸಂಖ್ಯ ಸಾಮಾನ್ಯ-ಅಸಾಮಾನ್ಯ ವೇದಿಕೆಗಳಲ್ಲಿ ಚರ್ಚಿತವಾಗಿಯಾಗಿದೆ. ಇರಲಿ, ಸದ್ಯಕ್ಕೆ ನಾವು 'ಸಾಮಾನ್ಯ'ರ ಬಗೆಗಿರುವ ಅನೇಕಾನೇಕ ಪರಿಕಲ್ಪನೆಗಳಲ್ಲಿ ಒಂದನ್ನು ಮಾತ್ರ ಇಲ್ಲಿ ಎತ್ತಿಕೊಳ್ಳೋಣ. ಈ 'ಸಾಮಾನ್ಯ' ಓರ್ವ ನಿರ್ದಿಷ್ಟ ವಾಸ್ತವಿಕ ಸಾಮಾನ್ಯನಾಗಿರದೆ ಸರ್ವಸಾಮಾನ್ಯರ ಒಬ್ಬ ಪ್ರತಿನಿಧಿಯಾಗಿರಬಹುದು ಎನ್ನುವ ಒಂದು ವಾದವನ್ನೆ ಆಧಾರವಾಗಿಟ್ಟುಕೊಳ್ಳೋಣ. ಕಾರ್ಟೂನಿಸ್ಟರು ಬಳಸುವುದು ಇದೇ 'ಶ್ರೀಸಾಮಾನ್ಯ'ನ ಕಲ್ಪನೆಯನ್ನು .

ಇಂಥ 'ಶ್ರೀಸಾಮಾನ್ಯ'ನೊಬ್ಬನ ಸೃಷ್ಟಿಕರ್ತ, ಭಾರತದ ಶ್ರೇಷ್ಠ ಕಾರ್ಟೂನಿಸ್ಟ ಆರ್.ಕೆ. ಲಕ್ಷ್ಮಣರನ್ನು ಯಾರೋ ಒಮ್ಮೆ – ಶ್ರೀಮತಿ ಇಂದಿರಾ ಗಾಂಧಿ ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ – ಕೇಳಿದರಂತೆ: 'ಮಾನ್ಯ ಲಕ್ಷ್ಮಣರೆ, ಕಾರ್ಟೂನುಗಳ ಅನನ್ಯತೆ ಹಾಗೂ ಮಹತ್ವಗಳೇನು?' ಲಕ್ಷ್ಮಣ ಉತ್ತರಿಸಿದರಂತೆ: ' ನೋಡಿ, ನೀವು



ನಿತ್ಯ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಮುಖಪುಟದ ಒಂದು ತುದಿಯಲ್ಲಿ ಶ್ರೀಮತಿ ಗಾಂಧಿಯವರ ಫೋಟೋವನ್ನು ನೋಡುತ್ತೀರಿ. ಅಲ್ಲಿ ಆಕೆ ಅನಾಥಾಶ್ರಮಕ್ಕೊ ಅಮೆರಿಕಾ ಅಧ್ಯಕ್ಷನ ಮನೆಗೊ ದೇವಸ್ಥಾನವೊಂದಕ್ಕೊ ಯುದ್ಧಾಂಗಣಕ್ಕೊ ಭೇಟಿ ನೀಡಿದ ಚಿತ್ರವಿರುತ್ತದೆ. ಅದೇ ಪುಟದ ಇನ್ನೊಂದು ತುದಿಯಲ್ಲಿ ನಾನು ಬರೆದ ಆಕೆಯ ವ್ಯಂಗ್ಯಚಿತ್ರವೂ ಒಂದಿರುತ್ತದೆ. ಆ ಫೋಟೊ ಆಕೆಯ fact ಅನ್ನು ತೋರಿಸುತ್ತದೆ; ನನ್ನ ಕಾರ್ಟೂನು ಆಕೆಯ truth ಅನ್ನು ಕಾಣಿಸುತ್ತದೆ'.

ದಿಟ, ಭವವಾಸ್ತವ ಚಿತ್ರಗಳಿಗಿಂತ ಬಹುಬಾರಿ ವ್ಯಂಗ್ಯಭಾವ ಚಿತ್ರಗಳೆ ಹೆಚ್ಚು ಅಭಿವ್ಯಂಜಕ ಶಕ್ತಿಯನ್ನು ಹೊಂದಿರುವುದುಂಟು. 'ಅತಿರೇಖ'ಗಳ ಕಾರ್ಟೂನು ಕ್ಯಾರಿಕೇಚರು ಜೋಕುಗಳು ಅಣಕದ ಮೂಲಕವೆ ವ್ಯಕ್ತಿ-ವಿದ್ಯಮಾನ-ವಿಷಯಗಳ ಅಂತಃಸತ್ಯವನ್ನು ಹೆಚ್ಚು ಪ್ರಭಾವಶಾಲಿಯಾಗಿ ಅನಾವರಣಗೊಳಿಸುವುದು ಹೌದು.

'ಕರೋಡ್ ಪತಿ'ಯ ಯಶಸ್ಸಿನ ಜೊತೆಜೊತೆಗೆಯೆ ಅದಕ್ಕೆ ಸಂಬಂಧಿಸಿ ಅನೇಕ ಜೋಕುಗಳೂ ಹುಟ್ಟಿಕೊಂಡಿವೆ: ಅಮಿತಾಬನ ಸ್ವಂತ ಸಂಸ್ಥೆ ಎಬಿಸಿಎಲ್‌ಗೆ ಬೀಗ ಬಿದ್ದದ್ದು, ದೇವೆಗೌಡರು ರಾಮಕೃಷ್ಣ ಹೆಗಡೆಯವರಿಗೆ ಫೋನ್-ಎ-ಫ್ರೆಂಡ್ ಮೂಲಕ ಸಂಪರ್ಕಿಸಲೆತ್ನಿಸಿದ್ದು, ಅದೇ ರೀತಿಯ ದೂರವಾಣಿ ಸಂಭಾಷಣೆಯೊಂದರಲ್ಲಿ ಸೋನಿಯಾ ಗಾಂಧಿಯವರ ಪ್ರಶ್ನೆಗೆ ಅಟಲ್ ಬಿಹಾರಿ ವಾಜಪೇಯಿ ಉತ್ತರಿಸುವಲ್ಲಿ ಕಾಲಮಿತಿ ಮೀರಿಹೋದದ್ದು ಇತ್ಯಾದಿಯಾಗಿ. ಈ ಜೋಕುಗಳ ಕಲ್ಪನಾ ಸಮೃದ್ಧಿ, ಒಂದು ಅರ್ಥದಲ್ಲಿ, 'ಕರೋಡ್ ಪತಿ'ಯ ಕಲ್ಪನಾದಾರಿದ್ರ್ಯವನ್ನು ಎಣೆಯಿಲ್ಲದಂತೆ ಅಣಕಿಸುವಂಥದು.

ಇವುಗಳ ಸಾಲಿಗೆ, ಇನ್ನೊಂದು ಜೋಕುರೂಪಿ ವೈನೋದಿಕ ನಿಜ ಪ್ರಸಂಗವನ್ನು ಸೇರಿಸಿಕೊಳ್ಳಿ. ಇದು ಪ್ರತ್ಯಕ್ಷವಾಗಿ 'ಕರೋಡ್ ಪತಿ'ಗೆ ಸಂಬಂಧಿಸಿದ್ದಲ್ಲವಾದರೂ ನನ್ನ ದೃಷ್ಟಿಯಲ್ಲಿ ಪರೋಕ್ಷವಾಗಿ ಅದರ ಅಣಕುರೂಪದಂತಿರುವುದು. ವರುಷಗಳ ಹಿಂದೆ ಉದ್ಯೋಗದ ಶೋಧದಲ್ಲಿ ನಾನು ಖಾಸಗಿ ಕಾಲೇಜೊಂದರಲ್ಲಿ ತಾತ್ಕಾಲಿಕ ಉಪನ್ಯಾಸಕ ಹುದ್ದೆಯ ಸಂದರ್ಶನಕ್ಕೆ ಹೋಗಿದ್ದೆ. ಅಲ್ಲಿ ಆಶ್ಚರ್ಯವೊಂದು ಕಾದಿತ್ತು. ಹುದ್ದೆ ಶಾಶ್ವತವಾದ್ದೆ ಇರಲಿ ತಾತ್ಕಾಲಿಕವಾದ್ದೆ ಇರಲಿ, ಸಂದರ್ಶನಗಳಲ್ಲಿ ವಿಷಯ ತಜ್ಞರೊಬ್ಬರು ಇರುವುದು ಸರ್ವಸಾಮಾನ್ಯ ರೂಢಿ. ಇಲ್ಲಿ ಅಂಥವರಾರೂ ಇರದೆ, ಮ್ಯಾನೇಜ್‌ಮೆಂಟಿನ ಮೂವರು ಪದಾಧಿಕಾರಿಗಳು ಮಾತ್ರ ಇದ್ದರು. ಮೂವರೂ ಮೇಜಿನ ಮೂರು ಮೂಲೆಗಳಲ್ಲಿ ತಮ್ಮ ತಮ್ಮ ಹೆಸರುಗಳನ್ನೂ ಪದಾಧಿಕಾರಗಳನ್ನೂ ಶೈಕ್ಷಣಿಕ ಪದವಿಗಳನ್ನೂ ಸೂಚಿಸುವ ಸಣ್ಣ ಫಲಕಗಳನ್ನಿಟ್ಟುಕೊಂಡಿದ್ದರು. ಎಲ್ಲರೂ ಬಿ.ಎ.ಗೇ ನಿಂತವರು ನನ್ನಂಥ ಎಮ್ಮೆಯ ಪರೀಕ್ಷೆ ಹೇಗೆ ಮಾಡುತ್ತಾರೊ ಎಂದು ನಾನು

ಯೋಚಿಸುತ್ತಿರುವಷ್ಟರಲ್ಲಿ ನನ್ನ ಪ್ರಾಥಮಿಕ ಪರಿಚಯ ಮುಗಿದು, ಅಧ್ಯಕ್ಷರು ಕಾರ್ಯದರ್ಶಿ ಬೋರಣ್ಣನಿಗೆ ಸಂದರ್ಶನ ಶುರುಮಾಡು ಎಂದು ಅಪ್ಪಣೆಯಿತ್ತರು. ಸರಿ, ಬೋರಣ್ಣ ಸರಸರನೆ ಜೇಬಿನಿಂದ ಚೀಟಿಯೊಂದನ್ನು ಹೊರತೆಗೆದು ಅದರಲ್ಲೆ ಮುಖ ನೆಟ್ಟು 'ಮ್ಯಾಕ್‌ಬೆತ್ ನಾಟಕ ಬರೆದದ್ದು ಯಾರು?' ಎಂದ. ಸಂದರ್ಶನದ ಇಂಥ ಪರಿಯಕಂಡು ಆಘಾತವಾದರೂ ತಕ್ಷಣ ಸಾವರಿಸಿಕೊಂಡು 'ಷೇಕ್ಸ್‌ಪಿಯರ್' ಎಂದೆ. ಇನ್ನಿಬ್ಬರು ಗಣ್ಯರು ನನ್ನನ್ನಲ್ಲದೆ ಬೋರಣ್ಣನ ಮುಖವನ್ನೆ ನಿಟ್ಟಿಸಿ ನೋಡುತ್ತಿದ್ದರು. ನನ್ನುತ್ತರ ಕೇಳಿದ ಬೋರಣ್ಣ ಚೀಟಿಯಲ್ಲಿ ಚೂರು ಬೆರಳೋಡಿಸಿ, ತಲೆಯೆತ್ತಿ ಇನ್ನಿಬ್ಬರತ್ತ ನೋಡಿ, 'ಕರೆಕ್ಟ್, ಹೇಳಿದರು ಸಾರ್' ಎಂದ. ಅಧ್ಯಕ್ಷರು 'ಸರಿ, ಇನ್ನೊಂದು ಪ್ರಶ್ನೆ' ಎಂದರು. ಬೋರಣ್ಣ ಮತ್ತದೆ ರೀತಿಯಲ್ಲಿ 'ಡ್ಯಾಫೋಡಿಲ್ಸ್ ಪದ್ಯ ಬರೆದದ್ದು ಯಾರು?' ಎಂದ. 'ವರ್ಡ್ಸ್‌ವರ್ತ್' ಎಂದೆ. ಮತ್ತದೆ 'ಕರೆಕ್ಟ್, ಸಾರ್', ಮತ್ತದೆ 'ಮುಂದಿನ ಪ್ರಶ್ನೆ ಕೇಳು'. ಮತ್ತದೆ ಚೀಟಿಯಲ್ಲಿ ಕಣ್ಣು, ತುಟಿಯಲ್ಲಿ ಪ್ರಶ್ನೆ: 'ಗ್ರೇಟ್ ಎಕ್ಸ್‌ಪೆಕ್ಟೇಶನ್ಸ್ ಕಾದಂಬರಿ ಬರೆದದ್ದು ಯಾರು?' 'ಡಿಕನ್ಸ್'. ಮತ್ತದೆ 'ಕರೆಕ್ಟ್, ಸಾರ್'. ಅಲ್ಲಿಗೆ ಸಂದರ್ಶನ ಸಮಾಪ್ತಿ; 'ಹೋಗಿಬನ್ನಿ, ಫಲಿತಾಂಶ'ವನ್ನು ಪತ್ರದ ಮೂಲಕ ತಿಳಿಸುತ್ತೇವೆ.

ಬಹುಕಾಲ ನೆನಪಿನ ರಾಶಿಯಲ್ಲಿ ಹೂತುಹೋಗಿದ್ದ ಈ ಪ್ರಸಂಗ, ಇತ್ತೀಚೆಗೆ 'ಕರೋಡ್ ಪತಿ' ಯಲ್ಲಿ ಅಮಿತಾಬ್ ಬಚ್ಚನ್ ಕ್ಷಣಕ್ಷಣಕ್ಕೂ ಕಂಪ್ಯೂಟರ್ ಕಾಣಿಸಿದ ಪ್ರಶ್ನೆಗಳನ್ನು ಓದಿ ಹೇಳುವುದು, ಸ್ಪರ್ಧಿಗಳು ಕೊಟ್ಟ ಉತ್ತರಗಳನ್ನು ಪರಿಶೀಲನೆಗೆಂದು ಮತ್ತೆ ಕಂಪ್ಯೂಟರ್‌ಗೆಯೆ ನೀಡುವುದು, ಅದು ಸರಿಯೆಂದಲ್ಲಿ ತಾನೂ ಸರಿಯೆಂದು ತಪ್ಪೆಂದಲ್ಲಿ ತಾನೂ ತಪ್ಪೆಂದು ನಿರ್ಧರಿಸಿ ನುಡಿಯುವುದೆಲ್ಲ ನೋಡುತ್ತಿದ್ದಂತೆ, ಧುತ್ತನೆ ಮೇಲೆದ್ದು ಬಂದಿತು. ಓರ್ವ ಶ್ರೀಸಾಮಾನ್ಯನೆ ಆದ ನನಗೆ ಅನಿಸಿತು: ಆ ಬಡ ಬೋರಣ್ಣನಿಗೂ ಈ ಸೂಪರ್‌ಸ್ಟಾರ್ ಬಚ್ಚಣ್ಣನಿಗೂ ಮೂಲಭೂತವಾಗಿ ಅಂಥ ವ್ಯತ್ಯಾಸವೇನಿಲ್ಲ. ಬೋರಣ್ಣ ಬಡಪಾಯಿ ಸಂಸ್ಥೆಯೊಂದರ ಬಡಪಾಯಿ ಸದಸ್ಯನೋರ್ವನಾದ್ದರಿಂದ ಪ್ರಶ್ನೋತ್ತರ ನಡೆಸುವ ವೇಳೆ ಆತನ ಕೈಯಲ್ಲಿ ಚಿಂದಿಚೀಟಿಯೊಂದಿತ್ತು. ಬಚ್ಚಣ್ಣ ಸೂಪರ್ ತಾರೆಯಾದ್ದರಿಂದ, ಶ್ರೀಮಂತ ಸ್ಟಾರ್ ಸಂಸ್ಥೆಯ ಸಹಯೋಗವಿರುವುದರಿಂದ ಆತನ ಕೈಯಲ್ಲಿ ಒಂದು ಸೂಪರ್ ಕಂಪ್ಯೂಟರಿದೆ ಅಷ್ಟೆ. ಈ ಸಣ್ಣ ಮೇಲ್ಪದರದ ಗೌಣ ಭಿನ್ನತೆಯೊಂದನ್ನು ಬಿಟ್ಟರೆ ಆ ಚೀಟಿ ಮಾಡುವ ಕೆಲಸವನ್ನೆ ಈ ಕಂಪ್ಯೂಟರ್ ಮಾಡುತ್ತದೆ, ತುಸು ಯಂತ್ರಮುಗ್ಧ ಗೊಳಿಸುವ ರೀತಿಯಲ್ಲಿ; ಆ ಬೋರಣ್ಣ ಮಾಡುವ ಕೆಲಸವನ್ನೆ ಈ ಬಚ್ಚಣ್ಣ ಮಾಡುತ್ತಾನೆ, ತುಸು ಮಂತ್ರಮುಗ್ಧಗೊಳಿಸುವ ಶೈಲಿಯಲ್ಲಿ.



ಇನ್ನೊಂದಿಷ್ಟು ಹಿಂಜಿದರೆ ಈ ವಿನೋದಮಯ ಪ್ರಸಂಗ ವಿಷಾದನೀಯ ಸ್ಥಿತಿಯೊಂದನ್ನು ಸೂಚಿಸಲೂಬಹುದು. ಬೋರಣ್ಣ-ಬಚ್ಚಣ್ಣರಿಗಾಗಲಿ ಡೆರೆಕ್ ಓ'ಬ್ರಯನ್ - ಸಿದ್ಧಾರ್ಥ ಬಸುರಂಥವರಿಗಾಗಲಿ ಇನ್ಯಾರೆ ಶ್ರೇಷ್ಠಾತಿಶ್ರೇಷ್ಠ ಕ್ವಿಜ್ ಮಾಸ್ಟರ್‌ಗಳಿಗಾಗಲಿ, ಇಂಥ ಸ್ಪರ್ಧೆಗಳಲ್ಲಿ ಪುಂಖಾನುಪುಂಖವಾಗಿ ಸರಿಯುತ್ತರ ನೀಡಿ ಮಾನಬಹುಮಾನಗಳನ್ನು ಗೆದ್ದುಕೊಳ್ಳುವ ಮಾಧ್ಯಮ ಸೃಷ್ಟಿತ ಮೇಧಾವಿಗಳಿಗಾಗಲಿ, ತಾವು ಪ್ರಶ್ನೋತ್ತರ ನಡೆಸುವ ವಿಷಯಗಳ ಬಗ್ಗೆ ಭಾವನಾತ್ಮಕ ಅನುರಕ್ತಿಯಾಗಲಿ ಬೌದ್ಧಿಕ ಆಸಕ್ತಿಯಾಗಲಿ ಇರಲೆಬೇಕೆಂದಿಲ್ಲ. ಇನ್ಯಾರೋ ಸಾಧಿಸಿದ್ದನ್ನು ಇನ್ಯಾರೊ ಬರೆದಿಟ್ಟದ್ದನ್ನು ತಮ್ಮ ನೆನಪಿನಲ್ಲಿ ಆಳವಾಗಿ ಕೊರೆದಿಟ್ಟುಕೊಂಡರೆ ಸಾಕು, ಉತ್ಪಾದನೆಗಿಂತ ಉತ್ಪನ್ನಗಳನ್ನು, ಪ್ರಕ್ರಿಯೆಗಿಂತ ಫಲಗಳನ್ನು ತಲೆಯಲ್ಲಿ ತುರುಕಿಟ್ಟುಕೊಂಡರೆ ಸಾಕು; ಅಪ್ಪಿತಪ್ಪಿ ಮರೆತರೂ ತೊಂದರೆಯಿಲ್ಲ, ಮರಳಿ ನೆನಪಿಸಿಕೊಡಲು ಚೀಟಿ ಪುಸ್ತಕಗಳೊ ಚಮತ್ಕಾರದ ಕಂಪ್ಯೂಟರ್‌ಗಳೊ ಇದ್ದಾವಲ್ಲ. ಇಲ್ಲಿ ಅನುಭವದ ಸೂತ್ರಭಂಜಕ ಸಮೃದ್ಧತೆಗಿಂತ ಸೂತ್ರಪೂಜಕ ಮಾಹಿತಿಸ್ಮೃತಿಯ ಸೀಮಿತತೆಗೆಯೆ ಆದ್ಯತೆ. ಈ ಸೂತ್ರಪೂಜನೆಯೂ ಬಹಿರಂಗಕ್ಕೆ ಮಾತ್ರ ಸೀಮಿತಗೊಂಡದ್ದು. ಅದರ ಒಳಗೆ ಮತ್ತೆ, ಸ್ಮೃತಿಯಲ್ಲಿ ಪೇರಿಸಿಟ್ಟುಕೊಂಡ ವಿವಿಧ ಮಾಹಿತಿಗಳ ನಡುವೆ ಯಾವುದೆ ಅರ್ಥಪೂರ್ಣ ಸೂತ್ರವಾಗಲಿ ಸೃಜನಶೀಲ ಸರಣಿಯಾಗಲಿ ಇರಬೇಕೆಂದಿಲ್ಲ; ಭಾವಬಂಧವೊ ತರ್ಕಕೊಂಡಿಯೊ ಇರಬೇಕೆಂದಿಲ್ಲ. ಹೊರಸ್ಫೋಟದ ಮಾಹಿತಿರಾಶಿಯಿದ್ದರೆ ಸಾಕು, ಒಳಸ್ಫೋಟದ ಜ್ಞಾನ ವಿವೇಕಗಳಿರ ಬೇಕೆಂದಿಲ್ಲ. ಹತ್ತೆಂಟು ಕ್ಷೇತ್ರಗಳ ನೂರೆಂಟು ವಿವರಗಳನ್ನು ವಿಖಂಡಿಸಿ ಒಣಗಿಸಿ ಮೆದುಳ ಚೀಲದಲ್ಲಿ ತುಂಬಿಟ್ಟುಕೊಂಡರಾಯಿತು; ಬೇಕಾದಾಗ ಬೇಕೆಂದಲ್ಲಿ ಅವನ್ನು ಸರಕುಗಳಂತೆ ಮಾರಿದರಾಯಿತು, ಕೊಂಡರಾಯಿತು.

ಇಂಥ ವಿಖಂಡಿತ ಮಾರುಕಟ್ಟೆ ಮನೋಧರ್ಮ ಟೆಲಿವಿಷನ್ ಜಗತ್ತಿನ ವಾರ್ತಾ ಖಂಡದಲ್ಲೂ ಮೆರೆದಾಡುತ್ತಿರುತ್ತದೆ. ಸುದ್ದಿಹದ್ದುಗಳ ಸಾಮಾನ್ಯ ಮನೋವೃತ್ತಿ (ವೃತ್ತಿಮನ--?)ಯು ಸಾರಸೂಚಿಯೆಂಬಂತಿರುವ ಒಂದು ಪ್ರಸಂಗವನ್ನು ನೋಡಬಹುದು: ಎರಡು ವರ್ಷಗಳ ಹಿಂದೆ ಚಂಡಮಾರುತವೊಂದು ಒರಿಸ್ಸಾದಲ್ಲಿ ರುದ್ರತಾಂಡವ ಗೈಯುತ್ತಿದ್ದ ಸಂದರ್ಭದ ಮೊದಲದಿನ ಸಂಜೆ ಟೆಲಿವಿಷನ್ ವಾರ್ತೆಗಳನ್ನು ವೀಕ್ಷಿಸುತ್ತಿದ್ದಾಗ ಕಂಡುಬಂದದ್ದು ಇದು. ಪ್ರತಿಷ್ಠಿತ ಖಾಸಗಿ ಆಂಗ್ಲಭಾಷಾ ವಾರ್ತಾವಾಹಿನಿಯೊಂದರ ವಾರ್ತಾವಾಚಕಿಯೊಬ್ಬಳು ಮತ್ತು ವಿಶೇಷ ಸ್ಥಳೀಯ ವಾರ್ತಾಪ್ರತಿನಿಧಿಯೊಬ್ಬ ರಾಜ್ಯದ ಮುಖ್ಯಮಂತ್ರಿಯೊಂದಿಗೆ ನೇರ ದೂರವಾಣಿ (-ದರ್ಶನವಲ್ಲ) ಸಂಪರ್ಕ ಸಾಧಿಸಿ ಸುದ್ದಿ ಸಂಗ್ರಹದ ಪ್ರಯತ್ನದಲ್ಲಿದ್ದರು.

ವಾಚಕಿ, ಸಹಜವಾಗಿಯೆ ನ್ಯೂಸ್-ಸ್ಟುಡಿಯೊ ಸೀಮಿತವಾಗಿದ್ದಳು; ಇತ್ತ ರಾಜ್ಯದ ರಾಜಧಾನಿ ಯಲ್ಲಿ , ಭೀಕರ ಪ್ರಾಕೃತಿಕ ಪರಿಸ್ಥಿತಿಯ ಕಾರಣದಿಂದ ವಾರ್ತಾಪ್ರತಿನಿಧಿ ತನ್ನ ಸ್ಟಾರ್ ಹೋಟೆಲ್‌ನ ಕೋಣೆಗೆ ಸೀಮಿತನಾಗಿದ್ದ, ಮುಖ್ಯಮಂತ್ರಿ ತನ್ನ ಬಂಗಲೆಗೆ ಸೀಮಿತನಾಗಿದ್ದ. ಹಾಗಾಗಿ ಅವರಿಬ್ಬರ ಮಧ್ಯೆ, ನಿತ್ಯಸಹಜವಲ್ಲದಂತೆ, ಬರಿಯೆ ಟೆಲಿಫೋನ್ ಸಂಪರ್ಕವಿತ್ತೆ ಹೊರತು ಟೆಲಿವಿಷನ್ ಸಂಪರ್ಕವಿರಲಿಲ್ಲ. ಅವರ ಪ್ರಶ್ನೋತ್ತರದ ಪರಿ ಸ್ಥೂಲವಾಗಿ ಹೀಗಿತ್ತು: ವಾಚಕಿ ಮತ್ತು ಪ್ರತಿನಿಧಿಯಿಬ್ಬರೂ ಮುಖ್ಯಮಂತ್ರಿಯಲ್ಲಿ, ಚಂಡಮಾರುತ ಒರಿಸ್ಸಾ ತಟಕ್ಕೆ ಅಪ್ಪಳಿಸಿ ಐದಾರು ಗಂಟೆಗಳಾಗಿದ್ದು, ಅದರ ಹಾನಿಯ ಪ್ರಮಾಣ ಎಷ್ಟಿರಬಹುದೆಂಬ ಅಂದಾಜು ಮಾಡಲಾಗಿದೆಯೆ ಎಂದು ಕೇಳಿದರು. ಇದಕ್ಕೆ ಮುಖ್ಯಮಂತ್ರಿ, ಭೀಕರ ಬಿರುಗಾಳಿ ಮಳೆಯ ಕಾರಣ ಯಾರಿಗೂ, ತನಗೂ, ಮನೆಯ ಹೊರಗೆ ಹೋಗಲಾಗುತ್ತಿಲ್ಲವೆಂದೂ, ಬಹಳಷ್ಟು ಭಾಗಗಳಲ್ಲಿ ರಸ್ತೆ-ವಿದ್ಯುತ್-ದೂರವಾಣಿ ಸಂಪರ್ಕಗಳೆಲ್ಲ ಕಡಿದು ಹೋಗಿದ್ದರಿಂದ ನಷ್ಟದ ಪ್ರಮಾಣ ಎಷ್ಟೆಂಬುದನ್ನು ತಕ್ಷಣ ಹೇಳಲು ಸಾಧ್ಯವಿಲ್ಲವೆಂದೂ ಉತ್ತರಿಸುತ್ತಿದ್ದ. ವಾಚಕಿ ಹಾಗೂ ಪ್ರತಿನಿಧಿ, ಬಾಯಿಹಾಕಿ,'ನೀವು ಹೊರಗೆ ತಿರುಗಾಡಿ ಪರಿಸ್ಥಿತಿಯ ಪರಿಶೀಲನೆ ಮಾಡಿದ್ದೀರೊ? ನಿಮ್ಮ ಅಧಿಕಾರಿಗಳಿಂದ ಬೇರೆಬೇರೆ ಊರುಗಳಿಂದ ಏನೂ ಸುದ್ದಿ ಬಂದಿಲ್ಲವೊ? ಸಾವು ನೋವುಗಳ ಬಗ್ಗೆ, ಆಸ್ತಿಹಾನಿಯ ಬಗ್ಗೆ ನಿಮ್ಮ ಬಳಿ ಏನೂ ಮಾಹಿತಿ ಇಲ್ಲವೆ?' ಎಂದೆಲ್ಲ ಪ್ರಶ್ನೆಗಳ ಜಡಿಮಳೆಗೈದರು. ಮುಖ್ಯಮಂತ್ರಿ ನಿಸ್ಸಹಾಯಕತೆಯ ಧ್ವನಿಯಲ್ಲಿ ತನ್ನ ಮೊದಲ ಮಾತುಗಳನ್ನೆ ಪುನರುಚ್ಚರಿಸಿ,'ಕ್ಷಮಿಸಿ, ಸದ್ಯಕ್ಕೆ ಏನೂ ಮಾಹಿತಿಯಿಲ್ಲ. ಚಂಡಮಾರುತದ ರಭಸ ತಗ್ಗುವವರೆಗೂ ಯಾವುದೆ ಮಾಹಿತಿ ತಲುಪುವ ಸಾಧ್ಯತೆಯಿಲ್ಲ. ಬೀಸುಗಾಳಿಮಳೆಗೆ ನಾನಿರುವ ಮನೆಯೆ ಬೀಳುವ ಹಾಗಿದೆ. ಇಂಥ ಸನ್ನಿವೇಶದಲ್ಲಿ ಹೊರಗೆ ಕಾಲಿಡುವುದೂ ಅಸಾಧ್ಯ'ಎಂದೂ ಸೇರಿಸಿದ. ಮತ್ತೆ ಅವನ ಉತ್ತರವನ್ನು ಅರ್ಧಕ್ಕೆ ತುಂಡರಿಸಿ ವಾರ್ತಾವಾಚಕಿ ಮತ್ತು ಪ್ರತಿನಿಧಿ 'ಅಲ್ಲ, ಸ್ವಲ್ಪ ಅಂಕಿಅಂಶಗಳಾದರೂ ಇರಬೇಕಲ್ಲ? ಸತ್ತ ಜನರೆಷ್ಟು? ಕುಸಿದ ಕಟ್ಟಡಗಳೆಷ್ಟು?... ' ಎಂದು ಮತ್ತೆ ಮತ್ತೆ ಕೇಳುತ್ತ ಕೂತರು. ಕೊನೆಗೆ ಯಾವ ಮಾಹಿತಿಯೂ ಲಭ್ಯವಿಲ್ಲವೆಂದು ಮನದಟ್ಟಾದ ಮೇಲೆ, ಆ ಪ್ರಶ್ನೋತ್ತರವನ್ನು ಅಲ್ಲಿಗೆಯೆ ಕತ್ತರಿಸಿ ಅವರು ಹವಾಮಾನ ಇಲಾಖೆಯ ವಿಜ್ಞಾನಿಯೊಬ್ಬನ ಸಂಪರ್ಕ ಸಾಧಿಸಿದರು, ಪ್ರಶ್ನಿಸಿದರು: 'ನೀವು ಸುಮಾರು ಲೆಕ್ಕಾಚಾರ ಮಾಡಿ ಚಂಡಮಾರುತದ ವೇಗ-ದಿಕ್ಕು-ಬಲಗಳ ಮುನ್ಸೂಚನೆ ನೀಡಿದ್ದಿರಿ. ಈಗ ನೋಡಿದರೆ ಅದು ಕೊನೆಯ ಹಂತದಲ್ಲಿ ಬೇರೆ ಗತಿರೀತಿಗಳಲ್ಲಿ ಸಾಗಿದೆಯಲ್ಲ, ಇದರ ಬಗ್ಗೆ ಏನು ಹೇಳುತ್ತೀರಿ?' ಆ ವಿಜ್ಞಾನಿ ವೈಫಲ್ಯ-ವಿನಯಗಳ ದನಿಯಲ್ಲಿ 'ಕ್ಷಮಿಸಿ,



ಚಂಡಮಾರುತ ನಿರ್ಣಾಯಕ ಘಟ್ಟದಲ್ಲಿ ನಮ್ಮ ಎಲ್ಲ ಲೆಕ್ಕಗಳನ್ನು ಬುಡಮೇಲು ಮಾಡಿದ್ದು ನಮಗೂ ಆಘಾತ ನೀಡಿದೆ. ಆದರೆ, ನಮ್ಮ ಸದ್ಯದ ತಿಳುವಳಿಕೆಯಲ್ಲಿ, ಯಾವುದೆ ಚಂಡಮಾರುತದ ಬಗ್ಗೆ ಯಾವನೆ ತಜ್ಞ ಅತ್ಯಂತ ನಿಖರವಾದ ಮುನ್ಸೂಚನೆ ನೀಡುವುದು ಅಸಾಧ್ಯ' ಎಂದು ನುಡಿದ. ತಾವು ಕೇಳಿದ್ದೆ ಸುಳ್ಳೊ ಎಂಬ ಸಂಶಯದಲ್ಲಿ ಬಿದ್ದಂತೆ, ವಾರ್ತಾವಾಚಕಿ ಮತ್ತು ಪ್ರತಿನಿಧಿ, ಇದೇ ಪ್ರಶ್ನೋತ್ತರವನ್ನು ಇನ್ನೊಮ್ಮೆ ನಡೆಸಿ, ಕಡೆಗೆ, 'ನಮ್ಮ ವಿಜ್ಞಾನಿಗಳು ದೇಶದ ರಕ್ಷಣೆಯಲ್ಲಿ ಮತ್ತೊಮ್ಮೆ ವಿಫಲರಾಗಿದ್ದಾರೆಂದೆ ಹೇಳಬಹುದು. ಭಾರತೀಯ ವಿಜ್ಞಾನ ಸಂಸ್ಥೆಗಳು ಇನ್ನೂ ತುಂಬಾ ದೀರ್ಘವಾದ ಹಾದಿಯನ್ನು ಕ್ರಮಿಸಬೇಕಾಗಿದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಪ್ರಿಯ ವೀಕ್ಷಕರೆ, ದಯವಿಟ್ಟು ನಮ್ಮೊಂದಿಗುಳಿಯಿರಿ; ಈ ಕಮರ್ಷಿಯಲ್ ಬ್ರೇಕ್ ಕಳೆದ ಮೇಲೆ ನಾವು ನಿಮಗೆ ಈ ಶತಮಾನದ ಅತಿಘೋರ ಚಂಡಮಾರುತದ ಬಗ್ಗೆ ಇನ್ನೂ ಹೆಚ್ಚು ಸುದ್ದಿಯನ್ನು ತರಲಿದ್ದೇವೆ' ಎಂದು ವಿರಮಿಸಿದರು.

ನಮ್ಮ ವಿಜ್ಞಾನಿ ಹಾಗೂ ರಾಜಕಾರಣಿಗಳ ಸಾಮರ್ಥ್ಯ - ಅಸಾಮರ್ಥ್ಯಗಳದ್ದು ಇನ್ನೊಂದೆ ಚರ್ಚೆಯ ವಿಷಯ. ಸದ್ಯಕ್ಕೆ ನಮ್ಮ ಮಾಧ್ಯಮಗಿಣಿಗಳನ್ನೊಂದಿಷ್ಟು ನೋಡೋಣ. ಮೇಲಿನ ಪ್ರಸಂಗದಲ್ಲಿ, ಅವರು ತಹತಹಿಸು ತ್ತಿದ್ದುದು ವಾಸ್ತವಕ್ಕಿಂತ ಹೆಚ್ಚು ಮಾಹಿತಿಗಾಗಿ, ಅನುಭವಕ್ಕಿಂತ ಹೆಚ್ಚು ಅಂಕಿ ಅಂಶಗಳಿಗಾಗಿ. ವಾರ್ತಾಲೋಕದ ಈ ತಾರೆಯರಿಗೆ ಒಂದಿಷ್ಟು ಮಾಹಿತಿ ಸಿಕ್ಕರೆ ಸಾಕಿತ್ತು, ಅವರು ದಾರುಣ ದುರಂತವನ್ನೂ ಸುದ್ದಿಸಂತೆಯ ಸರಕಾಗಿ ಮಾರ್ಪಡಿಸಿ ಮಾರುವವರಿದ್ದರು.

ನಮ್ಮ ಕಾಲದ ಶ್ರೇಷ್ಠ ಚಿಂತಕರಲ್ಲೊಬ್ಬನಾದ ಇವಾನ್ ಇಲಿಚ್ ತನ್ನ ಮೇರು ಕೃತಿಯೊಂದರಲ್ಲಿ Alphabetization of the Popular Consciousness (ಜನ ಪ್ರಜ್ಞೆಯ ಅಕ್ಷರೀಕರಣ) ಎನ್ನುವ ಪರಿಕಲ್ಪನೆಯನ್ನು ಪರಿಚಯಿಸುತ್ತಾನೆ. ನಾವು ಅದನ್ನೆ ತುಸು ತಿರುಚಿ, ನಮ್ಮ ಅತ್ಯಾಧುನಿಕ ಮಾಧ್ಯಮಗಳಿಗೆ ಅನ್ವಯಿಸಿ, Statisticization of Experience (ಅನುಭವದ ಅಂಕಿಅಂಶೀಕರಣ) ಎನ್ನುವ ಪರಿಕಲ್ಪನೆಯೊಂದನ್ನು ಸೂಚಿಸುವ ಧೈರ್ಯ ಮಾಡಬಹುದೆ?

••• ••• •••

ಚಂಡಮಾರುತದ ಘೋರ ಅನುಭವದ ನಡುವೆ ಅಂಕಿಅಂಶಗಳಿಗಾಗಿ ಚಂಡಿ ಹಿಡಿದಿದ್ದ ವಾರ್ತಾಖಂಡದ ಈ ಶಿಖಾಮಣಿಗಳ ಬಗ್ಗೆ ಒಂದಿಷ್ಟು ಬೇಸರ ಒಂದಿಷ್ಟು ಕನಿಕರಗೊಂಡು ಚಾನೆಲ್ ತಿರುಗಿಸಿದರೆ ಪಕ್ಕದಲ್ಲಿಯೆ ಸಿಕ್ಕಿದ್ದು 'ಡಿಸ್ಕವರಿ'. (`Dis-

covery' ಯಲ್ಲಿ Invention ನ ಪಾತ್ರ-ಪಾಲೆಷ್ಟೆಂಬುದು ಬೇರೊಂದು ಚರ್ಚೆಯ ವಸ್ತು) ಅದೇ ವೇಳೆಯಲ್ಲಿ ಅದರಲ್ಲಿ ಇಂಥದೇ ಚಂಡಮಾರುತಗಳ ಬಗ್ಗೆ ಸಾಕ್ಷ್ಯಚಿತ್ರವೊಂದು ಬರುತ್ತಿತ್ತು. ತಿಂಗಳಿಡೀ ತಿರುತಿರುಗಿ ಪ್ರದರ್ಶನಗೊಂಡಿದ್ದ ಆ ಚಿತ್ರದ ಮತ್ತೊಂದು ಮರುಪ್ರಸಾರವಾಗಿತ್ತದು. ಪ್ರತಿವರ್ಷ ಹತ್ತಿಪ್ಪತ್ತರಂತೆ ಅಮೆರಿಕಾ-ಜಪಾನುಗಳಿಗೆ ಅಪ್ಪಳಿಸುವ ಟೈಫೂನು - ಸೈಕ್ಲೋನು - ಟೊರ್ನಾಡೊಗಳ ವಿಷಯವಾಗಿ ಆ ಕಾರ್ಯಕ್ರಮ ವಿವಿಧ ಬಗೆಯ ವಿವರಗಳನ್ನು ಕಲೆಹಾಕಿತ್ತು – ಇಂಥ ಪ್ರಾಕೃತಿಕ ವಿಕೋಪಗಳ ಕಾರಣಗಳು, ಐತಿಹಾಸಿಕ ದಾಖಲೆಗಳು, ವೈಜ್ಞಾನಿಕ ವಿಶ್ಲೇಷಣೆಗಳು, ವಾಸ್ತವಚಿತ್ರ ತುಣುಕುಗಳು, ಕಂಪ್ಯೂಟರ್ ಕಲ್ಪನೆಯ ಚಿತ್ರಗಳು ಇತ್ಯಾದಿಯಾಗಿ. ಕೆಲವೆಡೆ ಬಿರುಗಾಳಿಗಳ ಬೆನ್ನೇರಿ ಸವಾರಿ ಮಾಡಿ, ಅವುಗಳನ್ನು ಕ್ಯಾಮೆರಾದಲ್ಲಿ ಹಿಡಿಯಲು, ಯಂತ್ರದಲ್ಲಿ ಅಳೆಯಲು ಪ್ರಯತ್ನಿಸಿದವರ ಸೋಲು ಗೆಲುವುಗಳ ಚಿತ್ರಗಳು ಭಯರೋಮಾಂಚಕವಾಗಿದ್ದುವು; ಪ್ರಕೃತಿ ಮುನಿದು ಅಥವಾ ಮೈಮುರಿದು ಏಳುವ ದೃಶ್ಯಗಳು ಭಯವಿನಯಕಾರಕವಾಗಿದ್ದುವು. ಇವೆಲ್ಲದರ ನಡುವೆ ಮತ್ತೆ ಮತ್ತೆ ಅಮೆರಿಕನ್ ಮತ್ತು ಜಪಾನಿ ವಿಜ್ಞಾನಿಗಳ ಜೊತೆ ಮಾತುಕತೆ; ಅವರಿಂದ ಮತ್ತದೆ ಅಸಹಾಯಕತೆಯ ಆತ್ಮನಿವೇದನೆ: 'ಇಲ್ಲ, ಚಂಡಮಾರುತಗಳ ಹೆಜ್ಜೆಹೆಜ್ಜೆಯನ್ನೂ ಕರಾರುವಕ್ಕಾಗಿ ಲೆಕ್ಕಹಾಕಲು ಸಾಧ್ಯವಿಲ್ಲ, ಸಂಪೂರ್ಣ ಸರಿಯಾದ ಮುನ್ಸೂಚನೆ ನೀಡಲು ಸಾಧ್ಯವಿಲ್ಲ. ಸದ್ಯಕ್ಕೇನಿದ್ದರೂ ಚಂಡಮಾರುತಗಳ ವರ್ತನೆಯ ಬಗ್ಗೆ ನೂರಕ್ಕೆ ತೊಂಬತ್ತು ಭಾಗದಷ್ಟು ನಿಖರವಾಗಿ ಊಹೆ ಮಾಡಬಹುದು. ಆದರೆ ಉಳಿದ ಹತ್ತರಷ್ಟು ಭಾಗವಿದೆಯಲ್ಲ, ಅಲ್ಲಿ ಅವು ನಮ್ಮನ್ನು ಸಂಪೂರ್ಣ ದಿಕ್ಕು ತಪ್ಪಿಸುತ್ತವೆ. ಆ ಅಂತಿಮ ಘಟ್ಟದಲ್ಲೆ ಅವು ತಮ್ಮ ನಿಜ ಬಲವನ್ನು ಪ್ರಕಟಿಸುವುದು, ಇಷ್ಟೆಲ್ಲ ನಷ್ಟಕ್ಕೆ ಕಾರಣವಾಗುವುದು....'

ಘಟ್ಟನೆ ಅನಿಸಿತು: ನಮ್ಮ ವಾರ್ತಾಖಂಡದ ತಾರೆಯರು ತಮ್ಮ ಕಣ್ಣುಕಿವಿಗಳನ್ನು ತುಸು ತೆರೆದಿಟ್ಟುಕೊಂಡಿದ್ದರೆ, ಅರ್ಧ ಗಂಟೆಯ ಹಿಂದೆ ಮಾಡಿದಂತೆ, ರಾಜಕಾರಣಿ ವಿಜ್ಞಾನಿಗಳ ಜೊತೆ ಅಹಮಿಕೆಯ ಪಾಟೀಸವಾಲು ನಡೆಸುತ್ತಿರಲಿಲ್ಲ. ಅವರು ಕನ್ನಡಿಗಳನ್ನು ತುಸು ಬದಿಗಿಟ್ಟು ಕಿಟಕಿಗಳನ್ನು ತೆರೆದಿದ್ದರೆ ಸಾಕಿತ್ತು – ಆ ಪ್ರತಿನಿಧಿ ತನ್ನ ಕೋಣೆಯ ಕಿಟಕಿಯನ್ನು ತೆರೆದಿದ್ದರೆ ಸಾಕಿತ್ತು, ಅಲ್ಲೆ ಚಂಡಮಾರುತದ ಭೀಕರತೆ ಗೋಚರವಾಗುತ್ತಿತ್ತು, ನಾಯಕರ ನಿಸ್ಸಹಾಯಕತೆ ಅರ್ಥವಾಗುತ್ತಿತ್ತು; ಆ ವಾಚಕಿ ತನ್ನ 'ಟೆಲಿವಿಷನ್ ಕಿಟಕಿ'ಯಲ್ಲಿ ಇಣಿಕಿದ್ದರೆ ಸಾಕಿತ್ತು, ಪಕ್ಕದ ಬೇರೆ ಚಾನೆಲ್ಲು-ಕ್ಷೇತ್ರ-ದೇಶ-ಖಂಡಗಳು ಕಾಣಿಸುತ್ತಿದ್ದವು , ಭಾರತೀಯ ವಿಜ್ಞಾನಿಗಳದ್ದಿರಲಿ, ಅಮೇರಿಕನ್ ವಿಜ್ಞಾನಿಗಳ ಅಸಹಾಯಕತೆ ಕಾಣಿಸುತ್ತಿತ್ತು. ತಮ್ಮ ಖಂಡವೆ ಇಡಿಯ



ಜಗತ್ತು ಎಂಬ ಭ್ರಮೆ ತೊಳೆದು ಬೇರೆ ವಾಸ್ತವಗಳು ಬೇರೆ ಸತ್ಯಗಳು ತಂತಾವೆ ತೆರೆದುಕೊಳ್ಳುತ್ತಿದ್ದವು; ಒಂದಿಷ್ಟು ವಿನಯ ಮೂಡಿ ಪ್ರಜ್ಞೆ ವಿಶಾಲಗೊಳ್ಳುತ್ತಿತ್ತು. (ಆದರೆ ಇಷ್ಟೆಲ್ಲ ಮಾಡಲು ಅವರಿಗೆ ತಾಳ್ಮೆಯೆಲ್ಲಿತ್ತು ?)

ಸಮಕಾಲೀನ ದೂರದರ್ಶನದಲ್ಲಿ ದರ್ಶನದ ಗುಣವೇನಾದರೂ ಇದೆಯೆ ? ಇಲ್ಲ , ಅದು ದೂರದೃಷ್ಟಿಯಷ್ಟೆಯೆ ? Is there anything visionary about contemporary television? Or is it mere telesight?

••• ••• •••

ಗೊತ್ತು – ಖಂಡಾಂತರಗಳು ಕರಗಿ ಖಂಡಖಂಡಗಳೊಂದುಗೂಡಿ ಮೂಡುವ ಅಖಂಡ ಸ್ಥಿತಿ ಕನಸಲ್ಲಿ ಮಾತ್ರ ದರ್ಶನವಾಗುವುದು, ಇಲ್ಲ ದರ್ಶನದಲ್ಲಿ ಮಾತ್ರ ನನಸಾಗುವುದು. ಅಂಥಲ್ಲಿ ಮಾಧ್ಯಮಗಳ ಹಂಗಿಲ್ಲ. ಮತ್ತೂ ಗೊತ್ತು – ಅಂಥದೊಂದು ಸ್ಥಿತಿ ಸದ್ಯದಲ್ಲಿ ಸಾಧ್ಯವಿಲ್ಲ; ಅದು ಸಾಧ್ಯವಾದಲ್ಲಿ ಈ ಜಗ ಈಗಿರುವ ಹಾಗೆಯೆ ಉಳಿಯುವುದಿಲ್ಲ; ಅದು ಎಲ್ಲರ ಹಂಬಲವೇನಲ್ಲ. ಆದರೆ ಸದ್ಯ ಮಾಧ್ಯಮಗಳು ಕೊನೆಯ ಪಕ್ಷ ಖಂಡ-ಖಂಡಗಳ ನಡುವೆ ಕೊಂಡಿ ಬೆಸೆಯುವ ಕನಿಷ್ಠ ಕಾರ್ಯವನ್ನಾದರೂ ನಿರ್ವಹಿಸಬಾರದೆ ?

**ನೀನಾಸಮ್ ತಿರುಗಾಟ ೨೦೦೦**

ಮೊನ್ನೆ ಮಾರ್ಚ್ ತಿಂಗಳಿಗೆ ನೀನಾಸಮ್ ತಿರುಗಾಟವು ತನ್ನ ೧೬ನೇ ತಿರುಗಾಟವನ್ನು ಪೂರೈಸಿತು. ಹಿಂದಿನಂತೆಯೆ ಈ ತಿರುಗಾಟದಲ್ಲೂ ಮೂರು ನಾಟಕಗಳನ್ನು ಸಿದ್ಧಪಡಿಸಿಕೊಂಡು ಕರ್ನಾಟಕದ ಹಲವು ಊರುಗಳಲ್ಲಿ ಪ್ರದರ್ಶಿಸಲಾಯಿತು. ಈ ಸಾಲಿನ ನಾಟಕಗಳು – ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರಂ' (ನಿ: ಅಕ್ಷರ ಕೆ.ವಿ.), ಮಹೇಂದ್ರವಿಕ್ರಮವರ್ಮನ 'ಭಗವದಜ್ಜುಕೀಯಂ' (ಅನು: ಕೆ.ವಿ.ಸುಬ್ಬಣ್ಣ, ನಿ: ಕಾವಾಲಮ್ ನಾರಾಯಣ ಪಣಿಕ್ಕರ್) ಮತ್ತು ಆ್ಯಂಟನ್ ಚೆಖಾವ್‌ನ 'ಮೂವರು ಅಕ್ಕತಂಗಿಯರು' (ಅನು: ವೈದೇಹಿ, ನಿ: ಚಿದಂಬರರಾವ್ ಜಂಬೆ).

ಈ ವರ್ಷದ ನಮ್ಮ ಪ್ರದರ್ಶನಗಳಿಗೆ ಸಂಬಂಧಿಸಿದ ಕೆಲವು ಮುಖ್ಯ ಅಂಕಿ - ಅಂಶಗಳು ಹೀಗಿವೆ:

| ನಾಟಕಗಳು | ಒಟ್ಟು ಪ್ರದರ್ಶನಗಳು | ಅಂದಾಜು ಪ್ರೇಕ್ಷಕರ ಸಂಖ್ಯೆ |
|---|---|---|
| ಶ್ಮಶಾನ ಕುರುಕ್ಷೇತ್ರಂ | ೪೨ | ೧೮,೬೦೦ |
| ಭಗವದಜ್ಜುಕೀಯಂ | ೪೨ | ೨೦,೭೦೦ |
| ಮೂವರು ಅಕ್ಕತಂಗಿಯರು | ೪೧ | ೨೦, ೪೦೦ |
| ಒಟ್ಟು ಪ್ರದರ್ಶನಗಳು | ೧೨೫ | ೫೯,೭೦೦ |

ಒಟ್ಟು ಪ್ರದರ್ಶನ ಕೊಟ್ಟ ಸ್ಥಳಗಳು ೪೧ ; ಒಟ್ಟು ಪ್ರೇಕ್ಷಕರ ಸಂಖ್ಯೆ ಸುಮಾರು ೬೦ಸಾವಿರ

# ಧರ್ಮದುರಂತ:
# ವಿಷಾದ ಮುಖೇನ ವ್ಯಾಖ್ಯಾನ

ಎ.ಆರ್. ನಾಗಭೂಷಣ

ಹಿಂದೂ-ಮುಸಲ್ಮಾನ ಸಂಬಂಧಗಳ ಬಗ್ಗೆ ನಮ್ಮಲ್ಲಿ ಹಲವಾರು ಸಾಹಿತ್ಯಕೃತಿಗಳು, ರಂಗಪ್ರಯೋಗಗಳು ಸೃಷ್ಟಿಯಾಗಿವೆ. ಇತ್ತೀಚಿನ ವರ್ಷಗಳಲ್ಲಿ ಇವು ಇನ್ನೂ ಹೆಚ್ಚು ಹೆಚ್ಚಾಗಿ ಸೃಷ್ಟಿಯಾಗುತ್ತಿವೆ. ಹಿಂದೂ-ಮುಸಲ್ಮಾನರ ನಡುವಿನ ಸೌಹಾರ್ದ ವಾಸ್ತವ ರೂಪದಲ್ಲಿರದೆ ಇನ್ನೂ ಒಂದು ಆದರ್ಶವಾಗಿಯೇ ಉಳಿದಿರುವುದರಿಂದ ಈ ಬೆಳವಣಿಗೆ ಸಹಜವೇ. ಆದರ್ಶದ ಸ್ಥಿತಿ ಸೃಷ್ಟಿಕ್ರಿಯೆಯ ಹಿಂದೆ ಆರೋಗ್ಯಕರ ಪ್ರೇರಣೆಯಾಗಿರುವುದು ಅಪೇಕ್ಷಣೀಯವಾದದ್ದು. ಆದರೆ ಹೀಗೆ ಸೃಷ್ಟಿಯಾದ ಬಹುತೇಕ ಕೃತಿಗಳಲ್ಲಿ ಕೋಮುಸೌಹಾರ್ದದ ಸಂದೇಶವನ್ನು ಬಿತ್ತರಿಸಲೇಬೇಕೆಂಬ ಹಠ ಎದ್ದು ಕಾಣುತ್ತದೆ. ಹೀಗಾಗಿ ಇವು ಒಂದು ಸಿದ್ಧ ಮಾದರಿಯಲ್ಲಿ ಸಿಕ್ಕಿಕೊಂಡು ನಿರೀಕ್ಷಿತ ಹಾದಿಯಲ್ಲಿ ಸಾಗುವ ದುರ್ಬಲ ರಚನೆಗಳಾಗಿಬಿಟ್ಟಿವೆ. ಇಂತಹ ಪೂರ್ವನಿಯೋಜಿತ ಸೂತ್ರಗಳನ್ನು ಮೀರಿದ ಕೃತಿಗಳು – ಸಾಹಿತ್ಯ ಕೃತಿಗಳಾಗಲೀ ರಂಗಕೃತಿಗಳಾಗಲೀ – ತುಂಬ ಕಡಿಮೆ.

ನವೋದಯ ಕಾಲದ ಯುಗಧರ್ಮವನ್ನು ಮೈಗೂಡಿಸಿಕೊಂಡು ಸಾಹಿತ್ಯ ರಚನೆಯಲ್ಲಿ ತೊಡಗಿದ ಮುಖ್ಯರಲ್ಲಿ ಎಂ.ಆರ್. ಶ್ರೀನಿವಾಸಮೂರ್ತಿಯವರೂ ಒಬ್ಬರು. ಇವರ 'ರಂಗಣ್ಣನ ಕನಸಿನ ದಿನಗಳು' ಕನ್ನಡ ಸಾರಸ್ವತ ಲೋಕದ ಗಮನವನ್ನು ಸೆಳೆದ ಹಾಗೆ ಇವರ ನಾಟಕಗಳು ಸೆಳೆದಿಲ್ಲ. ಇವರ 'ಕಂಠೀರವ ವಿಜಯ', 'ಧರ್ಮದುರಂತ' ಮತ್ತು 'ನಾಗರಿಕ' ನಾಟಕಗಳು ನಮ್ಮ ರಂಗಭೂಮಿಯ ಒಳಗೆ ಬಂದ ಸಂದರ್ಭಗಳು ತುಂಬ ಕಡಿಮೆ. ಸಾಹಿತ್ಯಾಸಕ್ತರನ್ನೂ ರಂಗನಿರ್ದೇಶಕರನ್ನೂ ಆಕರ್ಷಿಸದ 'ಧರ್ಮದುರಂತ' ವನ್ನು ತಿಪಟೂರಿನ ಪ್ರೊಥಿಯೂ ರೆಪರ್ಟರಿಯ ಶಿಶಿರ ಪಯಣದ ಪ್ರಯೋಗಕ್ಕಾಗಿ ಆರಿಸಿಕೊಂಡಿದ್ದು ರಘುನಂದನ ಅವರ ನಿರ್ಧಾರದ ಹಿಂದೆ ಇರುವ ಧೈರ್ಯವನ್ನು ಸೂಚಿಸುತ್ತದೆ. ಇವರ ರಂಗಕೃತಿಗಳನ್ನು ಗಮನಿಸುತ್ತಾ



ಬಂದವರಿಗೆ ಇಂತಹ ನಿರ್ಧಾರ ಆಶ್ಚರ್ಯವನ್ನೇನೂ ಹುಟ್ಟಿಸುವುದಿಲ್ಲ. ಶ್ರೀರಂಗರ 'ಶಬ್ದಗುಣಂ ಆಕಾಶಂ', ಭಾಸನ 'ಪ್ರತಿಮಾ ನಾಟಕ', ಲಂಕೇಶರ 'ಗುಣಮುಖ', ಮಾಸ್ತಿಯವರ 'ಭಟ್ಟರ ಮಗಳು' ಮತ್ತು 'ಮಂಜುಳಾ', ಸಂಸರ 'ಬಿರುದಂತೆಂಬರ ಗಂಡ' ಈ ಬಗೆಯ ಆಯ್ಕೆ ರಘುನಂದನ ಅವರ ಒಂದು ವಿಶಿಷ್ಟತೆ. ಆದರೆ ಮುಖ್ಯವಾಹಿನಿಯಲ್ಲಿ ಇಲ್ಲದ ನಾಟಕಗಳನ್ನೇ ಆಯ್ಕೆ ಮಾಡಿಕೊಳ್ಳಬೇಕೆಂಬ ಶಠತ್ವ ಅವರಿಗಿಲ್ಲ. ಬ್ರೆಕ್ಟ್‌ನ ' ದ ಕಕೇಷಿಯನ್ ಚಾಕ್ ಸರ್ಕಲ್', ಷೇಕ್ಸ್‌ಪಿಯರನ 'ಕಿಂಗ್ ಲಿಯರ್', ಚೆಕಾವ್‌ನ 'ದ ತ್ರೀ ಸಿಸ್ಟರ್ಸ್' ಗಳಂತಹ ಮುಖ್ಯವಾಹಿನಿಯಲ್ಲಿರುವ ನಾಟಕಗಳನ್ನೂ ಇವರು ಎತ್ತಿಕೊಂಡಿದ್ದಾರೆ. ಇವರ ಆಯ್ಕೆ ಯಾವುದೇ ಇರಲಿ, ಅದರ ಹಿಂದೆ ನಿರ್ದಿಷ್ಟವಾದ ತಾತ್ವಿಕ ಕಾರಣಗಳಿರುತ್ತವೆ. 'ಧರ್ಮದುರಂತ' ಪಠ್ಯವನ್ನು ಆರಿಸಿಕೊಂಡಿದ್ದಕ್ಕೆ ಇಂದಿನ ಸಾಮಾಜಿಕ, ರಾಜಕೀಯ ವಿದ್ಯಮಾನಗಳ ಒತ್ತಡ ಇರುವುದು ಸ್ಪಷ್ಟವಾಗಿದೆ. ತಮ್ಮ ಪ್ರಯೋಗದ ಮೂಲಕ ಕ್ಷೋಭೆ ತುಂಬಿಕೊಂಡಿರುವ ನಮ್ಮ ಸಮಾಜದ ವಿಷಮ ವಾಸ್ತವಕ್ಕೆ ಸ್ಪಂದಿಸುವ ಉದ್ದೇಶ ರಘುನಂದನ ಅವರಿಗೆ ಇದೆ.

ಸದ್ಯದ ಗತಿಸ್ಥಿತಿಗಳಿಗಿಂತ ದೂರವಾದ ಕಾಲಮಾನದಲ್ಲಿ 'ಧರ್ಮದುರಂತ'ದ ಕ್ರಿಯೆ ಸಂಭವಿಸುತ್ತದೆ. ಈಸ್ಟ್ ಇಂಡಿಯಾ ಕಂಪನಿ ಸರ್ಕಾರ ನಾಲ್ಕನೆಯ ಮೈಸೂರು ಯುದ್ಧದಲ್ಲಿ ಟೀಪೂಸುಲ್ತಾನನನ್ನು ಸೋಲಿಸಿ ಮೈಸೂರು ರಾಜ್ಯವನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ಒಪ್ಪಿಸಿದ ಚಾರಿತ್ರಿಕ ಹಿನ್ನೆಲೆ ಈ ನಾಟಕಕ್ಕಿದೆ. ಇನ್ನೂರು ವರ್ಷಗಳ ರಾಜಕೀಯ ಪರಿಸ್ಥಿತಿಗೆ ಪ್ರತಿಕ್ರಿಯಿಸುವಾಗ ಹೆಚ್ಚು ವಸ್ತುನಿಷ್ಠವಾಗಿರಲು ಸಾಧ್ಯ. ಆದರೆ ರಾಜಕೀಯ ವಿದ್ಯಮಾನಗಳು ಈ ಕೃತಿಯ ಕೇಂದ್ರವಸ್ತುವಲ್ಲ. ರಾಜಕೀಯ ಸುಳಿಗಳಲ್ಲಿ ಸಿಲುಕಿಕೊಂಡ ಅಸಹಾಯಕ ಸಾಮಾನ್ಯ ಜನರ ಬದುಕು ಇಲ್ಲಿ ಮುಖ್ಯ. ಇವರ ಜೀವನ ಹಿಂದೂ ಮತ್ತು ಇಸ್ಲಾಂ ಧರ್ಮಗಳೊಡನೆ ತಳಕು ಹಾಕಿಕೊಂಡಿರು ವುದರಿಂದ ಪರಿಸ್ಥಿತಿ ಸಂಕೀರ್ಣವಾಗಿದೆ. ಬ್ರಾಹ್ಮಣ ರಾಮರಾಯ ಖಾನ್‌ಜಹಾನ್ ಖಾನ್‌ನಾಗಿ ಮತಾಂತರ ಹೊಂದಿ ನಂತರ ಪುನಃ ಹಿಂದುತ್ವ ಮತ್ತು ಬ್ರಾಹ್ಮಣ್ಯವನ್ನು ಪಡೆಯಬೇಕೆಂದು ಹಂಬಲಿಸುವುದು ಸರಳವಾದ ಕ್ರಿಯೆಯಲ್ಲ. ಟೀಪೂನಿಂದ ಬಿದನೂರು ಸಂಸ್ಥಾನದ ಪತನ, ಕಂಪನಿ ಸರ್ಕಾರದಿಂದ ಟೀಪೂನ ಸೋಲು, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಆಳ್ವಿಕೆ ಈ ರಾಜಕೀಯ ಸ್ಥಿತ್ಯಂತರಗಳಿಗೂ ರಾಮರಾಯನ ಬದುಕಿನ ಏರಿಳಿತಗಳಿಗೂ ಸೂಕ್ಷ್ಮ ಸಂಬಂಧಗಳಿವೆ. ಒಬ್ಬ ವ್ಯಕ್ತಿಯ ಆಯ್ಕೆ ಕೇವಲ ವ್ಯಕ್ತಿಗತವಾದದ್ದಲ್ಲ, ಅದಕ್ಕೂ ಸುತ್ತಲ ಆವರಣದ ಬದಲಾವಣೆ ಗಳಿಗೂ ಇರುವ ಸಂಕೀರ್ಣ ಸಂಬಂಧವನ್ನು ರಘುನಂದನ

ಸಮರ್ಪಕವಾಗಿ ಗುರುತಿಸಿದ್ದಾರೆ. ಧರ್ಮ ಮತ್ತು ರಾಜಕೀಯ ಮನುಷ್ಯರ ಸ್ವಾತಂತ್ರ್ಯ ಮತ್ತು ನಿರ್ಧಾರಗಳನ್ನು ನಿಯಂತ್ರಿಸುವ ಪರಿಯನ್ನು ಅವರು ಪರಿಶೀಲಿಸಿದ್ದಾರೆ.

ರಘುನಂದನ ಅವರ ನಿರ್ದೇಶನಾ ಕ್ರಮದ ಒಂದು ಪ್ರಧಾನ ಲಕ್ಷಣವೆಂದರೆ ಅವರ ರಂಗಕೃತಿಗಳಲ್ಲಿ ಸುಸ್ಪಷ್ಟವಾಗಿ ವ್ಯಕ್ತವಾಗುವ ಬೌದ್ಧಿಕತೆ. ಇವರ ಸಮಕಾಲೀನ ರಂಗನಿರ್ದೇಶಕರಾದ ಅಕ್ಷರ, ಜಂಬೆ, ಐತಾಳ ಮತ್ತು ಬಸವಲಿಂಗಯ್ಯ ಅವರ ಕೃತಿಗಳಲ್ಲಿ ಇರುವುದಕ್ಕಿಂತ ಹೆಚ್ಚಿನ ಬೌದ್ಧಿಕತೆ ಇವರ ಕೃತಿಗಳಲ್ಲಿದೆ. ತಮ್ಮ ಕೃತಿಗಳು ಕೇವಲ ರಂಜನೆಗೋ ತೆಳುವಾದ ವೈಚಾರಿಕತೆಗೋ ಸೀಮಿತಗೊಳ್ಳದೆ ಹೊಸ ವಾಗ್ವಾದಗಳನ್ನು ಹುಟ್ಟುಹಾಕಬೇಕೆಂಬ ಅಪೇಕ್ಷೆ ಇವರಿಗಿದೆ. ಆದ್ದರಿಂದಲೇ ಇವರು ಸುಲಭದ ಮಾರ್ಗಗಳನ್ನು ನಿರಾಕರಿಸಿ ಪ್ರಜ್ಞಾಪೂರ್ವಕವಾಗಿ ಕಷ್ಟದ ಹಾದಿಯನ್ನು ಹಿಡಿಯುತ್ತಾರೆ. ಜಾನಪದೀಯ ಮೂಲದ್ರವ್ಯಗಳು, ಹಾಡು, ಕುಣಿತ, ವೈಭವದ ಸಜ್ಜಿಕೆಗಳನ್ನು ಆಶ್ರಯಿಸುವುದಿಲ್ಲ. ಇವರ 'ಎತ್ತ ಹಾರಿದೆ ಹಂಸ', 'ವೇಟಿಂಗ್ ಫಾರ್ ಗಾಡೋ' ಮತ್ತು 'ದಿ ತ್ರೀ ಸಿಸ್ಟರ್ಸ್'ಗಳನ್ನು ನೆನೆದರೆ ಈ ಮಾತು ಸ್ಪಷ್ಟವಾಗುತ್ತದೆ. ಇಲ್ಲಿ ಗಮನಿಸಬೇಕಾದ ಒಂದು ಸಂಗತಿ ಎಂದರೆ ಇವರು ಮಂಡಿಸುವ ದೃಷ್ಟಿಕೋನ ಕೇವಲ ಸೈದ್ಧಾಂತಿಕ ಚರ್ಚೆಯ ಒಂದು ಭಾಗವಾಗಿರುವುದಿಲ್ಲ. ಬದಲಾಗಿ, ಇವರ ರಂಗಕೃತಿಗಳ ಒಂದು ಅವಿಭಾಜ್ಯ ಅಂಗವಾಗಿದ್ದು ಇವರ ಸೌಂದರ್ಯಾತ್ಮಕ ಕಾಳಜಿಗಳೊಂದಿಗೆ ಮಿಳಿತಗೊಂಡಿರುತ್ತವೆ. 'ಧರ್ಮದುರಂತ'ದಲ್ಲಿ ಹಿಂದೂ-ಮುಸಲ್ಮಾನ ಸಂಬಂಧಗಳ ತೆಳು ಚಿತ್ರಗಳಾಗಲೀ ಎರಡು ಧರ್ಮಗಳ ಕ್ಷೀಣ ವಿವರಗಳಾಗಲೀ ಇಲ್ಲ. ಖಾನ್, ಲಲಿತೆ, ಅಯಷೆ ಈ ಮೂವರ ಬದುಕು ಅವರನ್ನು ಮೀರಿದ ಅನೇಕ ಗೊಂದಲಗಳಲ್ಲಿ ಸಿಕ್ಕಿಕೊಂಡಾಗ ಅವರ ಪಾಡು ಮತ್ತು ದುರಂತಗಳ ಬಗ್ಗೆ ಇಲ್ಲಿ ಗಾಢವಾದ ವಿಷಾದವಿದೆ. ಇವರ ನೋವು, ಇದಕ್ಕೆ ಕಾರಣವಾದ ಧರ್ಮ, ಸಾಮಾಜಿಕ-ರಾಜಕೀಯ ಅವಸ್ಥಾಂತರ ಇವೆಲ್ಲ ಈ ಪ್ರಯೋಗದಲ್ಲಿ ಬೇರ್ಪಡಿಸಲಾಗದಂತಹ ಮೂರ್ತರೂಪವನ್ನು ಪಡೆದಿವೆ.

'ಧರ್ಮದುರಂತ' ರಂಗಕೃತಿಯ ಒಂದು ಬಹಳ ಮುಖ್ಯವಾದ ಅಂಶವೆಂದರೆ ಮಣ್ಣಿನ ಮನುಷ್ಯನ ಪರಿಕಲ್ಪನೆ. ಎಂ.ಆರ್. ಶ್ರೀ. ಅವರ ಲಿಖಿತ ಕೃತಿಯಲ್ಲಿ ಇಲ್ಲದ ಈತನ ಬಗ್ಗೆ ಸ್ವಲ್ಪ ವಿವರಣೆ ಅವಶ್ಯಕ. ಕೌಪೀನ ಮಾತ್ರ ಧರಿಸಿದ ಈತ ಅಡಿಯಿಂದ ಮುಡಿಯವರೆಗೆ ಮಣ್ಣನ್ನು ಮೆತ್ತಿಕೊಂಡಿರುತ್ತಾನೆ. ಈತ ಪ್ರಯೋಗದ ಉದ್ದಕ್ಕೂ ವೇದಿಕೆಯ ಎಡ ಮುಂಬದಿಯಲ್ಲಿ ಕುಳಿತಿರುತ್ತಾನೆ. ಮುಂದೆ ಇರುವ ದೊಡ್ಡ ಪಾತ್ರೆಯಿಂದ ನೀರನ್ನು ಚೊಂಬಿನಲ್ಲಿ ತೆಗೆಯುತ್ತಾ ವಾಪಸ್ಸು ಪಾತ್ರೆಗೆ ಸುರಿಯುತ್ತಾ ಇರುತ್ತಾನೆ. ಸದಾ ಮುಗುಳ್ನಗುತ್ತಾ ಇರುವ ಈತ ಆಗಾಗ್ಗೆ ಎದ್ದು ನೀರನ್ನು ಚುಮುಕಿಸಿ,



ಕಷ್ಟದಲ್ಲಿದ್ದವರಿಗೆ ನೀರು ನೀಡಿ ತನ್ನ ಸ್ಥಾನಕ್ಕೆ ಮರಳುತ್ತಾನೆ. ನೇರವಾಗಿ ಯಾವ ಕ್ರಿಯೆಯಲ್ಲಿಯೂ ಪಾಲ್ಗೊಳ್ಳುವುದಿಲ್ಲ; ಒಂದೇ ಒಂದು ಮಾತನ್ನೂ ಆಡುವುದಿಲ್ಲ. ಇವನಿಗೆ, ಇವನ ರೂಪಕ್ಕೆ, ಮೈಮೇಲಿನ ಮಣ್ಣಿಗೆ, ಸುರಿಯುವ ನೀರಿಗೆ ಸಾಂಕೇತಿಕ ಅರ್ಥಗಳಿವೆ. ಪ್ರಕೃತಿಯ ಒಂದು ಭಾಗವಾದ ಇವನು ತನ್ನ ಸಮ್ಮುಖದಲ್ಲಿ ಸಂಭವಿಸುವ ಎಲ್ಲ ಕ್ರಿಯೆಗಳಿಗೆ, ಸಕಲ ದುರಂತಗಳಿಗೆ ಸಾಕ್ಷಿಪ್ರಜ್ಞೆಯಂತೆ ಇರುತ್ತಾನೆ. ನೊಂದವರಿಗೆ ಸಹಾಯಹಸ್ತವನ್ನು ನೀಡುವ ಇವನು ಒಂದು ರೀತಿಯಲ್ಲಿ ಸರ್ವವ್ಯಾಪಿ ಮತ್ತು ಸರ್ವಜ್ಞ. ಇವನು ನಿರಂತರವಾಗಿ ಸುರಿಯುವ ನೀರು ಯಾರನ್ನೂ ಲೆಕ್ಕಿಸದೆ ಹರಿಯುವ ಕಾಲವನ್ನು ಪ್ರತಿನಿಧಿಸುತ್ತದೆ. ಹೀಗೆ ಮಣ್ಣಿನ ಮನುಷ್ಯನ ಪರಿಕಲ್ಪನೆ 'ಧರ್ಮದುರಂತ'ದ ಅರ್ಥಶ್ರೀಮಂತಿಕೆಯನ್ನು ಹೆಚ್ಚಿಸುತ್ತದೆ.

ಈ ಮಣ್ಣಿನ ಮನುಷ್ಯನ ಪರಿಕಲ್ಪನೆ ಅತಿವಾಸ್ತವವಾದೀ ನೆಲೆಯಲ್ಲಿ ರೂಪುಗೊಂಡಿದ್ದು. ಸಾಮಾನ್ಯವಾಗಿ ರಘುನಂದನ ಅವರ ಕೃತಿಗಳು ವಾಸ್ತವವಾದೀ ನೆಲೆಯನ್ನು ಮೀರಿ ಮೈತಳೆಯುತ್ತವೆ. 'ಧರ್ಮದುರಂತ' ಕೂಡಾ ಇದಕ್ಕೆ ಹೊರತಲ್ಲ. ರಂಗವಿನ್ಯಾಸದಲ್ಲಾಗಲೀ ಅಭಿನಯ ಶೈಲಿಯಲ್ಲಾಗಲೀ ದೃಶ್ಯ ಸಂಯೋಜನೆಯಲ್ಲಾಗಲೀ ಬೆಳಕಿನ ವ್ಯವಸ್ಥೆಯಲ್ಲಾಗಲೀ ರಘುನಂದನ ಅವರು ವಾಸ್ತವವಾದೀ ಚೌಕಟ್ಟಿಗೆ ಕಟ್ಟುಬಿದ್ದಿಲ್ಲ. ಒಂದು ಪುಟ್ಟ ಮರವನ್ನು ಬಳಸಿ ಸೂಚ್ಯವಾಗಿ ಯೋಜಿಸಿದ ಸಜ್ಜಿಕೆ, ಶೈಲೀಕೃತವಾದ ಅಭಿನಯ, ಚಿತ್ರಕಲೆ-ಶಿಲ್ಪಕಲೆಗಳನ್ನು ಹೋಲುವ ಸಂಯೋಜನೆ ಇವು ಕೇವಲ ಆಲಂಕಾರಿಕವಾಗದೆ ರಂಗಕೃತಿ ಹೊಮ್ಮಿಸುವ ಸಾಮಾಜಿಕ, ಮಾನವೀಯ ಧ್ವನಿಗಳಿಗೆ ಮೂಲಸೆಲೆಯಾಗಿದ್ದವು. ಅತ್ಯಂತ ಕ್ರಿಯಾಶೀಲವಾದ ಒಂದು ಸಂಯೋಜನೆ ಪ್ರಯೋಗದ ಅಂತ್ಯದಲ್ಲಿತ್ತು. ಖಾನ್, ಲಲಿತೆ, ಅಯಷೆಯರು ಒಬ್ಬರನ್ನೊಬ್ಬರು ಹಿಡಿದುಕೊಂಡು ಮಧ್ಯ ವೇದಿಕೆಯ ಮುಂಭಾಗದಲ್ಲಿ ಪ್ರಾಣವನ್ನು ಕಳೆದುಕೊಳ್ಳುವ ದೃಶ್ಯದ ಸಂಯೋಜನೆ ಈ ಮೂವರ ಸಂಬಂಧಗಳ ಸ್ವರೂಪವನ್ನೂ ಧರ್ಮ, ರಾಜಕಾರಣಗಳಿಂದ ನಲುಗಿಹೋದ ಇವರ ದುರಂತವನ್ನೂ ತೀವ್ರವಾಗಿ ಪ್ರಕಟಿಸಿತು. ಇಷ್ಟೇ ಅರ್ಥಪೂರ್ಣವಾದ ಸಂಯೋಜನೆ ಖಾನ್ ಪುನಃ ಹಿಂದುತ್ವ ಮತ್ತು ಬ್ರಾಹ್ಮಣ್ಯವನ್ನು ಪಡೆಯಲು ಬಯಸುವ ದೃಶ್ಯದಲ್ಲಿತ್ತು. ದಿವಾನ್ ಪೂರ್ಣಯ್ಯನ ಸಹಾಯದಿಂದ ಖಾನ್ ತರ್ಕಪಂಡಿತರನ್ನು ಭೇಟಿಮಾಡಿ ತನ್ನ ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ. ವೇದಿಕೆಯ ಮೇಲೆ ಮುಖ್ಯ ಸ್ಥಾನಗಳಲ್ಲಿ ಪಂಡಿತರು, ಅವರಿಗೆ ಎದುರು ನಿಂತ ಖಾನ್, ಒಂದು ಬದಿಯಲ್ಲಿ ಕುಳಿತ ಪೂರ್ಣಯ್ಯ – ಈ ಸಂಯೋಜನೆ ಖಾನ್‌ನ ದೈನ್ಯ, ಪೂರ್ಣಯ್ಯನ ಅಸಹಾಯಕತೆ ಮತ್ತು ಪಂಡಿತರ ಒಣ ಠೇಂಕಾರಗಳನ್ನು ಸ್ಪಷ್ಟವಾಗಿ ಸೂಚಿಸಿತು.

‘ಧರ್ಮದುರಂತ’ ದ ಮೂಲ ಆಶಯಗಳಿಗೂ ಸಂಗೀತ ಸಂಯೋಜನೆಗೂ ಇದ್ದ ಸಮರ್ಪಕ ಹೊಂದಾಣಿಕೆಯಿಂದಾಗಿ ರಂಗಕೃತಿಯ ಅರ್ಥ ವಿಸ್ತರಣೆ ಸಾಧ್ಯವಾಯಿತು. ಪ್ರಯೋಗದ ಕ್ರಿಯೆ ಪ್ರಾರಂಭವಾಗುವ ಮೊದಲೇ ‘ನಾನಾಬೆ ಬದುಕು ನಾಟಕಮು’ ಎಂಬ ಕೀರ್ತನೆ ಹಿನ್ನೆಲೆಯಿಂದ ಮೂಡಿಬಂದಿತು. ಪ್ರಯೋಗದಲ್ಲಿ ಗ್ರೆಗೋರಿಯನ್ ಚಾಂಟ್ಸ್, ಮೋಂತೆವರ್ದಿ ಸಂಗೀತ ಕೃತಿ, ಕುರಾನ್ ವಾಚನ, ಸುಬ್ಬುಲಕ್ಷ್ಮಿ ಹಾಗೂ ಕಿಶೋರಿ ಅಮೋನ್ಕರ್ ಅವರ ಗಾಯನ ಇವುಗಳನ್ನು ಭಾವ ತೀವ್ರತೆಯುಳ್ಳ ಸನ್ನಿವೇಶಗಳಲ್ಲಿ ಮತ್ತು ಕೆಲವೆಡೆ ದೃಶ್ಯ ಅಥವಾ ಕ್ರಿಯೆಗಳ ನಡುವಿನ ಅರ್ಥಪೂರ್ಣ ಜೋಡಣೆಗಾಗಿ ಬಳಸಿದ್ದರು. ಮೇಲುನೋಟಕ್ಕೆ ಇದು ಭಕ್ತಿಪ್ರಧಾನ ಸಂಗೀತವೆನಿಸಿದರೂ ಆಳದಲ್ಲಿ ಇದು ಆಧ್ಯಾತ್ಮಿಕ ಭಾವವನ್ನು ಹೊಮ್ಮಿಸುತ್ತಾ ಪ್ರಯೋಗಕ್ಕೆ ಗಾಢತೆಯನ್ನೂ ಪುಷ್ಟಿಯನ್ನೂ ನೀಡಿತು.

ಹಿಂದೂ-ಮುಸಲ್ಮಾನರ ಸಂಬಂಧದ ಬಗ್ಗೆ ನಮ್ಮಲ್ಲಿ ಲಭ್ಯವಿರುವ ಯಾವ ಮಾದರಿಯನ್ನೂ ಅನುಕರಿಸದೇ ಇದ್ದದ್ದು ‘ಧರ್ಮದುರಂತ’ದ ಒಂದು ವಿಶೇಷ. ಸುಲಭದ ತೀರ್ಮಾನಗಳಿಗೆ ಬರದೆ, ಯಾವುದನ್ನೂ ಸರಳೀಕರಿಸದೆ, ಕೋಮು ಸೌಹಾರ್ದದ ಸಂದೇಶವನ್ನು ಹೇಗಾದರೂ ನೀಡಲೇಬೇಕೆಂಬ ಚಪಲಕ್ಕೆ ಒಳಗಾಗದೆ, ಧರ್ಮನಿರಪೇಕ್ಷತೆಯ ಚಿಂತನೆಯನ್ನು ಅಬ್ಬರದಿಂದ ಸಾರದೆ ಈ ಕೃತಿ ವಿಶಿಷ್ಟವೆನಿಸಿತು. ಮಡುಗಟ್ಟಿದ ನೋವು, ವಿಷಾದಗಳಿಂದ ನಿಲುವುಗಳನ್ನು ಸೂಕ್ಷ್ಮವಾಗಿ ಪ್ರಕಟಿಸಿತು. ಈ ವಿಷಾದ ನಿರಾಶಾವಾದ ಅಥವಾ ಸಿನಿಕತನಗಳ ಕಡೆಗೆ ಕಿಂಚಿತ್ತೂ ಹೊರಳದೆ ಧರ್ಮದ ಕಟ್ಟುಪಾಡನ್ನು ಮುರಿದ, ರಾಜಕಾರಣದ ಹಂಗನ್ನು ತೊರೆದ ಸರಳ, ಸಮರಸದ ಬದುಕಿನ ಪರವಾದ ಧೋರಣೆಯನ್ನು ಧ್ವನಿಸಿತು. ಜೊತೆಗೆ ಮೌಲಾನನ ಕ್ರಿಯೆ ಮತ್ತು ಮಾತುಗಳ ಮೇಲೆ ಭಾವಾತಿರೇಕತೆಯಿಲ್ಲದ ಒತ್ತನ್ನು ನೀಡುವ ಮೂಲಕ ಈ ಕೃತಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಿತು.

ನಮ್ಮ ವರ್ತಮಾನ ಸಮಾಜದ ಭೀಕರ ವಾಸ್ತವದ ಒಡಲಿನಿಂದ ಹುಟ್ಟಿದ ‘ಧರ್ಮದುರಂತ’ ರಂಗಕೃತಿ ಅದಕ್ಕೆ ತೀವ್ರವಾಗಿ ಸ್ಪಂದಿಸುತ್ತಾ ಅದನ್ನು ಸೂಕ್ಷ್ಮವಾಗಿ ಅರ್ಥೈಸಿತು. ೧೯೪೭ರಲ್ಲಿ ಬೆಳಕುಕಂಡ ಲಿಖಿತ ಕೃತಿಯನ್ನು ಆಧಾರವಾಗಿಟ್ಟುಕೊಂಡು ಸಮಕಾಲೀನ ಸಾಮಾಜಿಕ, ರಾಜಕೀಯ ವಿದ್ಯಮಾನಗಳತ್ತ ಪರೋಕ್ಷವಾಗಿ ದೃಷ್ಟಿ ಹರಿಸಿತು. ಸೌಮ್ಯವಾದ ಆದರೆ ಗಾಢವಾದ ನಿಲುವುಗಳಿಂದ ನಮ್ಮ ಅಂತರಂಗದಲ್ಲಿ ಹುದುಗಿರುವ ಪೂರ್ವಗ್ರಹಗಳ ಬಗ್ಗೆ, ಹೊರ ಪ್ರಪಂಚದ ಉದ್ವಿಗ್ನತೆ, ಹಿಂಸೆಗಳ ಬಗ್ಗೆ ಚಿಂತಿಸಲು ಪ್ರೇರೇಪಿಸಿತು. ಇವು ಒಂದು ಸಾರ್ಥಕ ರಂಗಕೃತಿಯಲ್ಲಿ ಅಂತರ್ಗತವಾಗಿರುವ ಗುಣಲಕ್ಷಣಗಳು.


**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

**ಮಹಾಮಾಯಿ** (ನಾಟಕ - ಚಂದ್ರಶೇಖರ ಕಂಬಾರ) ರೂ. ೬೦
**ಸಕ್ಕರೆ ಗೊಂಬೆ** (ನಾಟಕ - ವಿವೇಕ ಶಾನಭಾಗ) ರೂ. ೫೫
**ಎರಡು ರಷ್ಯನ್ ನೀಳ್ಗತೆಗಳು**
(ಟಾಲ್‌ಸ್ಟಾಯ್ ಮತ್ತು ಗೊಗೋಲ್ ಅನುವಾದ - ಟಿ.ಪಿ. ಅಶೋಕ) ರೂ. ೫೫
**ರಂಗಪ್ರಯೋಗ**
(ಅಭಿನಯ, ರಂಗತಂತ್ರ, ರಂಗಸಿದ್ಧತೆಯ ಪರಿಚಯ - ಅಕ್ಷರ ಕೆ.ವಿ.) ರೂ.೨೦೦
**ಬಹುಮುಖ** (ಅಕ್ಷರ ಚಿಂತನ ಮಾಲೆ -
ಮನು ಚಕ್ರವರ್ತಿ, ಅನು: ಎಲ್. ಜಿ. ಮೀರಾ) ರೂ. ೫೫
**ಜಾಗತಿಕ ಪರಿಸರ ಚರಿತ್ರೆ** (ಅಕ್ಷರ ಚಿಂತನ ಮಾಲೆ -
ರಾಮಚಂದ್ರ ಗುಹಾ, ಅನು: ಮಾಧವ ಐತಾಳ) ರೂ. ೭೫

**ಹೊಸ ಪ್ರಕಟಣೆಗಳು**

**ರಂಗದಲ್ಲಿ ಅಂತರಂಗ** (ಸ್ತಾನಿಸ್ಲಾವ್‌ಸ್ಕಿಯ ಆ್ಯನ್ ಆ್ಯಕ್ಟರ್ ಪ್ರಿಪೇರ್ಸ್
ಅನುವಾದ: ಕೆ.ವಿ. ಸುಬ್ಬಣ್ಣ) ರೂ. ೧೬೦
**ಅಮ್ಮಚ್ಚಿಯೆಂಬ ನೆನಪು** (ಕಥೆಗಳು - ವೈದೇಹಿ) ರೂ. ೮೦
**ಸಿಂಗಾರೆವ್ವ ಮತ್ತು ಅರಮನೆ**
(ಕಾದಂಬರಿ-ಮರುಮುದ್ರಣ- ಚಂದ್ರಶೇಖರ ಕಂಬಾರ) ರೂ. ೮೫
**ಕಾರಂತ ಚಿಂತನ**
(ಕಡಲಾಚೆಯ ಕನ್ನಡಿಗರಿಂದ ಕಾರಂತರ ಕುರಿತ ಬರಹಗಳು) ರೂ. ೧೫೦
**ಕವಿರಾಜಮಾರ್ಗ ಮತ್ತು ಕನ್ನಡಜಗತ್ತು** (ಕೆ.ವಿ.ಸುಬ್ಬಣ್ಣ) ರೂ. ೭೦
**ಭವ** (ಕಾದಂಬರಿ-ಮರುಮುದ್ರಣ- ಯು.ಆರ್. ಅನಂತಮೂರ್ತಿ) ರೂ. ೬೦
**ಒಳಸೊನ್ನೆ ಹೊರಸೊನ್ನೆ**
(ಕವನಗಳು - ಕೆ.ಎಚ್. ಶ್ರೀನಿವಾಸ್) ರೂ. ೪೫
**ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ** (ನಾಟಕ - ಕೆ.ವಿ. ಅಕ್ಷರ) ರೂ. ೪೫
**ಯು.ಆರ್. ಅನಂತಮೂರ್ತಿ: ಒಂದು ಅಧ್ಯಯನ** (ಟಿ.ಪಿ. ಅಶೋಕ) ರೂ. ೫೦
**ಮಾಮಾಮೋಶಿ** (ಮೋಲಿಯೆರ್ ಅನುವಾದ - ಕೆ.ವಿ. ಸುಬ್ಬಣ್ಣ) ರೂ. ೪೫
**ಜತೆಗಿರುವನು ಚಂದಿರ** (ನಾಟಕ - ಜಯಂತ ಕಾಯ್ಕಿಣಿ) ರೂ. ೫೦
**ಯಾವ ಶಬ್ದದ ಮಾಯೆ** (ಕವಿತೆಗಳು - ವರದೇಶ ಹಿರೆಗಂಗೆ) ರೂ. ೪೦

**ಮಾತುಕತೆ ೫೮**
ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭
ದೂರವಾಣಿ: ೦೮೧೮೩-೬೫೬೪೬
ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ
(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಜಸವಂತ ಜಾಧವ್
ಸಹ ಸಂಪಾದಕ: ವೆಂಕಟರಮಣ ಐತಾಳ ಬಿ. ಆರ್.

ವಾರ್ಷಿಕ ವರ್ಗಣಿ: ಇಪ್ಪತ್ತೈದು ರೂಪಾಯಿ
ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು
ಮುದ್ರಣ: ಅಶ್ವಿನಿ ಗ್ರಾಫಿಕ್ಸ್, ಅರಳೇಪೇಟೆ, ಬೆಂಗಳೂರು

**ಮೇ ೨೦೦೧ ವರ್ಷ ಹದಿನೈದು ಸಂಚಿಕೆ ಎರಡು**

**೧. ಗಾಂಧೀಯ ಆರ್ಥಿಕ ತತ್ವಶಾಸ್ತ್ರದ ಪ್ರಸ್ತುತತೆ**
ಟಿ.ಎಸ್. ರಾಘವೇಂದ್ರ ಪುಟ ೨
**೨. ಪ್ರಶ್ನೋತ್ತರದ ಮತ್ತೊಂದಿಷ್ಟು ಮಾದರಿಗಳು**
ಜಸವಂತ ಜಾಧವ ಪುಟ ೧೨
**೩. ಧರ್ಮದುರಂತ: ವಿಷಾದ ಮುಖೇನ ವ್ಯಾಖ್ಯಾನ**
ಎ.ಆರ್. ನಾಗಭೂಷಣ ಪುಟ ೪೩

**MAATHUKATHE** MAY. 2001 (YEAR 15 ISSUE 2)
NINASAM QUARTERLY NEWS LETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.25(TWENTY FIVE ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**

**MYSORE SALES INTERNATIONAL LIMITED**

MSIL HOUSE
36, CUNNINGHAM ROAD,
BANGALORE - 560 052

Lekhak and Vidya Notebooks & Lekhak Stationery
Hotspring Solar Water Heaters
Karnataka State Lottery Tickets
Distribution of Liquor
Management of Bangalore Air Cargo Complex
Homaker Hire Purchase Scheme
Tours & Travels
Export of Sandal Oil Spices

Concern for the Consumer

**MSIL**
MYSORE SALES INTERNATIONAL LIMITED
MSIL HOUSE
36, CUNNINGHAM ROAD,
BANGALORE - 560 052